ಲಕ್ಷ್ಮೀಶ ಕವಿಯ ಜೈಮಿನಿ ಭಾರತ ಓದು

ಸೀತಾ ಪರಿತ್ಯಾಗ ಪ್ರಸಂಗ



ಸಿ ಪಿ ನಾಗರಾಜ

ಲಕ್ಷ್ಮೀಶ ಕವಿಯ ಜೈಮಿನಿ ಭಾರತ ಓದು

ಸೀತಾ ಪರಿತ್ಯಾಗ ಪ್ರಸಂಗ

ಸಿ.ಪಿ. ನಾಗರಾಜ

ನಾಗು ಸ್ಮಾರಕ ಪ್ರಕಾಶನ
75, 5ನೆಯ ಕ್ರಾಸ್, ‘ ಎ ‘ ಬ್ಲಾಕ್, ಕ್ರಿಶ್ಣ ಗಾರ್ಡನ್
ಆರ್.ವಿ.ಕಾಲೇಜು ಪೋಸ್ಟ್, ಬೆಂಗಳೂರು–560 059

SITA PARITYAGA PRASANGA
by C.P.Nagaraja, Published by Nagu Smaraka Prakashana,
75, 5th Cross, 'A' Block, Krishna Garden, R.V.College Post,
Bengaluru-560 059
Mobile: 9986347521

First Edition	:	2024
Page	:	106
Price	:	**Rs.130**
Paper	:	Stora Creamy
Size	:	Demy 1/8
Copies	:	500
Copy right	:	Author
ಮುಖಪುಟ ವಿನ್ಯಾಸ	:	ಓಂ ಶಿವಪ್ರಕಾಶ್, ಟೆಕ್ ಫಿಜ್ ಇಂಕ್, ಬೆಂಗಳೂರು ChatGPT & DAL-E ಸಹಯೋಗದೊಂದಿಗೆ
ಪುಟ ವಿನ್ಯಾಸ	:	ಕೆ.ಆರ್. ಹರೀಶ್ 8553184584

ಪ್ರತಿಗಳು ದೊರೆಯುತ್ತವೆ

ಆರ್.ಸುಧೀಂದ್ರ ಕುಮಾರ್
9, 20ನೆಯ ಮೈನ್, 3ನೆಯ ಕ್ರಾಸ್
ವಿಜಯನಗರ 2ನೆಯ ಹಂತ
ಹಂಪಿ ಸರ್ಕಲ್ ಹತ್ತಿರ, ಮೈಸೂರು–570017
ಮೊ. 8892626269

ನನ್ನ ನುಡಿ

ಲಕ್ಷ್ಮೀಶ ಕವಿಯ ಜೈಮಿನಿ ಭಾರತ ಕಾವ್ಯದಲ್ಲಿ ನಿರೂಪಣೆಗೊಂಡಿರುವ ಸೀತಾ ಪರಿತ್ಯಾಗದ ಸನ್ನಿವೇಶವನ್ನು ನಾಟಕ ರೂಪಕ್ಕೆ ಅಳವಡಿಸಿ 'ಸೀತಾ ಪರಿತ್ಯಾಗ ಪ್ರಸಂಗ' ಎಂಬ ಬರಹವನ್ನು ರಚಿಸಿ, ಕಾವ್ಯದ ನುಡಿರಚನೆಗಳಿಗೆ ಟಿಪ್ಪಣಿಯನ್ನು ಬರೆದಿದ್ದೇನೆ. ಗುರುಗಳಾದ ಕೆ.ವಿ.ನಾರಾಯಣ ಅವರು ಮಾರ್ಗದರ್ಶನ ನೀಡಿದ್ದಾರೆ.

ಆರು ಕಂತುಗಳಲ್ಲಿ ಈ ಬರಹವು ಅಂತರ್ ಜಾಲದಲ್ಲಿ ಮೂಡಿಬರುವ ಹೊನಲು ಮಿಂದಾಣದಲ್ಲಿ (honalu.net) ಪ್ರಕಟಗೊಂಡಿದೆ. ಹೊನಲು ಮಿಂದಾಣದ ಸಂಪಾದಕರು ಮತ್ತು ಓದುಗರು ಈ ಬರಹಕ್ಕೆ ಉತ್ತೇಜನ ನೀಡಿದ್ದಾರೆ.

'ಸೀತಾ ಪರಿತ್ಯಾಗ ಪ್ರಸಂಗ'ವನ್ನು ಈ ಕೆಳಕಂಡ ಮೂರು ಹಂತಗಳಲ್ಲಿ ಜೋಡಿಸಿದ್ದೇನೆ.

೧. ನಾಟಕ ರೂಪ

೨. ಪದ ವಿಂಗಡಣೆ ಮತ್ತು ತಿರುಳು

೩. ಕಾವ್ಯದ ಪಠ್ಯ

ಈ ಬರಹದ ಕರಡು ಪ್ರತಿಯನ್ನು ಓದಿದ ನನ್ನ ಗುರುಹಿರಿಯರು ಮತ್ತು ಗೆಳೆಯರು ಮೆಚ್ಚುಗೆಯ ನುಡಿಗಳನ್ನಾಡಿದ್ದಾರೆ. ಎಸ್.ವಿ. ಪ್ರಭಾವತಿ ಅವರು ಆಶಯದ ನುಡಿಗಳನ್ನು ಬರೆದುಕೊಟ್ಟಿದ್ದಾರೆ. ನನ್ನೆಲ್ಲಾ ಬರಹಗಳ ಮೊದಲ ಓದುಗಳಾದ ನನ್ನ ಹೆಂಡತಿ ಗಾಯತ್ರಿ ತನ್ನ ಅನಿಸಿಕೆಯನ್ನು ತಿಳಿಸಿದ್ದಾಳೆ.

'ಸೀತಾ ಪರಿತ್ಯಾಗ ಪ್ರಸಂಗ' ಕೃತಿಯ ರಚನೆಗೆ ನೆರವಾದ ಗುರುಹಿರಿಯರಿಗೆ, ಗೆಳೆಯರಿಗೆ. ಕಾವ್ಯದ ಸಂಪಾದಕರಿಗೆ, ಹೊನಲು ಮಿಂದಾಣದ ಸಂಪಾದಕರು ಮತ್ತು ಓದುಗರಿಗೆ, ಮುಖಪುಟವನ್ನು ರಚಿಸಿಕೊಟ್ಟ ಓಂಶಿವಪ್ರಕಾಶ್ ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಸಿ ಪಿ ನಾಗರಾಜ

ಬೆಂಗಳೂರು

ಓದಿಗೆ ನೆರವಾದ ಪುಸ್ತಕ

ಅ.ರಾ.ಸೇತುರಾಮ ರಾವ್: ಸಂಪಾದಕರು ಮತ್ತು ವ್ಯಾಖ್ಯಾನಕಾರರು

ಶ್ರೀಲಕ್ಷ್ಮೀಶ ಮಹಾಕವಿಯ ಜೈಮಿನಿ ಭಾರತ

(ಮೂಲ–ತಾತ್ಪರ್ಯ–ಸಚಿತ್ರ)

ಕಾಮಧೇನು ಪುಸ್ತಕ ಭವನ

ನಾಗಪ್ಪ ರಸ್ತೆ, ಶೇಷಾದ್ರಿಪುರ, ಬೆಂಗಳೂರು–೫೬೦೦೨೦

ಪ್ರಕಟಣೆಯ ವರ್ಷ: ಎರಡನೆಯ ಮುದ್ರಣ ೨೦೨೦.

ಮೇಲ್ಕಂಡ ಕೃತಿಯಿಂದ ಸೀತಾ ಪರಿತ್ಯಾಗ ನಿರೂಪಣೆಯ ಕಾವ್ಯ ಭಾಗವನ್ನು ಆಯ್ದುಕೊಂಡಿದ್ದೇನೆ.

ಲಕ್ಷ್ಮೀಶ

ಕಾಲ	:	ಕ್ರಿ.ಶ.1530
ಹುಟ್ಟಿದ ಊರು	:	ದೇವನೂರು, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
ತಂದೆ	:	ಅಣ್ಣಮಾಂಕ
ತಾಯಿ	:	ಹೆಸರು ತಿಳಿದುಬಂದಿಲ್ಲ
ರಚಿಸಿದ ಕಾವ್ಯ	:	ಜೈಮಿನಿ ಭಾರತ

ಸಂಸ್ಕೃತ ನುಡಿಯಲ್ಲಿ ಜೈಮಿನಿ ಎಂಬ ಹೆಸರಿನ ಕವಿಯು ರಚಿಸಿದ್ದ 'ಜೈಮಿನಿ ಭಾರತ' ಕಾವ್ಯದ ವಸ್ತುವನ್ನು ಆಧಾರವಾಗಿಟ್ಟುಕೊಂಡು ಲಕ್ಷ್ಮೀಶ ಕವಿಯು ಕನ್ನಡದಲ್ಲಿ **'ಜೈಮಿನಿ ಭಾರತ'** ಕಾವ್ಯವನ್ನು ರಚಿಸಿದ್ದಾರೆ.

ಹಸ್ತಿನಾಪುರದ ರಾಜನಾಗಿದ್ದ ಜನಮೇಜಯನು ಜೈಮಿನಿ ಮುನಿಯನ್ನು ಕುರಿತು **'ಕೌರವರನ್ನು ಜಯಿಸಿ ಪಟ್ಟಕ್ಕೆ ಬಂದ ನಂತರ ಪಾಂಡವರು ಹಸ್ತಿನಾವತಿಯಲ್ಲಿ ಹೇಗೆ ರಾಜ್ಯವನ್ನು ಆಳಿದರು'** ಎಂಬುದನ್ನು ತಿಳಿಸಿ ಎಂದು ಕೋರಿಕೊಂಡಾಗ, ಜೈಮಿನಿ ಮುನಿಯು ರಾಜನಾದ ಧರ್ಮರಾಯನು ಅಶ್ವಮೇಧವನ್ನು ಮಾಡಿ, ಜಗತ್ತೆಲ್ಲವನ್ನೂ ಗೆದ್ದ ಪರಿಯನ್ನು ವಿವರಿಸುತ್ತಾರೆ.

ಅಶ್ವ=ಕುದುರೆ; ಮೇಧ=ಯಾಗ;

'ಅಶ್ವಮೇಧ' ಎಂದರೆ ವಿಸ್ತಾರವಾದ ಪ್ರಾಂತ್ಯಕ್ಕೆ ಒಡೆಯನಾಗಬೇಕೆಂಬ ಬಯಕೆಯುಳ್ಳ ರಾಜನು ತನ್ನ ಕೀರ್ತಿ ಪರಾಕ್ರಮದ ವಿವರಗಳನ್ನು ಲೋಹದ ಪಟ್ಟಿಕೆಯೊಂದರಲ್ಲಿ ನಮೂದಿಸಿ, ಅದನ್ನು ಯಾಗದ ಕುದುರೆಯ ಹಣೆಗೆ ಕಟ್ಟಿ, ಇನ್ನಿತರ ಪ್ರಾಂತ್ಯದವರು ಈ ಕುದುರೆಯ ಹಣೆಪಟ್ಟಿಯಲ್ಲಿರುವ ವಿವರವನ್ನು ಓದಿಕೊಂಡು ತನಗೆ ಶರಣಾಗಿ ಕಪ್ಪಕಾಣಿಕೆಗಳನ್ನು ನೀಡಬೇಕೆಂದು, ಇದಕ್ಕೆ

ಒಪ್ಪದವರು ಕುದುರೆಯನ್ನು ಕಟ್ಟಿಹಾಕಿದರೆ, ಅಂತಹವರ ಮೇಲೆ ತಾನು ಸೇನೆಯೊಡನೆ ದಂಡೆತ್ತಿ ಬಂದು ಕಾಳೆಗವನ್ನು ಮಾಡಿ ಗೆದ್ದು ಅವರನ್ನು ವಶಪಡಿಸಿ ಕೊಳ್ಳುತ್ತೇನೆ ಎಂಬ ಎಚ್ಚರಿಕೆಯ ಒಕ್ಕಣೆಯನ್ನು ಬರೆಸಿರುತ್ತಾನೆ. ಇಂತಹ ಲೋಹದ ಪಟ್ಟಿಕೆಯುಳ್ಳ ಕುದುರೆಯು ಒಂದು ವರುಶದ ಕಾಲ ಹೋದ ಕಡೆಯಲ್ಲೆಲ್ಲಾ ರಾಜನು ತಾನು ಇಲ್ಲವೇ ತನ್ನ ಕಡೆಯ ಸೇನೆಯ ಆಕ್ರಮಣದ ಮೂಲಕ ಹೊಸ ಹೊಸ ಪ್ರಾಂತ್ಯಗಳನ್ನು ಗೆದ್ದು, ಅಪಾರವಾದ ಸಂಪತ್ತನ್ನು ಕಪ್ಪವಾಗಿ ಪಡೆದು, ಒಂದು ವರುಶದ ಕೊನೆಯಲ್ಲಿ ಯಾಗವನ್ನು ಮಾಡಿ ಕುದುರೆಯನ್ನು ಬಲಿ ಕೊಡುತ್ತಾನೆ. ಇದು ರಾಜ್ಯ ವಿಸ್ತಾರಕ್ಕಾಗಿ ಮಾಡುವ ಒಂದು ಆಚರಣೆಯಾಗಿರುತ್ತದೆ.

ಹಸ್ತಿನಾವತಿಯ ರಾಜನಾಗಿದ್ದ ಧರ್ಮರಾಯನು ಮಾಡಿದ ಅಶ್ವಮೇಧ ಕುದುರೆಯ ಬೆಂಗಾವಲಿಗೆ ಹೋಗಿದ್ದ ಅರ್ಜುನನಿಗೂ ಮತ್ತು ಅವನ ಮಗ ಬಬ್ರುವಾಹನನಿಗೂ ಕಾಳೆಗ ನಡೆಯುವ ಸನ್ನಿವೇಶ ಪ್ರಾಪ್ತವಾಗುತ್ತದೆ. ಆಗ ಪಾಂಡವರ ಕತೆಯನ್ನು ಹೇಳುತ್ತಿದ್ದ ಜೈಮಿನಿ ಮುನಿಯು ಜನಮೇಜಯ ರಾಜನಿಗೆ **'ಇದೇ ರೀತಿಯಲ್ಲಿ ರಾಮಾಯಣದ ಕಾಲದಲ್ಲಿ ತಂದೆಯಾದ ರಾಮ ಮತ್ತು ಅವನ ಅವಳಿ ಮಕ್ಕಳಾದ ಲವ ಕುಶರ ನಡುವೆ ಅಶ್ವಮೇಧದ ಕುದುರೆಯ ಕಾರಣದಿಂದಲೇ ಕಾಳೆಗ ನಡೆಯಿತು'** ಎಂದು ಹೇಳಿ, ಜನಮೇಜಯ ರಾಜನಿಗೆ ಇಡೀ ರಾಮಾಯಣದ ಕತೆಯನ್ನು ಹೇಳುತ್ತಾರೆ. ಇಂತಹ ಸನ್ನಿವೇಶದಲ್ಲಿ ಸೀತಾಪರಿತ್ಯಾಗದ ಪ್ರಸಂಗ ನಿರೂಪಣೆಗೊಂಡಿದೆ.

ರಾವಣನನ್ನು ಕೊಂದು, ಸೀತಾದೇವಿಯೊಡನೆ ಅಯೋಧ್ಯೆಗೆ ಹಿಂತಿರುಗಿದ ರಾಮನು ಅಯೋಧ್ಯೆಯ ರಾಜನಾಗಿ ಆಳ್ವಿಕೆಯನ್ನು ನಡೆಸುತ್ತಿದ್ದಾಗ, ಅಯೋಧ್ಯೆಯ ಪ್ರಜೆಯಾಗಿದ್ದ ಅಗಸನೊಬ್ಬನು **'ಗಂಡನಿಂದ ಕೆಲಕಾಲ ದೂರವಿದ್ದು ಮತ್ತೆ ಮನೆಗೆ ಬಂದ ಹೆಂಡತಿಯೊಡನೆ ಸಂಸಾರವನ್ನು ಮಾಡಲು ನಾನೇನು ರಾಮನಲ್ಲ'** ಎಂದು ಆಡಿದ ನುಡಿಯನ್ನು ಅಯೋಧ್ಯೆಯ ಗುಪ್ತಚಾರನಿಂದ ಕೇಳಿ, ಮಾನಸಿಕವಾಗಿ ನೊಂದು, ಸೀತೆಯನ್ನು ಪರಿತ್ಯಜಿಸಲು ನಿಶ್ಚಯಿಸಿ, ತಮ್ಮ ಲಕ್ಷ್ಮಣನಿಗೆ ಸೀತೆಯನ್ನು ಕಾಡಿನಲ್ಲಿ ಬಿಟ್ಟು ಬರಲು ಆದೇಶವನ್ನು ನೀಡಿದಾಗ ನಡೆದ ಸನ್ನಿವೇಶಗಳನ್ನು ಸೀತಾ ಪರಿತ್ಯಾಗ ಪ್ರಸಂಗದಲ್ಲಿ ವಿವರಿಸಲಾಗಿದೆ. 'ಸೀತಾ ಪರಿತ್ಯಾಗ' ಎಂದರೆ ಸೀತೆಯನ್ನು ತೊರೆಯುವುದು.

ಲಕ್ಷ್ಮೀಶ ಕವಿಯ ಜೈಮಿನಿ ಭಾರತ ಕಾವ್ಯದ ಹದಿನೆಂಟನೆಯ ಸಂಧಿಯ ೩೯ ನೆಯ ಪದ್ಯದಿಂದ ೬೪ ನೆಯ ಪದ್ಯದವರೆಗೆ ಮತ್ತು ಹತ್ತೊಂಬತ್ತನೆಯ ಸಂಧಿಯ ೧ನೆಯ ಪದ್ಯದಿಂದ ೪೧ನೆಯ ಪದ್ಯವರೆಗಿನ ಪಠ್ಯದಿಂದ ಸೀತಾ ಪರಿತ್ಯಾಗ ಪ್ರಸಂಗವನ್ನು ರಚಿಸಲಾಗಿದೆ.

ಸೀತಾ ಪರಿತ್ಯಾಗ ಪ್ರಸಂಗ

ಪಾತ್ರಗಳು

ಸೀತೆ	:	ಅಯೋಧ್ಯೆಯ ರಾಜನಾದ ರಾಮನ ಹೆಂಡತಿ. ಜನಕ ರಾಜನ ಮಗಳು. ದಶರಥ ರಾಜನ ಸೊಸೆ.
ರಾಮ	:	ಅಯೋಧ್ಯೆಯ ರಾಜ. ದಶರಥ ಮತ್ತು ಕೌಸಲ್ಯೆಯ ಮಗ.
ವಸಿಷ್ಠ	:	ಒಬ್ಬ ಮುನಿ.
ಚಾರ	:	ಅಯೋಧ್ಯಾನಗರದಲ್ಲಿ ಮಾರುವೇಷದಲ್ಲಿ ಸಂಚರಿಸಿ ಪ್ರಜೆಗಳ ಬಗೆಗಿನ ಮಾಹಿತಿಯನ್ನು ಸಂಗ್ರಹಿಸಿ ರಾಜನಾದ ರಾಮನಿಗೆ ವರದಿ ಮಾಡುವ ಸೇವಕ.
ಭರತ	:	ದಶರಥ ಮತ್ತು ಕೈಕೆಯ ಮಗ. ರಾಮನ ತಮ್ಮ.
ಲಕ್ಷ್ಮಣ	:	ದಶರಥ ಮತ್ತು ಸುಮಿತ್ರೆಯ ಮಗ. ರಾಮನ ತಮ್ಮ.
ಶತ್ರುಘ್ನ	:	ದಶರಥ ಮತ್ತು ಸುಮಿತ್ರೆಯ ಮಗ. ರಾಮನ ತಮ್ಮ.
ವಾಲ್ಮೀಕಿ	:	ಒಬ್ಬ ರಿಸಿ. ರಾಮಾಯಣ ಕಾವ್ಯವನ್ನು ರಚಿಸಿದ ಕವಿ.

ಪ ರಿ ವಿ ಡಿ

ಸೀತಾ ಪರಿತ್ಯಾಗ ಪ್ರಸಂಗ ೯

ಪದ ವಿಂಗಡಣೆ ಮತ್ತು ತಿರುಳು ೨೭

ಸೀತಾ ಪರಿತ್ಯಾಗ ಪಠ್ಯ ೮೬

ಸೀತಾ ಪರಿತ್ಯಾಗ ಪ್ರಸಂಗ

ನೋಟ–೧

ಶರಣಜನ ವತ್ಸಲನು ಉತ್ಸವಕೆ ಬಂದ ಅನಿಬರೆಲ್ಲರನು ಸತ್ಕರಿಸಿ ಬೀಳ್ಕೊಟ್ಟು ರಾಜಸಂಪತ್ ಸುಖದೊಳು ಇರ್ಪನಿತರೊಳು, ಬಳಿಕ ಸೀತೆ ನಿಜಕಾಂತನ ಏಕಾಂತಕೆ ಐದಿ...

ಸೀತೆ : ಕುತ್ಸಿತಮ್ ಪೊದ್ದದ ಆಶ್ರಮದ ಋಷಿಪತ್ನಿಯರ ಸತ್ಸಂಗದೊಳು ತನ್ನ ಬೇಸರನು ತವಿಸುವೆನು. ಇದು ತನಗೆ ಉತ್ಸುಕಮ್. ಅದರಿನ್ ಇನ್ನೊಮ್ಮೆ ಬನಕೆ ತನ್ನನ್ನು ಕಳುಹಬೇಕು.

(ಎಂದು ಆ ಕ್ಷಿತಿಜೆ ಬಯಕೆಯನು ಬಿನ್ನೈಸೆ, ಕೇಳ್ದು ನಗುತ, ಆಕ್ಷೇಪದಿಂದೆ ಕಳುಹುವನಾಗಿ ಸಂತೈಸಿ ರಾಕ್ಷಸಾಂತಕನು ಇರಲ್ಕೆ, ಒಂದಿರುಳು ಕನಸು ಕಂಡು ಏಳುತೆ, ವಸಿಷ್ಠನೊಡನೆ...)

ರಾಮ : ಈ ಕ್ಷೋಣಿಸುತೆ ಗಂಗೆಯನು ಕಳೆದು ಕಾಡೊಳು ಮಹಾಕ್ಷೀಣೆಯಾಗಿ ದೇಸಿಗರಂತೆ ದೆಸೆದೆಸೆಯನು ಈಕ್ಷಿಸುತೆ ಮರುಗುತ ಅಳುತ ಇರ್ದುದನು ಕಂಡೆನು. ಇದು ಲೇಸಹುದೆ ಪೇಳು.

ವಸಿಷ್ಠ : ಕನಸಿದು ಒಳ್ಳಿತಲ್ಲ.

(ಎಂದು, ಅದಕೆ ಮುನಿವರ ವಸಿಷ್ಠನು ಶಾಂತಿಯನು ನೆಗಳ್ಚಿದನು.)

❖

ನೋಟ–೨

ಮನದ ಅನುತಾಪದಿನ್ ಪ್ರಜೆಯನು ಆರೈವುದನು ಮರೆದು, ಎರಡು ಮೂರು ದಿವಸಮ್ ಇರ್ದು, ಬಳಿಕ **'ಜನಮ್ ಅಲಸಿದಪುದು'** ಎಂದು ರಾತ್ರಿಯೊಳು ಪೊರಮಟ್ಟು, ದಿನಪ ಕುಲತಿಲಕನು ಏಕಾಂತದೊಳು ನಗರ ಶೋಧನೆಯ ಚಾರರೊಳು ಒರ್ವನನು ಕರೆಸಿ ವಿನಯೋಕ್ತಿಯಿಂದೆ ಇಂತೆಂದು ಕೇಳ್ದನು.

ರಾಮ : ಇನ್ನೆಗಮ್ ಪ್ರಜೆಗಳು ನಿಂದಿಸರಲೇ...ತನ್ನ ಗುಣಕೆ ಪಳಿವನು ಒಂದಿಸರಲೇ...ಅಮಲತರ ಕೀರ್ತಿಯನು ಕಂದಿಸರಲೇ...ಭುಜ ವಿಜಯ ಪ್ರತಾಪ ತೇಜವನು ಇಳೆಯೊಳು ದೂಸರಿಂದೆ ನಂದಿಸರಲೇ...ನಿಜವಂಶದೇಳ್ಗೆಯನು ಜರೆದು ಕುಂದಿಸರಲೇ... ವಹಮಾನದೊಳು ಕೊಂಕುಕೊರತೆಗಳನು ಖೋಡಿಗಳೆದು ಸಂಧಿಸರಲೇ.

(ಎಂದು ಅವನನು ಅಸುರಾರಿ ಬೆಸಗೊಂಡನು.)

ಚಾರ : ದೇವ ನಿನ್ನನು ಪೆಸರಿಸಿದನ್ ಈಶನ್ ಆದಪನು; ಸೇವಿಸಿದವನು ಚತುರ್ಮುಖನಾಗಲು ಉಳ್ಳವನು; ಕಾವುದು ಎಂದು ಐದೆ ಮರೆವೊಕ್ಕವನು ಜಗದೊಳು ಆಚಂದ್ರಾರ್ಕಮಾಗಿ ಬಾಳ್ವನು; ಶ್ರೀವಿಭವದಿನ್ ಶಕ್ರಪದವಿಯನು ಜರೆದಪನು; ಭೂವಲಯದೊಳು ನಿಂದಿಸುವರುಂಟೆ. ತರಣಿಯನು ಕಾವಳಮ್ ಮುಸುಕಿರ್ದೊಡೆ ಏನಪ್ಪುದು.

(ಎಂದು ಅವನು ಬಿನ್ನೈಸಿ ಕೈಮುಗಿದನು.)

ರಾಮ : ಏನಾದೊಡಮ್ ಈ ಮಾತು ಕಟಕಿಯಾಗಿರ್ಪುದು. **"ಭಾನುವಮ್ ಕಾವಳಮ್ ಮುಸುಕಲೇನು"** ಎನಲು, ಎನ್ನ ಅಧೀನವಾದ ಅರಸುತನಕೆ ಆವುದು ಊಣೆಯವು ಎಂಬರು.

(ಎಂದು ರಘುಪತಿ ಕೇಳಲು...)

ಚಾರ : ಲೋಕದ ಜನಕೆ ಜಗದೊಳು ನೀನೆ ಪಾವನರೂಪನು ಎಂಬುದನು ಮುನಿಯ ವಧು ತಾನೆ ತೋರಿಸಳೆ. ಅಜ್ಞಾನಿಗಳು ನುಡಿದ ನಿಂದೆಯನು ಉಸಿರಲಮ್ಮೆನು.

(ಎಂದು ಅವನು ಪದದೊಳು ಎರಗಿದನು.)

ರಾಮ : ಏಳು... ಅಂಜಬೇಡ. ಇನ್ನು ಮಾಜದಿರು. ಹೇಳು ತನ್ನಾಣೆ.

(ಎಂದು ರಘುಕುಲಲಲಾಮನು ಒತ್ತಾಯದಿನ್ ಕೇಳಲು...ಅವನು ಎಂದನು.)

ಚಾರ : ಜೀಯ ಅವಧರಿಸು, ಮಲಿನಮನ್ ತೊಳೆವನಾಗಿ ಒರ್ವ ಮಡಿವಳನು ಸದ್ಗುಣಚರಿತ್ರ ನಾಮಾಳಿಯನು ಕಾಳುಗೆಡೆದನು. ಜಗಮನ್ ಪುನೀತಮಮ್ ಮಾಳ್ಪ ನಿನ್ನ ಏಳಿಗೆಯನು ಅವನೆತ್ತ ಬಲ್ಲನು.

(ಎನಲು...)

ರಾಮ : ಏನ್ ಎಂದನು.

(ಎನಲು, ಆತನು ಇಂತು ಎಂದನು.)

ಚಾರ : ಪೆಂಡತಿ ತವರ್ಮನೆಗೆ ಮುಳಿದು ಪೇಳದೆ ಪೋದ ಚಂಡಿತನಕೆ, ಅವಳ ತಾಯ್ತಂದೆಗಳು ಕಳುಹ ಬಂದು ಅಂಡಲೆದೊಡೆ, **"ಇನ್ನು ಒಲ್ಲೆನು. ಅಗಲಿರ್ದ ಮಡದಿಯನು ಮತ್ತೆ ರಘುನಾಥನಂತೆ ಕೊಂಡು ಆಳುವವನಲ್ಲ ತಾನು"** ಎಂದು ರಜಕನು ಉದ್ದಂಡದೊಳು ನುಡಿಯೆ, ಕಿವಿಮುಚ್ಚಿಕೊಳುತ ಎಯ್ದಿದೆನು. ಅಖಂಡಿತದ ಮಂತ್ರಪೂತದ ಹವಿಯನು ಅರಿದು ಎಂಜಲಿಪುದೆ ವಾಯಸಮ್.

(ಎಂದು ಬಿನ್ನೈಸೆ... ಕೇಳ್ದು, ಆತನನು ಕಳುಹಿ ರಘುನಂದನನು ಬಂಧನಕ್ಕೆ ಒಳಗಾದ ಮತ್ತಗಜದ ಅಂದದಿನ್ ನಿಜಶಿರವನು ಒಲೆದು... ಮೂಗಿನ ಮೇಲೆ ಬೆರಳಿಟ್ಟು... ಮೌನದಿಂದೆ ನಿಂದು... ಸ್ವೈರಗಾಗಿ... ನೆನೆ ನೆನೆದು ಚಿತ್ತದೊಳು ನೊಂದು ಬಿಸುಸುಯ್ದು... ಕಡುಪಳಿದು ಕಾತರಿಸಿ ಕಳೆಗುಂದಿ... ದುಮ್ಮಾನದಿನ್ ಪುತ್ತ ಪುಗುವ ಅಹಿಪನಂತೆ ಅಂತಃಪುರಕೆ ಪೊಕ್ಕನು.)

❖

ನೋಟ–೩

ಬಾಗಿಲ್ಗೆ ಬಂದ ಅಖಿಳ ಭೂಪಾಲರನು ಕರೆಸಿ ಕಾಣಿಸಿಕೊಳ್ಳದೆ, ಓಲಗಮ್ ಕುಡದೆ, ಒಳಗೆ ಚಿಂತಾಲತಾಂಗಿಯ ಕೇಳಿಗೆ ಎಡೆಗೊಟ್ಟು ರಾಜೇಂದ್ರನಿರೆ, ಕೇಳ್ದು ಭೀತಿಯಿಂದೆ ಆ ಲಕ್ಷ್ಮಣಾದಿಗಳು ಅಂತಃಪುರವನು ಪೊಕ್ಕರು. ಆಲಿಂಗಿಸಿದ ಜಾಡ್ಯದಿಂದೆ ಜಡಿವ ಅವಯವದ ನೀಲಾಂಗನನ್ ಕಂಡು ಕಾಲ್ಗೆರಗಿ, ನುಡಿಸಲಮ್ಮದೆ ಸುಮ್ಮನಿರುತಿರ್ದರು. ಕರುಣಾಳುಗಳ ಬಲ್ಲಹನು ಎದ್ದು ಕುಳ್ಳಿರ್ದು ಅನುಜರನು ಕರೆದು ಮುದ್ದುಗೈದು...

ರಾಮ : ಇಳೆಯೊಳು ಇಂದು ಎನಗೆ ಪೊದ್ದಿದ ಅಪವಾದಮನ್ ನೀವು ಅರಿದುದಿಲ್ಲ. ಅಕಟ, ಸಾಕಿನ್ನು... ನೆರವಿಗಳೊಳು ಕದ್ದ ಕಳ್ಳನವೊಲು ಆಡಿಸಿಕೊಳ್ಳಲ್ಕೆ ಆರೆನು. ಒಡಲಿದ್ದಲ್ಲಿ ನಿಂದೆಗೆ ಒಳಗಾಗಿ ಬದುಕುವನಲ್ಲ. ತಿದ್ದಿ ತೀರದ ವಿಲಗಕೆ ಅಂಜುವೆನು. ಸೀತೆಯ ಬಿಟ್ಟಿಲ್ಲದೆ ಇರೆನು.

(ಎಂದು ನುಡಿದು, ಮತ್ತೆ ತನ್ನ ಮಾತನ್ನು ಮುಂದುವರಿಸಿದನು.)

ರಾಮ : ಇವಳು ಅಯೋನಿಜೆ. ರೂಪ ಗುಣ ಶೀಲ ಸಂಪನ್ನೆ. ಭುವನ ಪಾವನೆ. ಪುಣ್ಯಚರಿತೆ. ಮಂಗಳ ಮಹೋತ್ಸವೆ. ಪತಿವ್ರತೆ ಎಂಬುದನು ಬಲ್ಲೆನು. ಆದೊಡಮ್ ನಿಂದೆಗೆ ಒಳಗಾದ ಬಳಿಕ, ತನಗೆ ಅವನಿಸುತೆಯನು ಬಿಡುವುದೇ ನಿಶ್ಚಯಮ್. ರವಿಕುಲದ ರಾಯರು ಅಪಕೀರ್ತಿಯನು ತಾಳ್ದಪರೆ. ಕುವರನಾಗಿರ್ದ ತನ್ನನು ತಾತನು ಸತ್ಯಭಾಷೆಗಾಗಿ ಉಳಿದುದಿಲ್ಲವೆ. ಪಲವು ಮಾತೇನು ಕಲಿಯುಗದ ವಿಪ್ರರು ಆಚಾರಮನ್ ಬಿಡುವಂತೆ ಇನ್ನು ಸೀತೆಯನು ಬಿಟ್ಟೆನು.

(ಎನೆ, ಅನುಜಾತರು: **"ಕಾರುಣ್ಯನಿಧಿಗೆ ಬಲು ಗರಮ್ ಇದು ಎತ್ತಣದೊ"** ಎನುತೆ ನಡನಡುಗಿ ಭೀತಿಯಿಂದೆ...)

ಅನುಜಾತರು: ನೆಲೆಗೊಂಡ ವೇದಮನ್ ಧರೆಯ ಪಾಷಂಡಿಗಳು ಸಲೆ ನಿಂದಿಸಿದೊಡೆ ಅದನು ದ್ವಿಜರು ಮಾಣ್ಬರೇ. ಅಕಟ ಕುಲವರ್ಧಿನಿಯನು ಎಂತು ಬಿಡುವೆ ನೀನು ಪೇಳ್.

(ಎಂದರು ಅನುಜಾತರು ಅಗ್ರಜಂಗೆ. ಭಯಶೋಕದಿಂದೆ ಗದ್ಗದಿಸೆ

ಕಂಠದೊಳು ಅಶ್ರು ನಯನದೊಳು ತುಳುಕೆ...)

ಭರತ : ಕರೆವ ಕಪಿಲೆಯನು ನಯವಿದರು ಪೊಡೆದು ಅಡವಿಗೆ ಅಟ್ಟುವರೆ. ಪಾವಕನೊಳು ಅರಸಿಯನು ಪುಗಿಸಿದಂದು ಬಯಸಿದೊಡೆ ಅಯ್ಯನು ಬಂದು **"ನಿನಗೆ ಪ್ರಿಯೆ. ಪರಿಶುದ್ಧೆ. ಕುಲಕೆ ಮಂಗಳೆ. ಸುತೋದಯಕೆ ನಿರ್ಮಲೆ. ತನಗೆ ಗತಿಗುಡುವ ಸೊಸೆ"** ಎಂದು ಸುರಾಸುರರ ಮುಂದೆ ಕಪಿಕಟಕಮ್ ಅರಿಯೆ ಆಡನೆ. ಅದನ್ ಎಲ್ಲಮನ್ ಮರೆದು ಹುಲುಮನುಜ ರಜಕನು ಆಡಿದ ದೂಸರನು ನೆನೆದು ಕುಲಪತ್ನಿಯನು ಬಿಡುವ ಹದನು ಆವುದು. ಅಕಟ... ಗುರುಲಘುವಿನ ಅಂತರವನು ಎಣಿಸದೆ ಬರಿದೆ ಮೂಢರಂತೆ ಎದೆಗೆಟ್ಟು ದೇವಿಯನು ದೋಷಿಯೆಂಬರೆ. ಜೀಯ ಪದುಳವು ಇಹುದು.

(ಎಂದು ವಿನಯದೊಳು ಭರತನು ಅಗ್ರಜಾತನನು ಕದುಬಿ ನುಡಿದನು. ಆತನನು ನೋಡುತ ಒಯ್ಯನೆ ಭೂಪನು ಇಂತೆಂದನು.)

ರಾಮ : ತಮ್ಮ, ನೀನು ಆಡಿದಂತೆ ಅವನಿಸುತೆ ವಿರಜೆ ಅಹುದು. ಉಮ್ಮಳಿಸ ಬೇಡ. ಈ ದೂಸರನು ಸೈರಿಸಲಾರೆನು. ಪೃಥು ಪುರೂರವ ಹರಿಶ್ಚಂದ್ರಾದಿ ನರಪತಿಗಳು ಮಹಿಯೊಳು ಸುಮ್ಮನೆ ಉಳಿವರೇ. ಅಪಕೀರ್ತಿಗೆ ಒಳಗಾಗಲೇತಕೆ. ಮಮತೆಯನು ಮಹಾಯೋಗಿ ಬಿಡುವಂತೆ ಇವಳನು ಉಳಿವೆನು.

(ಎನೆ, ಲಕ್ಷ್ಮಣನು ಹಮ್ಮೈಸಿ ಕಂಪಿಸುತೆ ಕಿವಿಮುಚ್ಚುತ ಅಗ್ರಜಂಗೆ ಇಂತೆಂದನು.)

ಲಕ್ಷ್ಮಣ : ಕಾಯಸುಖಕೋಸುಗಮ್ ಧರ್ಮಕೃತಮನು ಬಿಡುವೊಲು ಆಯತಾಕ್ಷಿಯ ಭಾವಶುದ್ಧಿಯನು ತಿಳಿದಿರ್ದು ನಿಷ್ಕರುಣದಿ ವಾಯದ ಅಪವಾದಕೆ ಇಂತು ಅರಸಿಯನು ತೊರೆಯಬೇಕು ಎಂಬರೇ. ಜೀಯ, ತುಂಬಿದ ಬಸಿರು ಬೆಸಲಾದ ದೇವಿಯನು ಪ್ರಿಯದಿಂದೆ ಆರೈದು ಸಲಹಬೇಕು.

(ಎಂದು ರಘುರಾಯಂಗೆ ಲಕ್ಷ್ಮಣನು ಬಿನ್ನೈಸೆ, ಶತ್ರುಘ್ನನು ಮೇಲ್ವಾಯ್ದು ಇಂತೆಂದನು.)

ಶತ್ರುಘ್ನ : ಇಕ್ಷ್ವಾಕು ವಂಶದವರು ಅರಸಿಯನು ಎಂತು ಬಿಡುವರು. ಇಳೆಯೊಳು ಆರಾದೊಡಮ್ ದೂಸರನು ಎಂತು ನುಡಿವರು. ಬುಧ್ಧಿ ಪೇಳ್ವುದಕೆ ಒಡೆಯರಿಲ್ಲವಾಗಿ ಅಮಲ ಸತ್ಕೀರ್ತಿಯನು ಎಂತು ಪಡೆವರು. ಏಳ್ಗೆಯನು ಎಂತು ಕಡಿವರು. ಪೆಣ್ ಅಳಲ ಬೆಂಕಿಯಿನ್ ಅನ್ವಯದ ಬಾಳ್ಕೆಯನು ಎಂತು ಸುಡುವರು. ಈಗಳು ಇದಕ್ಕೆ ಎನ್ನ ಒಡಹುಟ್ಟಿದವರು ಎಂತು ಕಿವಿ ಕುಡುವರು.

(ಎನುತ ಶತ್ರುಘ್ನನು ಉರಿದೆದ್ದನು. ಅರಸ ಕೇಳು, ಅನುಜರು ಆಡಿದ ನುಡಿಗೆ ತಲೆವಾಗಿ ತರಣಿಕುಲತಿಲಕನು ಒಯ್ಯನೆ ದೈನ್ಯಭಾವದಿನ್...)

ರಾಮ : ಜಾನಕಿಯನು ಉಳಿದು ತನಗೆ ತರಹರಿಸಬಾರದ ಅಪವಾದ ಹೃಚ್ಛೂಲಮನ್ ಪೆರೆ ಉರ್ಚಿದ ಉರಗನಂತೆ ಇರ್ದಪೆನು. ಸಾಕು ನಿಮಗೆ ಒರೆದೊಡೆ ಏನಹುದು.

(ಎಂದು ಬೇಸರೊಳು ಭರತ ಶತ್ರುಘ್ನರನು ಮನೆಗಳ್ಗೆ ಕಳುಹುತ, ಏಕಾಂತದೊಳು ಸೌಮಿತ್ರಿಗೆ ಇಂತೆಂದನು...)

ರಾಮ : ತಮ್ಮ ಬಾ. ನೀನು ಇಂದುವರೆಗೆ ತಾನೆಂದ ಮಾತನು ಮೀರಿದವನಲ್ಲ. ಕೆಲಬಲವನು ಆರಯ್ಯುತ ಮರುಗದಿರು. ಅಲ್ಲದೊಡೆ ತನ್ನ ಕೊರಳಿಗಿದೆ ಖಡ್ಗಮ್. ಈಗ ಜಾನಕಿಯನು ಉಮ್ಮಳಿಸದೆ ಒಯ್ದು ಗಂಗೆಯ ತಡಿಯ ಅರಣ್ಯದೊಳು ಸುಮ್ಮನೆ ಕಳುಹಿ ಬರ್ಪುದು. ಅವಳು ಎನ್ನೊಳು ಬಯಕೆಯಿಂದ ಒಮ್ಮೆ ಕಾನನಕೆ ಐದಬೇಕೆಂದು ಆಡಿರ್ಪಳ್. ಅದೆ ನಿನಗೆ ನೆವಮ್.

ಲಕ್ಷ್ಮಣ : ರಾಘವೇಂದ್ರ, ನಿನ್ನ ಆಜ್ಞೆಯನು ಮೀರಲ್ಕೆ ತನಗೆ ರೌರವಮ್ ಅಪ್ಪುದು. ಎಂದುದನು ಮಾಡಲ್ಕೆ ಜನನಿಯನು ಕೊಂದ ಉಗ್ರಗತಿಯಪ್ಪುದು. ಏಗೈವೆನು.

(ಎಂದು ಕಡುಶೋಕದಿಂದೆ ತನು ಝೋಂಪಿಸಲ್ಕೆ ಸೆರೆಬಿಗಿದು ಕಂಬನಿಯಿಂದೆ ನನೆದು ಅಳಲ ತೊರೆಯೊಳ್ ಆಳ್ದ ಅನುಜನನು ಘೂರ್ಮಿಸುತೆ...)

ರಾಮ : ತಾನು ಇರಲ್ಕೆ ನಿನಗೆ ದೋಷಮೆ. ನಡೆ ಕಳುಹು.

(ಎಂದ ಅರಸನು... ಏನ್ ದಯೆ ತೊರೆದನೋ.)

❖

ನೋಟ–೪

ಅಣ್ಣದೇವನೊಳು ಇಡಿದ ವಾತ್ಸಲ್ಯಮೆಂಬ ಬಲ್ಗಣ್ಣಿಯೊಳು ಕಟ್ಟುವಡೆದು, ಅಲ್ಲ ಎನಲು ಅರಿಯದೆ ನಿರ್ವಿಣ್ಣಭಾವದೊಳು ಅಂದು ಲಕ್ಷ್ಮಣನು ತುರಗ ಸಾರಥಿ ಕೇತನಂಗಳಿಂದೆ ಹಣ್ಣಿದ ವರೂಥಮನು ತರಿಸಿ, ಪೊರಗೆ ಇರಿಸಿ, ನೆಲವೆಣ್ಣ ಮಗಳು ಇರುತಿರ್ದ ರಾಜಮಂದಿರಕೆ ಐದಿ, ದೂರದೊಳೆ ನಿಂದು ಕಣ್ಣೊಳು ಈಕ್ಷಿಸದೆ ತಲೆವಾಗಿ ಆ ಸೀತೆಗೆ ಇಂತೆಂದನು.

ಲಕ್ಷ್ಮಣ: ತಾಯೆ, ನೀನು ಏತಕೆ ಎಳಸಿದೆ. ನಿನ್ನನು ಈಗ ರಘುರಾಯನು ತಪೋವನಕೆ ಕಳುಹಿ ಬರಹೇಳಿದನು. ಪ್ರಿಯಮುಳ್ಳೊಡೆ ರಥಮ್ ಪಣ್ಣಿ ಬಂದಿದೆಕೊ... ಬಿಜಯಂಗೈವುದು.

(ಎಂದು ಮರುಗಿ ಸುಮಿತ್ರಾತ್ಮಜನು ಛಾಯೆಗಾಣಿಸಿ ನುಡಿದ ಅಭಿಪ್ರಾಯಮನ್ ತಿಳಿಯದೆ. ಆಯತಾಂಬಕಿ ಅತಿ ಸಂಭ್ರಮಾನ್ವಿತೆ ಯಾದಳು. **"ತನ್ನ ಅಭೀಷ್ಟಮನು ಸಲಿಸುವನು ಕಾಂತನು"** ಎಂಬ ಉತ್ಸವದೊಳು ಅಂಬುಜಾನನೆ ಬಳಿಕ ಪಯಣಮನು ನಿಶ್ಚೈಸಿ, ಅತ್ತೆಯಾದ ಕೌಸಲೆಯ ಬಳಿಬಂದು...)

ಸೀತೆ : ನಂಬಿದರ ಅಭೀಷ್ಟಮನು ಸಲಿಸುವ ಕೃಪಾಳು ತಾನು ಎಂಬುದನು ಎನ್ನ ಕಾಂತನು ಇಂದು ಎನಗೆ ಕಾಣಿಸಿದನು.

(ಎಂದು ಕೌಸಲೆಗೆ ಪೇಳ್ದು, ಮುಂಬರಿದು ಒಡಂಬಡಿಸಿ ಬಲವಂದು ಕಾಲ್ಗೆರಗಿ, ತುಂಬಿದ ಪರಕೆವೆತ್ತು, ಕೈಕೆಯೀ ದೇವಿಗೆ ಶಿರಂಬಾಗಿ, ವರಸುಮಿತ್ರೆಗೆ ನಮಿಸಿ ಸಖಿಯರನು ಸಂತೈಸಿ ಬೀಳ್ಕೊಂಡಳು. ನಿಜಮ್ ಇದೆಂದು ಮಿಗೆ ತಪೋವನದ ಋಷಿಗಳ್ಗೆ ಮುನಿಪತ್ನಿಯರ್ಗೆ ಅಗರು ಚಂದನ ಕುಂಕುಮ ಅನುಲೇಪನಗಳನು ಬಗೆಬಗೆಯ ದಿವ್ಯಾಂಬರಗಳನು ವಿವಿಧ ಮಣಿಭೂಷಣ ಸುವಸ್ತುಗಳನು ತೆಗೆದು ಕಟ್ಟಿಸಿ ರಥದೊಳು ಇಂಬಿಟ್ಟು, ರಾಮನ ಅಂಘ್ರಿಗಳ ಚೆಂಬೊನ್ನ ಪಾವುಗೆಗಳನು ತರಿಸಿಕೊಂಡು, ಒಗುಮಿಗೆಯ ಹರುಷದೊಳು ಅಂಗನೆ ಮಣಿವರೂಥಮನು ಅಡರ್ದಳು. ಅಗ್ರಜನು ತರಿಸಂದು ತನ್ನೊಳು ಆಡಿದ ಕಜ್ಜದ ಉಗ್ರಮನು... ಬನಕೆ ಪೋದಪೆನು ಎಂಬ ದೇವಿಯ ಸಮಗ್ರ ಸಂತೋಷಮನು ಕಂಡು ಸೌಮಿತ್ರಿ ಮನದೊಳು

ಮರುಗಿ ಕಂಬನಿಯನು ನಿಗ್ರಹಿಸಿಕೊಂಡು, ಸಾರಥಿಗೆ ಸೂಚನೆಗೈದು ವ್ಯಗ್ರದಿಂದೆ ಆಗ ಆ ದೇವಗ್ರಾಮನಿಲಯ ಲಕ್ಷ್ಮೀಶನ ಉಂಗುಟದೊಳು ಒಗೆದ ಅಮಲಜಾಹ್ನವಿಯ ತಡಿಗೆ ರಥವನು ಐದಿಸಿದನು.)

❖

ನೋಟ–೫

ಅರಸ ಕೇಳು... ಸೌಮಿತ್ರಿ, ವೈದೇಹಿಯನೆ ಕೊಂಡು ತೆರಳುವ ರಥಾಗ್ರದೊಳು ಚಲಿಸುವ ಪತಾಕೆ **"ಅಹಹ... ರಘುವರನು ಅಂಗನೆಯನು ಉಳಿದನು ಎಂದು ಅಡಿಗಡಿಗೆ ತಲೆ ಕೊಡಹುವಂತೆ"** ಇರಲ್ಕೆ, ಅಯೋಧ್ಯಾಪುರದ ನೆರವಿಯ ಜನಮ್ **"ಪರಮ ದಾರುಣಮ್ ಆಯ್ತು ಇದು"** ಎಂದು ಗುಜುಗುಜಿಸಿ ಮನದೆ ಕರಗಿ ಕಾತರಿಸುತಿರೆ, ಕಾಲ್ಬಟ್ಟೆಗೊಂಡು ಅನಿಲವೇಗದಿಂದೆ ಆ ರಥವನು ಪರಿಸಿದನು.

ಲಕ್ಷ್ಮಣ : (ತನ್ನ ಮನದಲ್ಲಿ)

ಧುರದೊಳು ಆಂತರನು ಇರಿದು ಮೆರೆಯಲು ಏರುವ ರಥಮ್, ತರಳೆಯನು ಕಾನನಕೆ ಕಳುಹಲು ಅಡರ್ವಂತಾಯ್ತು. ಧರೆಯೊಳು ಆರ್ತರನು ಐದೆ ರಕ್ಷಿಸುವ ಬುದ್ಧಿ, ಕೋಮಲೆಯ ಕೊಲೆಗೆಲಸಕೆ ಆಯ್ತು. ಕರುಣಮಿಲ್ಲದೆ ಹೊರೆವ ಹರಣಮನು ಸುಡಲಿ. ಎಂತು ಈ ಕೃತ್ಯಮ್ ನಿಷ್ಠುರದೊಳು ಎಸಗುವೆನೊ. ರಾಘವೇಶ್ವರನು ತನಗೆ ಎಂತು ಇದಕ್ಕೆ ಬೆಸಸಿದನೊ.

(ಎನುತೆ ಸೌಮಿತ್ರಿ ಮರುಗುತೆ ನಡೆದನು. ಬಳ್ಳು ಒರಲ್ದುದು. ಕುಳ್ಳಿರ್ದ ಮೃಗಮ್ ಎದ್ದು ಮುಂದೆ ಮಾರ್ಗವನು ದಾಂಟಿದುದು. ಬಲದ ಕಣ್ಣು ಅದಿರೆ, ಅಳ್ಕೆರ್ದೆಯೊಳು ಅವನಿಸುತೆ...)

ಸೀತೆ : ನೋಡು ಲಕ್ಷ್ಮಣ... ಪಥದೊಳು ದುರ್ನಿಮಿತ್ತಂಗಳನು ಕಂಡು ಈಗಳ್ ಇದಕೆ ಎನ್ನ ಮನಮ್ ಡಿಳ್ಳಮ್ ಆದಪುದು. ರಾಮನ ಆಯುಷ್ಯಕೆ ಐಶ್ವರ್ಯಕೆ ಉಳ್ಳ ಭುಜಬಲಕೆ ಮುಂದೆ ಒಳ್ಳಿತಾಗಲಿ. ಅಸುರರನು ಗೆಲ್ದ ರಾಘವನು ನಮ್ಮನು ಸಲಹಲಿ.

(ಎಂದಳು. ಅನ್ನೆಗಮ್ ಜಾನಕಿಯ ಕಣ್ಗೆ ಮುಂದೆ ತೋರಿತು... ಸನ್ನುತ ರಘೂದ್ವಹನ ಕೀರ್ತಿಯೆನೆ ಮೂವಟ್ಟೆಯನು ನಡೆದು ಮುಕ್ಕಣ್ಣನನು ಸಾರ್ದು ಮೂಜಗದ ಪಾಪಮನು ಮುರಿದು ಮುಕ್ಕಿ ಮುನ್ನೀರು ಮುಂತಾಗಿ ಮೂದೇವರೊಳಗಾದ ಮುನ್ನುಳ್ಳ ಮೂವತ್ತು ಮೂರ್ಕೋಟಿ ವಿಬುಧರನು ತನ್ನೊಳು ಮುಳುಗಿದರ್

ಅಣಕಿಪ ಪೆಂಪು ಒದವಿ ಪರಿವ ದಿವಿಜ ನದಿಯ ಬೆಳ್ಪೊನಲು; ತೆರತೆರದ ಕಲ್ಲೋಲ ಮಾಲೆಗಳ ಲೀಲೆಗಳ; ಬೆರೆಬೆರೆವ ರಾಜಹಂಸಾಳಿಗಳ ಕೇಳಿಗಳ; ಪರಿಪರಿಯ ನೀರ್ವನಿಗಳ; ಆಕರದ ಶೀಕರದ ನೊರೆಯ; ಬೊಬ್ಬುಳಿಯ ಸುಳಿಯ; ಮೊರೆಮೊರೆದು ಘೂರ್ಮಿಸುವ ಪರಿವುಗಳ ಮುರಿಗಳ; ತಿರುತಿರುಗಿ ಸುಳಿವ ಜಲಜಂತುಗಳ ಗೊಂತುಗಳ; ನೆರೆನೆರೆದು ಮುನಿಜನಮ್ ಸೇವಿಸುವ ಭಾವಿಸುವ ಗಂಗೆಗೆ ಅವನಿಜೆ ಬಂದಳು.

ಆ ಜಾಹ್ನವಿಯ ತಡಿಯ ಬನದೆಡೆಯೊಳು ತೆಂಗು ಎಳ ಕವುಂಗು ಪನಸಮ್ ದ್ರಾಕ್ಷೆ ಜಂಬು ನಾರಂಗ ಜಂಬೀರ ಖರ್ಜೂರ ಕಿತ್ತಳೆ ಮಾತುಳಂಗ ತಿಂತ್ರಿಣಿ ಚೂತ ನೆಲ್ಲಿ ಬಿಲ್ವ ಕಪಿತ್ಥಮ್ ಎಂಬ ನಾನಾ ತರುಗಳು ತೊಂಗುವ ಫಲಾವಳಿಯ ಭಾರಂಗಳು ಆವಗಮ್ ಪಿಂಗವು. ಇವನು ಇಳೆಗೆ ಇಳಿಪಬೇಕೆಂದು ಬಾಗಿದ ಒಂದು ಅಂಗಮ್ ಎನೆ ಇಕ್ಕೆಲದೊಳು ಕಣ್ಗೆ ಎಸೆದುವು.

ಇಳಿದು ರಥದಿಂದೆ ಮಂದಾಕಿನಿಗೆ ಪೊಡಮುಟ್ಟು, ನಿರ್ಮಲ ತೀರ್ಥದೊಳು ಮಿಂದು, ಬಳಿಕ ನಾವಿಕರೊಡನೆ ನಾವದೊಳು ಭೂಜಾತೆ ಸಹಿತ ಗಂಗೆಯನು ಕಳೆದು, ಸೌಮಿತ್ರಿ ಮತ್ತೆ ಒಳಗೊಳಗೆ ಮರುಗಿ ಬಿಸುಸುಯ್ದು ಚಿಂತಿಸುತೆ, ಉಗ್ರ ಮೃಗಪಕ್ಷಿ ಗಣದಿಂದ ಘೂರ್ಮಿಸುವ ಅಡಿ ಇಡುವೊಡೆ ಅಸದಳಮ್ ಎಂಬ ಕರ್ಕಶದ ಮಾರ್ಗದಿಂದೆ ಮುಂದಳೆದು ಹಳುವಮನು ಪೊಕ್ಕನು.

ಶಕುನಿ ಚೀತ್ಕಾರ ಘೋಷಣಮಯಮ್; ತೃಣಮಯಮ್; ವಿಕಿರದ ಉಪಲಾಳಿ ಕರ್ಕಶಮಯಮ್; ಶಶಮಯಮ್; ಪ್ರಕಟ ಕಂಟಕ ಕೀರ್ಣ ತರುಮಯಮ್; ರುರುಮಯಮ್; ವಿವಿಧೋಗ್ರಜಂತು ಮಯವು; ನಕುಲ ಮೂಷಕ ಸರೀಸೃಪ ಮಯಮ್; ದ್ವಿಪಮಯಮ್; ಸಕಲ ಭೂವಿಷಮ ಸಂಕುಲಮಯಮ್; ಬಿಲಮಯಮ್; ವೃಕ ಸೂಕರ ವ್ಯಾಘ್ರ ಚಯಮಯಮ್; ಭಯಮಯಮ್ ತಾನು ಎನಿಸಿ ಕಾಡು ಇರ್ದುದು.

ಇರುಳಂತೆ ಪಗಲಂತೆ ಮಖದಂತೆ ದಿವದಂತೆ ವರ ಪಯೋನಿಧಿಯಂತೆ ಕೈಲಾಸಗಿರಿಯಂತೆ ನಿರುತಮುಮ್ ಸೋಮ

ಅರ್ಕ ಶಿಖಿ ಸಹಸ್ರಾಕ್ಷ ಹರಿನುತ ಶಿವ ಆವಾಸಮಾಗಿ, ಧುರದಂತೆ ಕೊಳದಂತೆ ಕಡಲಂತೆ ನಭದಂತೆ ಶರ ಪುಂಡರೀಕ ವಿದ್ರುಮ ಋಕ್ಷಮಯದೊಳು ಇಡಿದಿರುತ ಆ ಮಹಾಟವಿ ಜಾನಕಿಯ ಕಣ್ಗೆ ಘೋರತರಮಾಗಿ ಮುಂದೆ ಇರ್ದುದು. ಅಟವಿಯ ಮಹಾಘೋರ ಗಹ್ವರಮ್ ಮುಂದೆ ದುರ್ಘಟಮಾಗೆ ನಡನಡುಗಿ ಭೀತಿಯಿನ್ ಸೀತೆ ಸಂಕಟದಿಂದೆ ರಾಮನಾಮಂಗಳನು ಜಪಸುತ...)

ಸೀತೆ : ಎಲೆ ಸೌಮಿತ್ರಿ, ಕಾನನಮ್ ಇದು ಅಟನಕೆ ಅಸದಳಮಪ್ಪುದು. ಇಲ್ಲಿ ಪುಣ್ಯಾಶ್ರಮದ ಜಟಿಗಳನು... ವಲ್ಕಲವನುಟ್ಟ ಮುನಿವಧುಗಳನು... ವಟುಗಳನು... ಶ್ರುತಿಘೋಷ ಹೋಮಧೂಮಂಗಳನು ಕಾಣೆನು.

(ಎಂದು ಅಳವಳಿದಳು.)

ಸೀತೆ : ತಂದೆ ಸೌಮಿತ್ರಿ, ಎಲ್ಲಿ ಮುನಿಪೋತ್ತಮರ ಪಾವನದ ವನದ ಎಡೆಗಳು... ಎಲ್ಲಿ ಸಿದ್ಧಾಶ್ರಮಂಗಳ ಮಂಗಳಸ್ಥಳಗಳು... ಎಲ್ಲಿ ಸುಹವಿಗಳ ಕಂಪೊಗೆದ ಪೊಗೆ ತಳೆದ ಅಗ್ನಿಹೋತ್ರದ ಕುಟೀರಂಗಳು... ಎಲ್ಲಿ ಪರಿಚಿತವಾದ ವಾದ ವೇದ ಧ್ವನಿಗಳು... ಅಲ್ಲಿಗೆ ಒಯ್ಯದೆ ದಾರುದಾರುಣದ ಕಟ್ಟಡವಿಗೆ ಇಲ್ಲಿಗೆ ಏಕೈತಂದೆ ಹೇಳು.

(ಎಂದು ಜಾನಕಿ ಸುಯ್ದಳು)

ಪಾವನಕೆ ಪಾವನಮ್; ಮಂಗಳಕೆ ಮಂಗಳಮ್ ಅದು ಆವನ ಚರಿತ್ರ ನಾಮಂಗಳು ಆ ರಾಘವನೆ ಜೀವೇಶನಾಗಿರಲ್ಕೆ, ಆತನ ಅಂಘ್ರಿಯನು ಅಗಲ್ದು ಈಗ ನಾನು ಬಂದ ಬಳಿಕ, ಈ ವನದೊಳು ಇನ್ನು ಪುಣ್ಯಾಶ್ರಮಮ್ ಗೋಚರಿಪುದೇ. ವನಜದ ಅರಳನು ಉಳಿದ ಆರಡಿಗೆ ಬೊಬ್ಬುಳಿಯ ಪೂವಿನೊಳು ಮಧುವುಂಟೆ ಸೌಮಿತ್ರಿ... ಹೇಳು.

(ಎಂದು ಸೀತೆ ಪೊದಕುಳಿಗೊಂಡಳು. ನರನಾಥ ಕೇಳು, ಅವನಿಸುತೆ ನುಡಿದ ಮಾತಿಗೆ ಉತ್ತರವನ್ ಆಡದೆ ಮನದೊಳು ಉರೆ ನೊಂದು...)

ಲಕ್ಷ್ಮಣ : (ತನ್ನ ಮನದಲ್ಲಿ)

ರಾಘವೇಶ್ವರನು ಎಂದ ಕಷ್ಟಮನು ಪೇಳ್ದಪೆನೊ... ಮೇಣ್... ಉಸಿರದೆ ಇರ್ದಪೆನೊ... ನಿಷ್ಠುರದೊಳು ತರಣಿಕುಲ ಸಾರ್ವಭೌಮನ

ರಾಣಿಯನು ಬನದೊಳು ಇರಸಿ ಪೋದಪೆನೆಂತೊ... ಪೋಗದಿರ್ದೊಡೆ ಸಹೋದರನು ಅದೇನು ಎಂದಪನೊ... ಹಾ...

(ಎಂದು ಲಕ್ಷ್ಮಣನು ಬೆಂದು ಬೇಗುದಿಗೊಂಡನು. ಕಂಬನಿಗಳು ಉಕ್ಕಿದುವು; ಅಧರೋಷ್ಠಮ್ ಅದಿರಿತು; ಒಡಲೊಳು ಅಲಗಿಕ್ಕಿ ತಿರುಪಿದವೊಲಾಯ್ತು; ಉಸಿರು ಎಡೆವರಿಯದೆ ಒಕ್ಕುದು; ಅವಯವಮ್ ಉರೆ ಕಂಪಿಸಿದುದು; ಎರ್ದೆ ಕರಗಿತು; ಸೈರಣೆ ಸಮತೆಗೆಟ್ಟುದು; ಕಂಠದೊಳ್ ಮಾತುಗಳು ಸೆರೆಬಿಗಿದು ಸಿಕ್ಕಿದುವು; ಮಿಕ್ಕು ಮೀರುವ ಶೋಕದಿಂದೆ ಬೆಂಡಾಗಿ ಕಡುಗಕ್ಕಸದ ಕೆಲಸಮನ್ ಉಸಿರಲ್ ಅರಿಯದೆ ಅವನು ಒಯ್ಯನೆ ಅವನಿಸುತೆಗೆ ಇಂತೆಂದನು.)

ಲಕ್ಷ್ಮಣ : ದೇವಿ ನಿನಗೆ ಇನ್ನೆಗಮ್ ಅದ ಪೇಳ್ದುದಿಲ್ಲ. ಅಪವಾದಮ್ ಆವರಿಸಿ ನಿನ್ನನ್ ಒಲ್ಲದೆ ರಘುಕುಲೋದ್ಭವನು ಸೀವರಿಸಿ, ಕಾಂತಾರಕ್ಕೆ ಕಳುಹಿ ಬಿಟ್ಟು ಬಾ ಎಂದು ಎನಗೆ ನೇಮಿಸಿದೊಡೆ, ಆ ವಿಭುವಿನ ಆಜ್ಞೆಯನು ಮೀರಲು ಅರಿಯದೆ ನಿಮ್ಮನು ಈ ವಿಪಿನಕೆ ಒಡಗೊಂಡು ಬಂದೆನು. ಇನ್ನು ಒಯ್ಯೊಯ್ಯನೆ ಆವಲ್ಲಿಗಾದೊಡಮ್ ಪೋಗಿ.

(ಎಂದು ಲಕ್ಷ್ಮಣನು ಬಾಷ್ಪಲೋಚನನಾದನು. ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ ಮುರಿದು ಇಳೆಗೆ ಒರಗುವಂತೆ ಲಕ್ಷ್ಮಣನ ಮಾತು ಕಿವಿದೆರೆಗೆ ಬೀಳದ ಮುನ್ನ ಅಂಗನೆ ಹಮ್ಮೈಸಿ ನಡನಡುಗುತೆ ಧರೆಗೆ ಬಿದ್ದಳು. ಅಂಗೋಪಾಂಗಮನ್ ಮರೆದಳು. ಬಳಿಕ ಸೌಮಿತ್ರಿ ಮರುಗಿ ತಣ್ಣೀರು ತಳೆದು ಪತ್ರದೊಳು ಕೊಡೆವಿಡಿದು ಸೆರಗಿಂದೆ ಬೀಸಿ, ರಾಯನ ಸೇವೆ ಸಂದುದೇ ತನಗೆ ಎಂದು ರೋದಿಸಿದನು. ಒಯ್ಯನೆ ಅರಗಳಿಗೆಯೊಳು ಕಣ್ ತೆರೆದು, ದೈನ್ಯದಿನ್ ಸುಯ್ಯೆಲರನು ಉರೆ ಸೂಸಿ, ಸೌಮಿತ್ರಿಯನು ನೋಡಿ...)

ಸೀತೆ : ಕೊರಳನು ಕೊಯ್ಯಲೊಲ್ಲದೆ ಇಂತು ತನ್ನನು ಬಿಡಲು ಮಾಡಿದ ಅಪರಾಧಮ್ ಉಂಟೆ. ಕಯ್ಯಾರೆ ಖಡ್ಗಮನ್ ಕೊಟ್ಟು ತನ್ನ ಅರಸಿಯನು ಹೊಯ್ಯೆಂದು ಪೇಳದೆ ಅಡವಿಗೆ ಕಳುಹಿ ಬಾ ಎಂದನೆ... ಅಯ್ಯಯ್ಯೊ... ರಾಘವನು ಕಾರುಣ್ಯನಿಧಿ.

(ಎಂದು ಅಂಭೋಜನೇತ್ರೆ ಅಳಲ್ದಳು.)

ರಘುಶ್ರೇಷ್ಠನು ಎನ್ನನು ಬಿಟ್ಟನೆ. ಅಕಟಕಟ, ತಾನು ಮುಟ್ಟನೆ. ನೆಗಳ್ದ

ಬಾಳ್ಕೆಗೆ ಸಂಚಕಾರಮನ್ ಕೊಟ್ಟನೆ. ಸುಮಿತ್ರಾತನುಜ, ಕಟ್ಟರಣ್ಯದೊಳು ಕಳುಹಿ ಬಾಯೆಂದು ನಿನಗೆ ನಿರೂಪಮನ್ ಕೊಟ್ಟನೆ. ತಾನು ಎನ್ನ ಕಣ್ಬಟ್ಟೆಗೆಟ್ಟನೇ. ಮನೋವಲ್ಲಭನನು ಅಗಲ್ದು ಅಡವಿಯೊಳು ನೆಟ್ಟನೆ ಪಿಶಾಚದವೊಲು ಎಂತಿಹೆನೊ. ಕೆಟ್ಟೆನಲ್ಲಾ...

(ಎಂದು ಅಬಲೆ ಒರಲ್ದಳು)

ಕೌಶಿಕಮುನಿಪನೊಡನೆ ಎಂದು ಮಿಥಿಲಾಪುರಕ್ಕೆ ಬಂದು ಹರಧನುವ ಮುರಿದು ಎನ್ನನು ಮದುವೆಯಾದನು, ಅಂದು ಮೊದಲಾಗಿ ಎನ್ನೊಳು ರಮಿಸಿದನು. ಆನ್ ಅಗಲ್ದೊಡೆ ತಾನು ನವೆದನಲ್ಲದೆ ಒಂದಿದನೆ ಸೌಖ್ಯಮನ್. ರಾಮನು ಎನಗಾಗಿ ಕಪಿವೃಂದಮನ್ ನೆರಪಿ, ಕಡಲನು ಕಟ್ಟಿ, ದೈತ್ಯರನು ಕೊಂದು, ಅಗ್ನಿಮುಖದೊಳು ಪರೀಕ್ಷಿಸಿದನು, ಎನ್ನೊಳು ಅಪರಾಧಮನ್ ಕಾಣಿಸಿದನೇ.

ಕಲ್ಲು ಮುಳ್ಳಿಡಿದ ಕಾಡೊಳು ಅಂದು ಎನ್ನನು ಉಪಚರಿಸಿ ಪಲ್ಮೊರೆದು ಗರ್ಜಿಪ ವಿರಾಧನನು ಮರ್ದಿಸಿದೆ. ರಾಘವನ ಬಳಿಗೆ ಬಲ್ಮೆಯಿಮ್ ನಾನು ಕಳುಹಿದೊಡೆ ಜನಸ್ಥಾನದಿಂದೆ ಹೋದೆ. ಸೌಮಿತ್ರಿ, ನಲ್ಮೆಯಮ್ ಮರೆದಪೆನೆ. ನೀನು ಎಲ್ಲರ ಒಲ್ಮೆ ಮೈದುನನೆ ತನಗೆ. ಕಾನನದೊಳು ಎನ್ನ ನಿಲಿಸಲು ಮನಮ್ ಬಂದಪುದೆ ತಂದೆ ನಿನಗೆ.

(ಎಂದು ಅಂಬುಜಾಕ್ಷಿ ಕಂಬನಿ ಮಿಡಿದಳು.)

ತೊಳೆವ ನಾಸಿಕದ, ನುಣ್ ಕದಪುಗಳ, ಪೊಳೆವ ಕಂಗಳ, ತುರುಗಿದ ಎವೆಯ, ನಿಡುಪುರ್ಬುಗಳ, ಪೆರೆನೊಸಲ, ಥಳಥಳಿಪ ಮಕುಟದ, ಕಿವಿಯ ಮಕರಕುಂಡಲದ, ಕೋಮಲಿತ ಚುಬುಕಾಗ್ರದ, ಲಲಿತಾರುಣ ಅಧರದ, ಮಿರುಗುವ ರದನಪಂಕ್ತಿಗಳ, ಸೂಸುವ ಎಳೆನಗೆಯ, ಮೋಹನದ ಚೆಲ್ವಿನ ಒಬ್ಬುಳಿಯೆನಿಪ ರಾಘವನ ಸಿರಿಮೊಗವನು ಅಕಟ ಎಂತು ನೋಡದೆ ಮಾಣ್ಬೆನು.

ರಾಮನನು, ಭುವನಾಭಿರಾಮನನು, ಗುಣರತ್ನಧಾಮನನು, ರಘುಕುಲೋದ್ದಾಮನನು, ರೂಪಜಿತ ಕಾಮನನು, ಸತ್ಕೀರ್ತಿ ಕಾಮನನು, ಶರಣಜನವಾರ್ಧಿಯನು, ಮಿಗೆ ಪೆರ್ಚಿಪ ಸೋಮನನು, ಸೌಭಾಗ್ಯ ಸೋಮನನು, ಕುವಲಯ ಶ್ಯಾಮನನು,

ನಿಜತನುಶ್ಯಾಮನನು, ಘನಪುಣ್ಯ ನಾಮನನು, ಸಂತತಮ್ ನಾ ಮನಂದಣಿಯೆ ರಮಿಸದೆ ಎಂತು ಬಾಳ್ವೆನು.

(ರಾಯ ಕೇಳು, ಇಂತಿಂತು ರಾಘವೇಶ್ವರನ ರಮಣೀಯ ಗುಣಮಾಲೆಯನು ನೆನೆನೆನೆದು ಹಂಬಲಿಸುತ ಆಯತಾಂಬಕಿ ಮತ್ತೆ ಮೈಮರೆಯುತ ಎಚ್ಚರುತೆ, ಪಾವ್ ಅಗಿದ ಪಸುಳೆವೊಲು ಇರೆ...)

ಲಕ್ಷ್ಮಣ : ತಾಯೆ ನಿನ್ನನು ಬಿಟ್ಟು ಪೋಗಲಾರೆನು. ಪೋಗದೆ ಈ ಅವಸ್ಥೆಯೊಳು ಇರ್ದೊಡೆ ಅಣ್ಣನು ಏಗೈದಪನೊ... ಹಾ...

(ಎಂದು ಲಕ್ಷ್ಮಣನು ಶೋಕಗದ್ಗದನಾಗೆ ಸೀತೆ ಮಗುಳ್ ಇಂತೆಂದಳು)

ಸೀತೆ : ತಂದೆ ಲಕ್ಷ್ಮಣ, ನಿನ್ನೊಳು ಎಂದೊಡೆ ಇನ್ನೇನು ಅಹುದು. ನೀನು ಹಿಂದಣ ಜನಸ್ಥಾನದ ಅಂದದೊಳು ಪೋಗು. ಕೊಂದು ಕೊಂಬೊಡೆ ತನ್ನ ಬೆಂದೊಡಲೊಳು ಬಸಿರ ದಂದುಗಮ್ ಇದೆ. ಆನ್ ಇಂದು ಕಾನನದೊಳು ಬಂದುದನು ಕಾಣ್ಬೆನು. ಕೌಸಲೆ ಅಡಿಗೆ ವಂದಿಸಿದೆನು. ಅಪರಾಧಮ್ ಒಂದುಮ್ ಇಲ್ಲದೆ ತನ್ನ ಕಂದನು ಎನ್ನನು ತೊರೆದುದನು ದೇವಿಗೆ ಒರೆವುದು.

(ಎನುತ ಅಂದು ಮೃಗಾಕ್ಷಿ ಅಳಲ್ದಳು.)

ಸೀತೆ : ಏಕೆ ನಿಂದಿಹೆ ಪೋಗು ಸೌಮಿತ್ರಿ. ಇಲ್ಲಿ ತಳುವಿದೊಡೆ ಕಾಕುತ್ಸ್ಥನು ಕೋಪಿಸನೆ. ತನಗೆ ಈ ಕಾಡೊಳು ಉಗ್ರಜಂತುಗಳಲ್ಲಿ ನೆರವುಂಟು. ರಘುನಾಥನು ಏಕಾಕಿಯಾಗಿರ್ಪನು. ಲೋಕದ ಅರಸು ಏಗೈವೊಡಮ್, ತನ್ನ ಕಿಂಕರರು ಬೇಕುಬೇಡೆಂದು ಪೇಳರೆ. ಭರತ ಶತ್ರುಘ್ನರು ಈ ಕೆಲಸಕೆ ಒಪ್ಪಿದರೆ. ಹನುಮಂತನು ಇರ್ದಪನೆ ಪೇಳು.

(ಎಂದು ಅಬಲೆ ಅಳಲ್ದಳು...)

ಸೀತೆ : ಇದು ತನ್ನ ಮರುಳಾಟಮ್. ಆರ್ ಇರ್ದೊಡೆ ಏಗೈವರು. ಆ ರಾವಣನ ತಮ್ಮನೈಸಲೆ ವಿಭೀಷಣನು ಭೀರುಗಳನರಿದಪನೆ; ಸೋದರಂಗೆ ಉರೆ ಮುಳಿದ ಸುಗ್ರೀವನ್ ಎಂಬವಂಗೆ ಕಾರುಣ್ಯಮ್ ಇರ್ದಪುದೆ; ದೇವಂಗೆ ಪೇಳುವರು ಮತ್ತುಳಿದ ಮಂತ್ರಿಗಳು ಅದಾರುಂಟು; ಘೋರಾಟವಿಗೆ ಕಳಪುವೊಡೆ ನೀನು ಒಪ್ಪಿಕೊಂಡು

ಬಂದೆ. ಇನ್ನು ಒರಲ್ದೊಡೆ ಏನಹುದು. ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ. ಕಡುಪಾತಕಮ್ ಗೈದು ಪೆಣ್ಣಾಗಿ ಸಂಭವಿಸಿದ ಒಡಲನು ಪೊರೆವುದು. ಎನ್ನೊಳು ಅಪರಾಧಮುಂಟು. ಸಾಕು ಇಲ್ಲಿರಲ್ಬೇಡ. ನಿಲ್ಲದಿರು. ನೀನು ನಡೆ ಪೋಗು. ನಿನಗೆ ಮಾರ್ಗದೊಳು ಅಡಿಗಡಿಗೆ ಸುಖಮ್ ಆಗಲಿ.

(ಎಂದು ಸೀತೆ ಕಂಬನಿಗಳನು ಮಿಡಿದು ಆರ್ತೆಯಾಗಿರಲು, ಸೌಮಿತ್ರಿ ಆ ವಿಪಿನದ ಅಭಿಮಾನಿಗಳ್ಗೆ ನುಡಿದನು.)

ಲಕ್ಷ್ಮಣ : ಎಲೆ ವನಸ್ಥಳಗಳಿರ, ವೃಕ್ಷಂಗಳಿರ, ಮೃಗಂಗಳಿರ, ಕ್ರಿಮಿಕೀಟಂಗಳಿರ, ಪಕ್ಷಿಗಳಿರ, ಲತೆಗಳಿರ, ತೃಣಗುಲ್ಮಂಗಳಿರ, ಪಂಚಭೂತಂಗಳಿರ, ದೆಸೆಗಳಿರ ಕಾವುದು. ಎಲೆ ಧರ್ಮದೇವತೆ, ಜಗಜ್ಜನನಿ ಜಾಹ್ನವಿಯೆ ತನ್ನ ಮಾತೆಯನು ಸಲಹಿಕೊಳ್ವುದು. ಎಲೆ ತಾಯೆ ಭೂದೇವಿ, ಜಾನಕಿಯನು ನಿನ್ನ ಮಗಳು ಇಹಳು.

(ಎಂದು ಸೌಮಿತ್ರಿ ಕೈಮುಗಿದನು.)

ಲಕ್ಷ್ಮಣ : ಮಾಳ್ಕೆ ಇನ್ನಾವುದು. ತನ್ನೊಡಲ ಇಬ್ಬಗಿಯಾಗಿ ಸೀಳ್ ಕೆಡಹಬೇಡನೆ. ಧರಿತ್ರಿಯೊಳು ನಿಷ್ಠುರದ ಬಾಳ್ಕೆಯನು ಸುಡಲಿ.

(ಎನುತೆ ಲಕ್ಷ್ಮಣನು ದೇವಿಯನು ಬಲವಂದು ನಮಿಸಿ, ಬಳಿಕ ಬೀಳ್ಕೊಂಡು ನಡೆಯಲ್ಕೆ, ಮನಮ್ ಹಿಂದುಹಿಂದಕೆ ದೂಳ್ಕಾಯದೊಳು ಪತ್ತಿ ಪೊರಳ್ವ ಸೀತೆಯ ಕಡೆಗೆ... ಎಂದುಮ್ ಅಗಲದ ಅಣ್ಣನ ಕಡೆಗೆ... ನೀಳ್ಕುಳಿಗೊಳಲ್ಕೆ ತೂಗುಯ್ಯಲೆವೊಲಾದನು. ನಡೆಗೊಳಲು ಬಾಯಾರ್ವಳನು... ಚೀರ್ವಳನು... ಕಡಲಿಡುವ ಕಂಬನಿಯೊಳು ಆಳ್ವಳನು... ಬೀಳ್ವಳನು... ಪುಡಿಯೊಳು ಪೊರಳ್ದು ಬಸವಳಿವಳನು... ಸುಳಿವಳನು ಕಂಡು ಭರತಾವರಜನು ಅಗಲ್ದು... ಅಡಿಗಡಿಗೆ ತಿರುತಿರುಗಿ ನೋಡುವನು... ಬಾಡುವನು... ಬಿಡದೆ ಬಿಸುಸುಯ್ದು ಬೆಂಡಾದಪನು... ಪೋದಪನು... ಪೊಡೆಮರಳ್ವನು... ನಿಲ್ವನು... ಅಳಲುವನು ಬಳಲುವನು ಬಟ್ಟೆಯೊಳು ದಿಟ್ಟಿಗೆಟ್ಟು, ತಾಯನು ಎಳೆಗರು ಬಿಚ್ಚುವಂತೆ ಒಯ್ಯನೊಯ್ಯನೆ ಅತ್ಯಾಯಾಸದಿಂದೆ ಅಗಲ್ದು, ಅಮರನದಿಯನು ದಾಂಟಿ ದುಃಖಾರ್ತನಾಗಿ ಅತ್ತಲ್ ಸೌಮಿತ್ರಿ ಸಾಗಿದನು.

❖

ನೋಟ–೬

ರಾಯ ಕೇಳು, ಲಕ್ಷ್ಮಣನ ತಲೆ ಮಸುಳಲು, ಇತ್ತಲು ಇವಳು ಬಾಯಾರಿ ಕಂಗೆಟ್ಟು 'ಆ' ಎಂದು ಒರಲ್ದು, ಭಯ ಶೋಕದಿಂದ ಅಸವಳಿದು, ಕಾಯಮನು ಮರೆದು, ಮೂಲಮನು ಕೊಯ್ದ ಎಳೆಯ ಬಳ್ಳಿಯಂತೆ ಅವನಿಗೆ ಒರಗಿದಳು.

ಅರಸ ಕೇಳು, ಅಲ್ಲಿರ್ದ ಪಕ್ಷಿ ಮೃಗ ಜಂತುಗಳು ಧರಣಿಸುತೆಯನು ಬಳಸಿ ನಿಂದು, ಮೈಯುಡಗಿ ಜೋಲ್ದು ಇರದೆ ಕಂಬನಿಗರೆದು, ನಿಜವೈರಮನು ಮರೆದು, ಪುಲ್ ಮೇವುಗಳನೆ ತೊರೆದು ಕೂಡೆ ಕೊರಗುತಿರ್ದುವು. ವೃಕ್ಷಲತೆಗಳು ಬಾಡಿ ಸೊರಗುತಿರ್ದುವು. ಶೋಕಭಾರದಿನ್ ಕಲ್ಗಳುಮ್ ಕರಗುತಿರ್ದುವು. ಜಗದೊಳು ಉತ್ತಮರ ಹಾನಿಯನು ಕಂಡು ಸೈರಿಸುವರುಂಟೆ. ಅರರೆ... ಆಕೆಯ ಅಂಗಮನು ನೋಡಿನೋಡಿ... ರಾಘವನ ರಾಣಿ ದುಃಖಸಂತಪ್ತೆಯಾಗಿರುತಿರಲ್ಕೆ...

ಜಾನಕಿಯ ಶೋಕಮ್ ತಮ್ಮದು ಎಂದು ತುಂಬಿ ಮೊರೆಯಲೊಲ್ಲವು; ನವಿಲ್ ಕುಣಿಯಲೊಲ್ಲವು; ಕೋಕಿ ಬೆರೆಯಲೊಲ್ಲವು; ಹಂಸೆ ನಡೆಯಲೊಲ್ಲವು; ಪಿಕಮ್ ಕರೆಯಲೊಲ್ಲವು; ಶುಕಮ್ ನುಡಿಯಲೊಲ್ಲವು; ಚಕೋರ ನಲಿಯಲೊಲ್ಲವು; ಹರಿಣಿ ನೆರೆಯಲೊಲ್ಲವು; ಕರಿಣಿ ಒಲೆಯಲೊಲ್ಲವು; ಚಮರಿ ಪೊರೆಯಲೊಲ್ಲವು; ಸಿಂಗಮ್ ಮೆರೆಯಲೊಲ್ಲವು. ಚಮರಿಗಳು ಚಮರಮನ್ ಬಾಲದೊಳು ಬೀಸಿದುವು. ಕರಿಗಳು ಎಳೆದಳಿರ ಮೃದುತಲ್ಪಮನು ಪಾಸಿದುವು. ಸಾರಸಂಗಳು ತಮ್ಮ ಗರಿಗಳನು ತೋದು ತಂದು ಅಂಬುಗಳನು ಸೂಸಿದುವು. ಅಂಚೆಗಳು ಆಗಸದೊಳು ಓಸರಿಸದ ಎರಂಕೆಯನು ಅಗಲ್ಚಿ ಆ ಸಿರಿಮೊಗಕ್ಕೆ ಬಿಸಿಲಾಗದಂತೆ ನೆಳಲಾಸೆ ಗೈದುವು.

ಸುರನದಿಯ ತೆರೆತೆರೆಯ ನಡುನಡುವೆ ಬಿದ್ದೆದ್ದು ಬರಲಾರದಿರ್ದೊಡಮ್, ಮತ್ತೆ ಗಂಗೆಯೊಳು ಅಲರ್ದ ಅರವಿಂದ ಗಂಧದ ಅತಿಭಾರಮನು ಪೊರಲಾರದೆ ಇರ್ದೊಡಮ್, ಧರಣಿಸುತೆಯ ಪರಿತಾಪಮನು ತವಿಸದೆ ಇರಬಾರದೆಂದು

ತರಹರದೊಳು ಒಯ್ಯೊಯ್ಯನೆ ಐತಂದು ಸುಖ ಸ್ಪರುಶವಾತಮ್ ಬೀಸಿತು. ಜಗದೊಳು ಉಪಕಾರಿಯಾದವನು ತನ್ನ ನೋವನು ನೋಳ್ಪನೆ. ಪೃಥ್ವಿಯಾತ್ಮಜೆ ಬಳಿಕ ಚೇತರಿಸಿ, ತನಗೆ ಇನ್ನು ಪಥಮ್ ಆವುದೆಂದು ದೆಸೆದೆಸೆಗಳನು ನೋಡಿ, ಸಲೆ ಶಿಥಿಲಮ್ ಆದ ಅವಯವದ, ದೂಳಿಡಿದ ಮೈಯ, ಬಿಡುಮುಡಿಯ ವಿಕೃತಿಯನು ಎಣಿಸದೆ...

ಸೀತೆ : ಮಿಥಿಲೇಂದ್ರವಂಶದೊಳು ಜನಿಸಿ ರಘುಕುಲದ ದಶರಥನೃಪನ ಸೊಸೆಯಾಗಿ ತನಗೆ ಕಟ್ಟಡವಿಯೊಳು ವ್ಯಥಿಸುವಂತಾಯ್ತು ಅಕಟ... ವಿಧಿ.

(ಎಂದು ಕಲ್ಮರನು ಕರಗುವಂತೆ ಹಲುಬಿದಳು.)

ಸೀತೆ : ಕೇಣಮನು ಬಿಟ್ಟು ಆತ್ಮಘಾತಕದೊಳು ಈ ಕ್ಷಣಮ್ ಪ್ರಾಣಮನ್ ತೊರೆದಪೆನೆ, ಗರ್ಭದಿನ್ ಭ್ರೂಣಹತ್ಯಾ ದೋಷಮ್ ಬಂದಪುದು. ಏಗೈವೆನು... ಆರ್ಗೆ ಒರೆವೆನು.

(ಎಂದು ಒಯ್ಯನೆ ಎದ್ದು, ಬಳಿಕ ಏಣಾಕ್ಷಿ ಅಡವಿಯೊಳು ನಡೆದಳು. ಉಪಲ ಕಂಟಕ ಶ್ರೇಣಿಗಳು ಸೊಂಕಿ, ಮೆಲ್ಲಡಿಗಳಿನ್ ಬಸಿವ ನವ ಶೋಣಿತಮ್ ನೆಲದೊಳು ಪೊನಲು ಪರಿಯಲು... ಅರಸ ಕೇಳು, ಪೆಣ್ಣೊಡಲು ಪಿಡಿಯಬಹುದೆ.)

ಅನ್ನೆಗಮ್ ಮಖಕೆ ಯೂಪವನು ಅರಸುತ ಆ ಬನಕೆ ಸನ್ನುತ ತಪೋಧನನ್ ವಾಲ್ಮೀಕಿ ಮುನಿವರನು ತನ್ನ ಶಿಷ್ಯರು ಬೆರಸಿ ನಡೆತಂದು, ಕಾಡೊಳು ಒರ್ವಳೆ ಪುಗಲು ದೆಸೆಗಾಣದೆ, ಬಗೆಗೆಟ್ಟು ಬನ್ನದಿನ್ ಪಾಡಳಿದು, ಗ್ರೀಷ್ಮಋತುವಿನ್ ನವೆದ ಕಾಂತಾರದ ಅಧಿದೇವಿ ತಾನು ಎನಲು ಸನ್ನಗದ್ಗದಕಂಠಿಯಾಗಿ ರೋದಿಸುತಿರ್ದ ವೈದೇಹಿಯನು ಕಂಡನು.)

ವಾಲ್ಮೀಕಿ: ಆರ್ ಇವಳು... ಈ ವನಾಂತರದೊಳು ಇದೇತಕೆ ಇರ್ದಪಳು... ಇದನು ಆರೈವೆನು.

(ಎಂದು ನಡೆತಂದು , ಕರುಣದಿಂದೆ ಆ ರುಷಿ ನುಡಿಸಿದನು.)

ಎಲೆ ತಾಯೆ, ನೀನು ಆವಳೌ... ಕಂಡ ಕುರುಪಾಗಿರ್ಪುದು. ಅಕಟ, ಘೋರತರ ಗಹನಕೆ ಒರ್ವಳೆ ಎಂತು ಬಂದೆ. ಹೆದರಬೇಡ, ಭೀರು

ಹೇಳೌ. ನಾನು ವಾಲ್ಮೀಕಿ. ಭೂರಿಶೋಕಾರ್ತರಾಗಿರ್ದರನು ಕಂಡು ಸುಮ್ಮನೆ ಪೋಪನಲ್ಲ.

(ಎಂದನು. ಹರುಷಮ್ ಒತ್ತರಿಸಿದುದು... ಶೋಕ ಇಮ್ಮಡಿಸಿದುದು... ಭೂಮಿಜೆಗೆ ಲಜ್ಜೆ ಬೆರಸಿದುದು. ಅಂದು ಗದ್ಗದ ಸ್ವರದಿಂದ ಸೀತೆ)

ಸೀತೆ : **"ತರಣಿಕುಲಸಂಭವನು ತಾ ಲೋಕಾಪವಾದಕೆ, ಅಪರಾಧಿಯಲ್ಲದ ತನ್ನನು ಬಿಟ್ಟನು"** ಎಂದು ಸುಮಿತ್ರಾತ್ಮಜನು ಈ ವನದೊಳಿರಿಸಿ ಪೋದನು... ಜೀವಮನ್ ಪೊರೆಯವೇಳ್ವುದೆ... ಗರ್ಭಮ್ ಒಡಲೊಳು ಇಹುದು. ಏಗೈವೆನು.

(ಎಂದು ಮುನಿಪದದೊಳು ಎರಗಿದಳು.)

ವಾಲ್ಮೀಕಿ: ದೇವಿ ಶೋಕಮನ್ ಬಿಡು. ಪುತ್ರಯುಗಮನ್ ಪಡೆವೆ. ಇನ್ನು ಸಂದೇಹಮನ್ ಭಾವಿಸದಿರ್. ಜನಕಂಗೆ ನಾವು ಅನ್ಯರಲ್ಲ. ನಮ್ಮ ಆಶ್ರಮಕೆ ಬಂದು ನೀನು ಸುಖದೊಳು ಇರ್ದೊಡೆ, ಆವಾವ ಬಯಕೆಯುಂಟು ಎಲ್ಲಮನು ಸಲಿಸಿ, ನಿನ್ನನು ತಾನು ಓವಿಕೊಂಡಿರ್ಪೆನು. ಅಂಜದಿರು.

(ಎಂದು ಸಂತೈಸಿ ರಾವಣಾರಿಯ ರಾಣಿಯನು ನಿಜತಪೋವನಕೆ ವಾಲ್ಮೀಕಿ ಕರೆತಂದನು.)

❖

ಪದ ವಿಂಗಡಣೆ ಮತ್ತು ತಿರುಳು

ನೋಟ – ಒಂದು

ಶರಣ=ಆಶ್ರಯ; ವತ್ಸಲ=ಪ್ರೀತಿಯುಳ್ಳವನು; ಶರಣಜನ ವತ್ಸಲ=ರಾಮ. ಇದೊಂದು ಗುಣವಾಚಕ ನುಡಿಗಟ್ಟು. ತನ್ನನ್ನು ಆಶ್ರಯಿಸಿದವರನ್ನು ಪ್ರೀತಿಯಿಂದ ಕಾಪಾಡುವ ವ್ಯಕ್ತಿ; ಉತ್ಸವ=ಸಾಂಸ್ಕೃತಿಕ ಆಚರಣೆ; ಅನಿಬರ್+ಎಲ್ಲರನು; ಅನಿಬರ್=ಅವರು; ಸತ್ಕರಿಸಿ=ಉಪಚರಿಸಿ/ಆರಯಿಕೆ ಮಾಡಿ; ಬೀಳ್ಕೊಟ್ಟು=ಕಳುಹಿಸಿಕೊಟ್ಟು;

ಶರಣಜನ ವತ್ಸಲನು ಉತ್ಸವಕೆ ಬಂದ ಅನಿಬರೆಲ್ಲರನು ಸತ್ಕರಿಸಿ ಬೀಳ್ಕೊಟ್ಟು= ಅಯೋಧ್ಯೆಯ ಅರಮನೆಯಲ್ಲಿ ಆಚರಿಸಿದ ಬಸುರಿ ಸೀತೆಯ ಸೀಮಂತದ ಉತ್ಸವಕ್ಕೆ ಬಂದಿದ್ದ ಗುರುಹಿರಿಯರು ಮತ್ತು ನೆಂಟರಿಷ್ಟರೆಲ್ಲರನ್ನೂ ರಾಮನು ಉಪಚರಿಸಿ ಕಳುಹಿಸಿಕೊಟ್ಟು;

ಸಂಪತ್ತು=ಸಿರಿ; ರಾಜಸಂಪತ್ತು=ರಾಜ್ಯದ ಒಡೆತನ; ಇರ್ಪ+ಅನಿತರೊಳ್; ಇರ್ಪ=ಇರುವ; ಅನಿತರೊಳ್=ಆ ಸಮಯದಲ್ಲಿ;

ರಾಜಸಂಪತ್ ಸುಖದೊಳು ಇರ್ಪನಿತರೊಳು=ರಾಜ್ಯದ ಒಡೆತನದಲ್ಲಿ ರಾಮ ಮತ್ತು ಸೀತೆ ಆನಂದ ಹಾಗೂ ನೆಮ್ಮದಿಯಿಂದ ಇರುತ್ತಿರಲು;

ಬಳಿಕ=ತರುವಾಯ/ಅನಂತರ; ನಿಜ=ತನ್ನ; ಕಾಂತ=ಗಂಡ; ನಿಜಕಾಂತ= ರಾಮ; ಏಕಾಂತ=ಒಬ್ಬನೇ ಇರುವುದು; ಐದಿ=ಬಳಿಬಂದು/ಹತ್ತಿರಕ್ಕೆ ಬಂದು;

ಬಳಿಕ ಸೀತೆ ನಿಜಕಾಂತನ ಏಕಾಂತಕೆ ಐದಿ=ಒಂದು ದಿನ ಅರಮನೆಯಲ್ಲಿ ರಾಮನು ಒಬ್ಬನೇ ಇರುವಾಗ ಅವನ ಬಳಿಸಾರಿ ಬಂದು;

ಕುತ್ಸಿತ+ಅಮ್; ಕುತ್ಸಿತ=ನಿಂದೆ/ತೆಗಳಿಕೆ; ಅಮ್=ಅನ್ನು; ಪೊರ್ದು=ಹೊಂದು/ಪಡೆ; ಪೊರ್ದು>ಪೊದ್ದು; ಪೊದ್ದದ=ಪಡೆಯದ/ಹೊಂದದ; ಆಶ್ರಮ=ಕಾಡಿನಲ್ಲಿ ಮುನಿದಂಪತಿಗಳು ವಾಸಿಸುವ ನೆಲೆ; ಸತ್ಸಂಗದ+ಒಳ್; ಸತ್ಸಂಗ=ಒಳ್ಳೆಯವರ ಸಹವಾಸ; ಒಳ್=ಅಲ್ಲಿ; ಬೇಸರ+ಅನ್; ಬೇಸರ=ಉತ್ಸಾಹವಿಲ್ಲದಿರುವುದು; ಅನ್=ಅನ್ನು; ತವಿಸು=ನಿವಾರಿಸು/ಪರಿಹರಿಸು; ತವಿಸುವೆನು=ಹೋಗಲಾಡಿಸಿಕೊಳ್ಳುತ್ತೇನೆ;

ಕುತ್ಸಿತಮ್ ಪೊದ್ದದ ಆಶ್ರಮದ ಋಷಿಪತ್ನಿಯರ ಸತ್ಸಂಗದೊಳು ತನ್ನ ಬೇಸರನು ತವಿಸುವೆನು=ಇತರರಿಂದ ನಿಂದೆಯನ್ನಾಗಲಿ ಇಲ್ಲವೇ ಕೆಟ್ಟ ಹೆಸರನ್ನಾಗಲಿ ಪಡೆಯದ ಆಶ್ರಮವಾಸಿಗಳಾಗಿರುವ ಮುನಿಪತ್ನಿಯರ ಒಳ್ಳೆಯ ಸಹವಾಸದಲ್ಲಿ ನನ್ನ ಬೇಸರವನ್ನು ಹೋಗಲಾಡಿಸಿಕೊಳ್ಳುತ್ತೇನೆ;

ಉತ್ಸುಕ=ಚಟುವಟಿಕೆ/ಕ್ರಿಯಾಶೀಲತೆ;

ಇದು ತನಗೆ ಉತ್ಸುಕಮ್=ಮುನಿಪತ್ನಿಯರ ಒಡನಾಟದಿಂದ ನನ್ನ ಮಯ್ ಮನಸ್ಸು ಉತ್ಸಾಹಗೊಂಡು ಆನಂದವನ್ನು ಪಡೆಯುತ್ತದೆ;

ಅದರಿನ್=ಆದ್ದರಿಂದ; ಬನ=ಕಾಡು; ಕ್ಷಿತಿ=ಭೂಮಿ; ಕ್ಷಿತಿಜೆ=ಭೂದೇವಿಯ ಮಗಳಾದ ಸೀತೆ. ಜನಕರಾಜನು ಯಾಗವೊಂದನ್ನು ಮಾಡಲೆಂದು ಭೂಮಿಯನ್ನು ಉಳುತ್ತಿದ್ದಾಗ, ನೇಗಿಲಗೆರೆಗೆ ಸಿಕ್ಕಿದ ಪೆಟ್ಟಿಗೆಯೊಂದರಲ್ಲಿ ಒಂದು ಹೆಣ್ಣು ಮಗು ಸಿಕ್ಕಿತು. ಈ ಮಗುವಿಗೆ ಸೀತೆ ಎಂಬ ಹೆಸರನ್ನಿಟ್ಟು ಜನಕರಾಜನು ತನ್ನ ಮಗಳಂತೆ ಸಾಕಿ ಬೆಳೆಸಿದನು ಎಂಬ ವಿವರ ವಾಲ್ಮೀಕಿ ರಾಮಾಯಣ ಮಹಾಕಾವ್ಯದಲ್ಲಿದೆ; ಬಯಕೆ+ಅನ್; ಬಯಕೆ=ಆಸೆ; ಬಿನ್ನೈಸು=ಹೇಳಿಕೊಳ್ಳಲು/ಅರಿಕೆ ಮಾಡಿಕೊಳ್ಳಲು;

ಅದರಿನ್ ಇನ್ನೊಮ್ಮೆ ಬನಕೆ ತನ್ನನು ಕಳುಹಬೇಕು ಎಂದು ಆ ಕ್ಷಿತಿಜೆ ಬಯಕೆಯನು ಬಿನ್ನೈಸೆ=ಆದ್ದರಿಂದ ಮತ್ತೊಮ್ಮೆ ನನ್ನನ್ನು ಕಾಡಿಗೆ ಕಳುಹಿಸಿಕೊಡಿ ಎಂದು ಬಸುರಿಯಾಗಿರುವ ಸೀತೆಯು ತನ್ನ ಮನದ ಆಸೆಯನ್ನು ರಾಮನೊಡನೆ ಹೇಳಿಕೊಳ್ಳಲು;

ಆಕ್ಷೇಪ+ಇಂದೆ; ಆಕ್ಷೇಪ=ಇತರರು ಹೇಳಿದ ಮಾತು ಇಲ್ಲವೇ ಮಾಡಿದ ಕೆಲಸವನ್ನು ಸರಿಯಲ್ಲವೆಂದು ಹೇಳುವುದು; ಕಳುಹುವನ್+ಆಗಿ; ಸಂತೈಸಿ=ಸಾಂತ್ವನಗೊಳಿಸಿ/ಸಮಾಧಾನ ಹೇಳಿ;

ಕೇಳ್ದು ನಗುತ, ಆಕ್ಷೇಪದಿಂದೆ ಕಳುಹುವನಾಗಿ ಸಂತೈಸಿ=ಕಾಡಿನಲ್ಲಿಯೇ

ಹದಿನಾಲ್ಕು ವರುಶ ಕಳೆದು ಬಂದಿರುವ ಸೀತೆಯ ಇಂತಹ ಬಯಕೆಯನ್ನು ತಿಳಿದು ರಾಮನಿಗೆ ನಗು ಬಂತು. ಬಸುರಿಯಾಗಿರುವ ನೀನು ಇಂತಹ ಸಮಯದಲ್ಲಿ ಕಾಡಿಗೆ ಹೋಗುವುದು ತರವಲ್ಲವೆಂದು ಸೀತೆಗೆ ಹೇಳುತ್ತ, ಅವಳ ಮನಸ್ಸನ್ನು ನೋಯಿಸಬಾರದೆಂದು "ನೋಡೋಣ, ಕಳುಹಿಸುತ್ತೇನೆ" ಎಂದು ಆಕೆಯನ್ನು ಸಮಾಧಾನಪಡಿಸಿದ;

ರಾಕ್ಷಸ+ಅಂತಕನ್; ಅಂತಕ=ಯಮ; ರಾಕ್ಷಸಾಂತಕ=ರಾಮ. ರಕ್ಕಸನಾದ ರಾವಣನನ್ನು ಕೊಂದವನು; ಇರಲ್ಕೆ=ಇರಲು;

ರಾಕ್ಷಸಾಂತಕನು ಇರಲ್ಕೆ=ರಾಮನು ರಾಜ್ಯವನ್ನು ಆಳುತ್ತಿರುವಾಗ;

ಒಂದು+ಇರುಳ್; ಇರುಳ್=ರಾತ್ರಿ;

ಒಂದಿರುಳು ಕನಸು ಕಂಡು ಏಳುತೆ=ಒಂದು ರಾತ್ರಿ ಕನಸೊಂದನ್ನು ಕಂಡು ಎಚ್ಚರಗೊಂಡು ಮೇಲೆದ್ದು;

ವಸಿಷ್ಠನೊಡನೆ=ಮುನಿಗಳಾದ ವಸಿಷ್ಠರ ಬಳಿಗೆ ಬಂದು;

ಕ್ಷೋಣಿ=ಭೂಮಿ; ಸುತೆ=ಮಗಳು; ಕ್ಷೋಣಿಸುತೆ=ಭೂದೇವಿಯ ಮಗಳಾದ ಸೀತೆ; ಗಂಗೆ+ಅನ್; ಗಂಗೆ=ಗಂಗಾ ನದಿ; ಕಳೆದು=ದಾಟಿ; ಕಾಡು+ಒಳ್; ಮಹಾಕ್ಷೀಣೆ+ಆಗಿ; ಕ್ಷೀಣ=ಸೊರಗಿದ/ಕುಗ್ಗಿದ; ಮಹಾಕ್ಷೀಣೆ=ಬಹಳ ಸೊರಗಿದವಳಾಗಿ/ಕಳಾಹೀನಳಾಗಿ;

ಈ ಕ್ಷೋಣಿಸುತೆ ಗಂಗೆಯನು ಕಳೆದು ಕಾಡೊಳು ಮಹಾಕ್ಷೀಣೆಯಾಗಿ=ಸೀತೆಯು ಗಂಗಾ ನದಿಯ ಪ್ರಾಂತ್ಯವನ್ನು ದಾಟಿ ಕಾಡನ್ನು ಹೊಕ್ಕು ತುಂಬಾ ಸೊರಗಿದವಳಾಗಿ;

ದೇಸಿಗರ್+ಅಂತೆ; ದೇಸಿಗ=ಗತಿಯಿಲ್ಲದ ವ್ಯಕ್ತಿ/ದಿಕ್ಕುದೆಸೆಯಿಲ್ಲದ ವ್ಯಕ್ತಿ; ಅಂತೆ=ಹಾಗೆ; ದೆಸೆ=ದಿಕ್ಕು; ಈಕ್ಷಿಸು=ನೋಡು;

ದೇಸಿಗರಂತೆ ದೆಸೆದೆಸೆಯನು ಈಕ್ಷಿಸುತೆ=ಗತಿಯಿಲ್ಲದವರಂತೆ ಅಸಹಾಯಕಳಾಗಿ ದಿಕ್ಕು ದಿಕ್ಕುಗಳನ್ನು ನೋಡುತ್ತ;

ಮರುಗು=ಸಂಕಟಪಡು; ಇರ್ದುದನು=ಇರುವುದನ್ನು;

ಮರುಗುತ ಅಳುತ ಇರ್ದುದನು ಕಂಡೆನು=ಸಂಕಟದಿಂದ ಬಾಯ್ಬಿಡುತ್ತ, ಅಳುತ್ತ ಕಾಡಿನಲ್ಲಿ ದಿಕ್ಕುಕಾಣದೆ ತೊಳಲಾಡುತ್ತಿರುವುದನ್ನು ಕಂಡೆನು;

ಲೇಸು+ಅಹುದೆ; ಲೇಸು=ಒಳ್ಳೆಯದು; ಅಹುದೆ=ಆಗಿರುವುದೇ;

ಇದು ಲೇಸಹುದೆ ಪೇಳು ಎಂದನು=ಈ ಕನಸಿನ ಪರಿಣಾಮ ಒಳ್ಳೆಯದೇ ಎಂಬುದನ್ನು ತಿಳಿಯ ಹೇಳಿರಿ ಎಂದು ರಾಮನು ವಸಿಷ್ಠ ಮುನಿಯನ್ನು ಕೇಳಿದನು;

ಎನೆ=ಎನ್ನಲು; ಒಳ್ಳಿತು+ಅಲ್ಲ; ಶಾಂತಿ+ಅನ್; ಶಾಂತಿ=ಮುಂದಿನ ದಿನಗಳಲ್ಲಿ ಉಂಟಾಗಲಿರುವ ಕೇಡನ್ನು ತಡೆಗಟ್ಟಿ, ಒಳ್ಳೆಯದಾಗಲಿ ಎಂಬ ಉದ್ದೇಶದಿಂದ ಜನರು ಮಾಡುವ ಜಪ, ತಪ, ಹೋಮ ಮುಂತಾದ ಪೂಜೆಯ ಆಚರಣೆಗಳು; ವರ=ಉತ್ತಮನಾದ; ನೆಗಳ್=ಮಾಡು/ಆಚರಿಸು; ನೆಗಳ್ಚಿದನ್=ಮಾಡಿಸಿದನು;

ಕನಸಿದು ಒಳ್ಳಿತಲ್ಲ ಎಂದು ಅದಕೆ ಶಾಂತಿಯನು ಮುನಿವರ ವಸಿಷ್ಠನು ನೆಗಳ್ಚಿದನು=ಇಂತಹ ಕನಸು ಒಳ್ಳೆಯದಲ್ಲ. ಇದು ಕೇಡಿನ ಮುನ್ಸೂಚನೆಯಂತಿದೆ ಎಂದು ಹೇಳಿ, ರಾಮಸೀತೆಯರ ಪಾಲಿಗೆ ಬರಲಿರುವ ಕೇಡು ಪರಿಹಾರಗೊಂಡು ಒಳಿತಾಗಲೆಂಬ ಉದ್ದೇಶದಿಂದ ರಾಮನಿಂದ ಶಾಂತಿಯ ಪೂಜೆಯನ್ನು ವಸಿಷ್ಠನು ಮಾಡಿಸಿದನು;

❖

ನೋಟ – ಎರಡು

ಅನುತಾಪ+ಇನ್; ಅನುತಾಪ=ಬೇಗೆ/ಉರಿ; ಮನದ ಅನುತಾಪ= ಮನಸ್ಸಿನ ಸಂಕಟ/ವೇದನೆ; ಆರಯ್=ಕಾಪಾಡು;

ಮನದ ಅನುತಾಪದಿನ್ ಪ್ರಜೆಯನು ಆರೈವುದನು ಮರೆದು ಎರಡು ಮೂರು ದಿವಸಮ್ ಇರ್ದು ಬಳಿಕ=ಕೆಟ್ಟ ಕನಸಿನಿಂದ ಮಾನಸಿಕವಾಗಿ ಗಾಸಿಗೊಂಡಿರುವ ರಾಮನು ಸೀತೆಗೆ ಏನಾಗುವುದೋ ಎಂಬ ಆತಂಕದಿಂದ ಸಂಕಟಪಡುತ್ತ ಪ್ರಜೆಗಳ ಹಿತವನ್ನೇ ಮರೆತಿದ್ದವನು, ಎರಡು ಮೂರು ದಿನಗಳ ನಂತರ;

ಅಲಸು=ಬೇಸರಗೊಳ್ಳು/ಜುಗುಪ್ಸೆ ಹೊಂದು; ಪೊರಮಡು=ತೆರಳು/ ಹೊರಡು; **'ಜನಮ್ ಅಲಸಿದಪುದು' ಎಂದು ರಾತ್ರಿಯೊಳು ಪೊರಮಟ್ಟು**=ನಾನು ಹೀಗಿದ್ದರೆ ಪ್ರಜೆಗಳು ನನ್ನ ಬಗ್ಗೆ ಬೇಸರಪಟ್ಟುಕೊಳ್ಳುವರು ಎಂಬ ಆತಂಕದಿಂದ ರಾಮನು ಒಂದು ದಿನ ರಾತ್ರಿಯ ಸಮಯದಲ್ಲಿ ಅರಮನೆಯಿಂದ ಹೊರಟು; ದಿನಪ=ಸೂರ್ಯ; ಕುಲ=ವಂಶ; ತಿಲಕ=ಉತ್ತಮನಾದ ವ್ಯಕ್ತಿ; ದಿನಪಕುಲತಿಲಕ=ರಾಮ. ಇದೊಂದು ಗುಣವಾಚಕ ನುಡಿಗಟ್ಟು. ಸೂರ್ಯವಂಶದಲ್ಲಿಯೇ ಉತ್ತಮನೆಂದು ಹೆಸರನ್ನು ಪಡೆದಿರುವ ವ್ಯಕ್ತಿಯಾದ ರಾಮ;

ಏಕಾಂತದೊಳು=ಒಬ್ಬಂಟಿಯಾಗಿ; ಶೋಧನೆ=ಪರಿಶೀಲನೆ; ಚಾರ=ದೂತ; ನಗರ ಶೋಧನೆಯ ಚಾರ=ನಗರದ ಗುಪ್ತಚಾರ. ನಗರದಲ್ಲಿ ಮಾರುವೇಷದಿಂದ ಸಂಚರಿಸುತ್ತ ಪ್ರಜೆಗಳ ಬಗೆಗಿನ ಮಾಹಿತಿಗಳನ್ನು ರಾಜನಿಗೆ

ಗುಟ್ಟಾಗಿ ತಿಳಿಸುವ ದೂತ; ವಿನಯ+ಉಕ್ತಿ+ಇಂದೆ; ವಿನಯ=ಆದರ/ವಿಶ್ವಾಸ; ಉಕ್ತಿ=ಮಾತು/ನುಡಿ;

ದಿನಪ ಕುಲತಿಲಕನು ಏಕಾಂತದೊಳು ನಗರ ಶೋಧನೆಯ ಚಾರರೊಳು ಒರ್ವನನು ಕರೆಸಿ ವಿನಯೋಕ್ತಿಯಿಂದೆ ಇಂತೆಂದು ಕೇಳ್ದನು=ರಾಮನು ಏಕಾಂತದಲ್ಲಿ ಅಯೋಧ್ಯಾ ನಗರದ ಗುಪ್ತಚಾರರಲ್ಲಿ ಒಬ್ಬನನ್ನು ತನ್ನ ಬಳಿಗೆ ಕರೆಯಿಸಿ, ಆತ್ಮೀಯವಾದ ನುಡಿಯಿಂದ ಈ ರೀತಿ ಕೇಳಿದನು; ಇನ್ನೆಗಮ್=ಇದುವರೆಗೂ/ಇಂದಿನ ತನಕ; ನಿಂದೆ=ತೆಗಳಿಕೆ/ಬಯ್ಯುವಿಕೆ; **ಇನ್ನೆಗಮ್ ಪ್ರಜೆಗಳು ನಿಂದಿಸರಲೇ**=ಇದುವರೆಗಿನ ನನ್ನ ಆಡಳಿತದಲ್ಲಿ ಉಂಟಾಗಿರಬಹುದಾದ ಯಾವುದಾದರೂ ತಪ್ಪುಗಳನ್ನು ಕುರಿತು ಪ್ರಜೆಗಳು ನನ್ನನ್ನು ತೆಗಳುತ್ತಿಲ್ಲವೇ?

ಗುಣ=ನಡತೆ; ಪಳಿವು=ಆರೋಪ; ಒಂದಿಸು=ಕೂಡಿಸು/ಸೇರಿಸು; **ತನ್ನ ಗುಣಕೆ ಪಳಿವನು ಒಂದಿಸರಲೇ**=ನನ್ನ ನಡೆನುಡಿಯನ್ನು ಕುರಿತು ಯಾವುದೇ ಬಗೆಯ ಆರೋಪವನ್ನು ಮಾಡುತ್ತಿಲ್ಲವೇ?: ಅಮಲ=ಕೊಳೆಯಿಲ್ಲದ; ತರ=ರೀತಿ/ಬಗೆ; ಕೀರ್ತಿ=ಯಶಸ್ಸು; ಕಂದಿಸು=ಕಳಂಕ ಹಚ್ಚು; **ಅಮಲತರ ಕೀರ್ತಿಯನು ಕಂದಿಸರಲೇ**=ನಮ್ಮ ರಾಜ ಮನೆತನಕ್ಕಿರುವ ದೊಡ್ಡ ಹೆಸರಿಗೆ ಕಳಂಕವನ್ನು ಹಚ್ಚುತ್ತಿಲ್ಲವೇ?;

ಭುಜ=ತೋಳು; ವಿಜಯ=ಗೆಲುವು; ಪ್ರತಾಪ=ಶಕ್ತಿ/ಪರಾಕ್ರಮ; ತೇಜ=ಹೊಳಪು/ಕಾಂತಿ; ಇಳೆ+ಒಳು; ಇಳೆ=ಭೂಮಿ; ದೂಸರ್+ಇಂದೆ; ದೂಸರು=ಅಪವಾದ; ನಂದಿಸು=ನಾಶಮಾಡು/ಇಲ್ಲದಂತೆ ಮಾಡು; **ಭುಜವಿಜಯ ಪ್ರತಾಪ ತೇಜವನು ಇಳೆಯೊಳು ದೂಸರಿಂದೆ ನಂದಿಸರಲೇ**= ನಮ್ಮ ತೋಳ್ಬಲದ ಪರಾಕ್ರಮದಿಂದ ಪಡೆದಿರುವ ತೇಜಸ್ಸನ್ನು ಯಾವುದೇ ಬಗೆಯ ಅಪವಾದದಿಂದ ನಾಶಪಡಿಸುತ್ತಿಲ್ಲವೇ; ನಿಜ+ವಂಶದ+ ಏಳ್ಗೆಯನು; ನಿಜ=ತನ್ನ; ವಂಶ=ಮನೆತನ; ಏಳ್ಗೆ=ಶ್ರೇಯಸ್ಸು/ಬೆಳವಣಿಗೆ; ಜರೆ=ನಿಂದಿಸು/ ತೆಗಳು; ಕುಂದಿಸು=ಕುಗ್ಗಿಸು/ತಗ್ಗಿಸು;

ನಿಜವಂಶದೇಳ್ಗೆಯನು ಜರೆದು ಕುಂದಿಸರಲೇ=ನಮ್ಮ ಸೂರ್ಯವಂಶದ ಬೆಳವಣಿಗೆಯನ್ನು ನಿಂದಿಸಿ, ವಂಶದ ಹೆಸರನ್ನು ಕೆಡಿಸುತ್ತಿಲ್ಲವೇ?

ವಹಮಾನ=ನಡತೆ/ಶೀಲ; ಕೊಂಕು=ವಕ್ರತೆ/ಡೊಂಕು; ಕೊರತೆ=ಕಡಿಮೆ; ಖೋಡಿಗಳೆ=ಅಲ್ಲಗಳೆ/ತಿರಸ್ಕರಿಸು; ಸಂಧಿಸು=ವಿರೋಧಿಸು/ಎದುರಾಡುವದು;

ವಹಮಾನದೊಳು ಕೊಂಕುಕೊರತೆಗಳನು ಖೋಡಿಗಳೆದು ಸಂಧಿಸರಲೇ=ನನ್ನ ನಡೆನುಡಿಯಲ್ಲಿ ಕಂಡುಬರುವ ಯಾವುದಾದರೂ ಅರೆಕೊರೆಗಳನ್ನು ಅಂದರೆ ಪ್ರಜೆಗಳಿಗೆ ನೋವು ಇಲ್ಲವೇ ಕೇಡನ್ನುಂಟುಮಾಡುವ ವರ್ತನೆಗಳನ್ನು ಅಲ್ಲಗಳೆದು, ನಮ್ಮ ಆಡಳಿತಕ್ಕೆ ಎದುರಾಗಿ ಮಾತನಾಡುತ್ತಿಲ್ಲವೇ?; ಅಸುರ+ಅರಿ; ಅಸುರ=ರಕ್ಕಸ; ಅರಿ=ಹಗೆ/ಶತ್ರು; ಅಸುರಾರಿ=ರಕ್ಕಸರ ಹಗೆಯಾದ ರಾಮ; ಬೆಸಗೊಳ್=ಕೇಳು/ವಿಚಾರಿಸು; **ಎಂದು ಅವನನು ಅಸುರಾರಿ ಬೆಸಗೊಂಡನು**=ರಾಮನು ನಗರದ ಗುಪ್ತಚಾರನನ್ನು ಈ ರೀತಿಯಲ್ಲಿ ವಿಚಾರಿಸಿದನು;

ಪೆಸರ್=ಹೆಸರು; ಈಶ=ಶಿವ; **ನಿನ್ನನು ಪೆಸರಿಸಿದನ್ ಈಶನ್ ಆದಪನು**='ರಾಮ' ಎಂಬ ನಿನ್ನ ಹೆಸರನ್ನು ಹೇಳಿದವನು ಶಿವನಾಗುತ್ತಾನೆ; ಅಂದರೆ ಸಾಮಾನ್ಯ ಮಾನವನು ದೇವರೇ ಆಗುತ್ತಾನೆ; ಸೇವಿಸು=ಸೇವೆ ಮಾಡು/ಉಪಚರಿಸು; ಚತುರ್ಮುಖನ್+ಆಗಲು; ಚತುರ್ಮುಖ=ಬ್ರಹ್ಮ ದೇವ; ಉಳ್=ಇರು; **ಸೇವಿಸಿದವನು ಚತುರ್ಮುಖನಾಗಲು ಉಳ್ಳವನು**=ನಿನ್ನ ಸೇವೆಯನ್ನು ಮಾಡಿದವನು ಬ್ರಹ್ಮನಾಗುತ್ತಾನೆ; ಕಾ=ಕಾಪಾಡು/ಸಲಹು; ಕಾವುದು=ಕಾಪಾಡುವುದು/ಸಲಹುವುದು; ಐದೆ=ಸಮೀಪಿಸು/ಹತ್ತಿರಕ್ಕೆ ಬರು; ಮರೆಹೊಗು=ಶರಣಾದವನು; ಆಚಂದ್ರ+ಅರ್ಕಮ್+ಆಗಿ; ಅರ್ಕ=ಸೂರ್ಯ; ಆಚಂದ್ರಾರ್ಕ=ಚಂದ್ರ ಮತ್ತು ಸೂರ್ಯ ಇರುವ ತನಕ. ಅಂದರೆ ಶಾಶ್ವತವಾಗಿ ಬಹುಕಾಲ; **ಕಾವುದು ಎಂದು ಐದೆ ಮರೆವೊಕ್ಕವನು ಜಗದೊಳು ಆಚಂದ್ರಾರ್ಕಮಾಗಿ ಬಾಳ್ವನು**=ನಿನ್ನನ್ನೇ ನಂಬಿಕೊಂಡು ನಿನ್ನ ಬಳಿಬಂದು ಶರಣಾದವನು ಸೂರ್ಯಚಂದ್ರರು ಇರುವ ತನಕ ಬಾಳುತ್ತಾನೆ; ಶ್ರೀ+ವಿಭವ+ಇನ್; ಶ್ರೀ=ಸಿರಿ/ಸಂಪತ್ತು; ವಿಭವ=ಹಿರಿಮೆ; ಇನ್=ಇಂದ; ಶಕ್ರ=ಇಂದ್ರ; ಜರೆ=ತಿರಸ್ಕರಿಸು;

ಶ್ರೀವಿಭವದಿನ್ ಶಕ್ರಪದವಿಯನು ಜರೆದಪನು=ಸಿರಿಸಂಪತ್ತಿನಲ್ಲಿ ಇಂದ್ರನಿಗಿಂತಲೂ ಮಿಗಿಲಾಗಿರುತ್ತಾನೆ; **ಭೂವಲಯದೊಳು ನಿಂದಿಸುವರುಂಟೆ** =ಭೂಮಂಡಲದಲ್ಲಿ ನಿನ್ನನ್ನು ನಿಂದಿಸುವವರು ಇದ್ದಾರೆಯೆ. ಅಂದರೆ ಯಾರೊಬ್ಬರೂ ನಿನ್ನನ್ನು ನಿಂದಿಸುತ್ತಿಲ್ಲ; ತರಣಿ+ಅನ್; ತರಣಿ=ಸೂರ್ಯ; ಕಾವಳ+ಅಮ್; ಕಾವಳ=ಮಬ್ಬು/ಕತ್ತಲೆ; ಮುಸುಕಿ+ಇರ್ದೊಡೆ; ಮುಸುಕು=ಆವರಿಸು/ಕವಿ/ಮುಚ್ಚು; ಇರ್ದೊಡೆ=ಇದ್ದರೆ; ಏನ್+ಅಪ್ಪುದು;

ತರಣಿಯನು ಕಾವಳಮ್ ಮುಸುಕಿರ್ದೊಡೆ ಏನಪ್ಪುದು=ಸೂರ್ಯನನ್ನು ತುಸು ಸಮಯ ಮಬ್ಬು ಆವರಿಸಿಕೊಂಡರೆ ಏನಾಗುವುದು. ಅಂದರೆ ಅದರಿಂದ ಸೂರ್ಯನ ಕಿರಣಗಳ ತೇಜಸ್ಸು ಶಾಶ್ವತವಾಗಿ ಮರೆಯಾಗುವುದಿಲ್ಲ. ಮತ್ತೆ ಕೆಲಸಮಯದ ನಂತರ ಸೂರ್ಯ ಕಿರಣಗಳು ಬೆಳಗುತ್ತವೆ; **ಎಂದು ಅವನು ಬಿನ್ನೈಸಿ ಕೈಮುಗಿದನು**=ಗುಪ್ತಚಾರನು ಈ ರೀತಿ ಹೇಳಿ ಕಯ್ ಮುಗಿದನು; ಕಟಕಿ+ಆಗಿ+ಇರ್ಪುದು; ಕಟಕಿ=ಚುಚ್ಚುಮಾತು/ವ್ಯಂಗ್ಯ; ಇರ್ಪುದು=ಇರುವುದು;

ಏನಾದೊಡಮ್ ಈ ಮಾತು ಕಟಕಿಯಾಗಿರ್ಪುದು=ನನ್ನ ಮನಸ್ಸಿಗೆ ನೋವಾಗುವಂತಹ ಏನೋ ಒಂದು ಸಂಗತಿಯು ನಡೆದಿದೆ ಎಂಬುದನ್ನು ನಿನ್ನ ಮಾತುಗಳು ಸೂಚಿಸುತ್ತಿವೆ; ಭಾನು+ಅಮ್; ಭಾನು=ಸೂರ್ಯ; ಮುಸುಕಲ್+ಏನು;

ಭಾನುವಮ್ ಕಾವಳಮ್ ಮುಸುಕಲೇನು ಎನಲು=ಸೂರ್ಯನನ್ನು ಮಬ್ಬು ಆವರಿಸಿತು ಎನ್ನುವ ನುಡಿಗಳಲ್ಲಿ;

ಎನ್ನ=ನನ್ನ; ಅಧೀನ+ಆದ; ಅಧೀನ=ಕಯ್ ಕೆಳಗಿನ, ಅಂದರೆ ನನ್ನ ನಡೆನುಡಿಯಲ್ಲಿ; ಅರಸುತನ=ರಾಜ್ಯದ ಆಡಳಿತ; ಆವುದು=ಯಾವುದು; ಊಣೆಯ=ಕುಂದು/ಕೊರತೆ/ತಪ್ಪು; **ಎನ್ನ ಅಧೀನವಾದ ಅರಸುತನಕೆ ಆವುದು ಊಣೆಯವು ಎಂಬರು ಎಂದು ರಘುಪತಿ ಕೇಳಲು**=ನನ್ನ ಆಳ್ವಿಕೆಯಲ್ಲಿ ಯಾವ ಬಗೆಯ ಕುಂದುಕೊರತೆಗಳಿವೆಯೆಂದು ಪ್ರಜೆಗಳು ಹೇಳುತ್ತಿದ್ದಾರೆ ಎಂದು ರಾಮನು ಕೇಳಲು; ಪಾವನ=ಪವಿತ್ರವಾದುದು; ರೂಪ=ಆಕಾರ; ಪಾವನರೂಪ=ಅತ್ಯುತ್ತಮನಾದ ವ್ಯಕ್ತಿ; ವಧು=ಹೆಂಡತಿ; ಮುನಿಯ ವಧು=ಅಹಲ್ಯೆ. ಗವುತಮ ರಿಸಿಯ ಹೆಂಡತಿ. ತಾನೆ=ಅವಳೇ;

ಲೋಕದ ಜನಕೆ ಜಗದೊಳು ನೀನೆ ಪಾವನರೂಪನು ಎಂಬುದನು ಮುನಿಯ ವಧು ತಾನೆ ತೋರಿಸಳೆ=ಕಲ್ಲಾಗಿದ್ದ ಅಹಲ್ಯೆಯು ನಿನ್ನ ಪಾದಗಳ ತಾಗುವಿಕೆಯಿಂದ ಜೀವಂತ ಹೆಣ್ಣಾಗಿ ಮಯ್ ತಳೆದ ಪ್ರಸಂಗವು ಲೋಕದ ಜನರ ಕಣ್ಣಿನಲ್ಲಿ ಜಗತ್ತಿನಲ್ಲಿಯೇ ನೀನು ಎಂತಹ ಮಹಿಮಾವಂತನೆಂಬುದನ್ನು ತೋರಿಸಿದೆ; ಅಜ್ಞಾನಿ=ತಿಳುವಳಿಕೆಯಿಲ್ಲದವನು/ತಿಳಿಗೇಡಿ; ಉಸಿರಲ್+ಅಮ್ಮೆನು; ಉಸಿರು=ಮಾತನಾಡು/ಹೇಳು; ಅಮ್ಮೆನು=ಆಗುತ್ತಿಲ್ಲ; ಪದ=ಅಡಿ/ಪಾದ; ಎರಗು=ನಮಸ್ಕರಿಸು/ಅಡ್ಡಬೀಳು; **ಅಜ್ಞಾನಿಗಳು ನುಡಿದ ನಿಂದೆಯನು ಉಸಿರಲಮ್ಮೆನು ಎಂದು ಅವನು ಪದದೊಳು ಎರಗಿದನು**=ತಿಳಿಗೇಡಿಯಾದ

ಜನರು ಆಡಿದ ನಿಂದನೆಯ ಮಾತುಗಳನ್ನು ಮತ್ತೆ ನಿನ್ನ ಮುಂದೆ ಹೇಳಲು ಆಗುತ್ತಿಲ್ಲವೆಂದು ಗುಪ್ತಚಾರನು ರಾಮನ ಪಾದಗಳಿಗೆ ಅಡ್ಡಬಿದ್ದನು; ಅಂಜು=ಹೆದರು; ಮಾಜು=ಹಿಂಜರಿ/ಹಿಂದೆಗೆ; ಲಲಾಮ=ತಿಲಕ; ರಘುಕುಲಲಲಾಮ=ರಘುವಂಶಕ್ಕೆ ತಿಲಕದಂತಿರುವ ರಾಮ;

ಏಳು ಅಂಜಬೇಡ. ಇನ್ನು ಮಾಜದಿರು. ಹೇಳು ತನ್ನಾಣೆ ಎಂದು ರಘುಕುಲಲಲಾಮನು ಒತ್ತಾಯದಿನ್ ಕೇಳಲು=ತನ್ನ ಪಾದಗಳಿಗೆ ಅಡ್ಡಬಿದ್ದು ನಮಿಸುತ್ತಿರುವ ಗುಪ್ತಚಾರನನ್ನು ರಾಮನು 'ಮೇಲಕ್ಕೆ ಎದ್ದೇಳು, ಹೆದರಬೇಡ. ನಡೆದ ಸಂಗತಿಯನ್ನು ಹೇಳುವುದಕ್ಕೆ ಇನ್ನು ಹಿಂಜರಿಯಬೇಡ. ನನ್ನಾಣೆಗೂ ಯಾವುದನ್ನೂ ಮುಚ್ಚಿಡಬೇಡ. ಎಲ್ಲವನ್ನೂ ಹೇಳು ಎಂದು ಒತ್ತಾಯಮಾಡಿ ಕೇಳಲು; ಅವನು ಎಂದನು=ಗುಪ್ತಚಾರನು ನಡೆದ ಪ್ರಸಂಗವನ್ನು ವಿವರಿಸತೊಡಗಿದನು;

ಜೀಯ=ಒಡೆಯ; ಅವಧರಿಸು=ಮನಸ್ಸಿಟ್ಟು ಕೇಳು/ಕೇಳುವಂತಹವನಾಗು; **ಜೀಯ ಅವಧರಿಸು**=ಒಡೆಯನೇ ಮನಸ್ಸಿಟ್ಟು ಕೇಳು; ಮಲಿನಮ್+ಅನ್; ಮಲಿನ=ಕೊಳೆ; ತೊಳೆವನ್+ಆಗಿ; ತೊಳೆ=ನೀರಿನಿಂದ ಕೊಳೆಯನ್ನು ತೆಗೆದು ಮಡಿ ಮಾಡುವುದು; ಮಡಿವಳ=ಅಗಸ; ಸದ್ಗುಣಚರಿತ್ರ=ಒಳ್ಳೆಯ ನಡೆನುಡಿ; ನಾಮಾಳಿ=ಹೆಸರಿನ ಮಹಿಮೆ; ಕಾಳುಗಡೆ=ಕೀಳುಮಾಡು; **ಮಲಿನಮನ್ ತೊಳೆವನಾಗಿ ಒರ್ವ ಮಡಿವಳನು ಸದ್ಗುಣಚರಿತ್ರ ನಾಮಾಳಿಯನು ಕಾಳುಗೆಡೆದನು**=ಬಟ್ಟೆಯ ಕೊಳೆಯನ್ನು ನೀರಿನಿಂದ ತೊಳೆದು ಮಡಿಮಾಡುವ ಒಬ್ಬ ಅಗಸನು ನಿನ್ನ ಒಳ್ಳೆಯ ನಡೆನುಡಿಯ ಹೆಸರಿನ ಮಹಿಮೆಗೆ ಕಳಂಕವನ್ನು ತರುವಂತೆ ಕೀಳಾಗಿ ಮಾತನಾಡಿದನು;

ಪುನೀತಮ್+ಅಮ್; ಪುನೀತ=ಪವಿತ್ರವಾದ; ಮಾಳ್ಪ=ಮಾಡುವ; ಏಳಿಗೆ= ಬೆಳವಣಿಗೆ/ಉದ್ಧಾರ; ಅವನ್+ಎತ್ತ; ಎತ್ತ=ಯಾವ ರೀತಿ/ಯಾವ ಕಡೆ;

ಜಗಮನ್ ಪುನೀತಮಮ್ ಮಾಳ್ಪ ನಿನ್ನ ಏಳಿಗೆಯನು ಅವನೆತ್ತ ಬಲ್ಲನು ಎನಲು=ಜಗತ್ತನ್ನೇ ಉದ್ಧಾರ ಮಾಡುವ ನಿನ್ನ ಮಹಿಮೆಯನ್ನು ಅವನು ಹೇಗೆ ತಾನೆ ಬಲ್ಲನು ಎಂದು ನುಡಿಯಲು; **ಏನ್ ಎಂದನು**=ಏನೆಂದು ಹೇಳಿದನು ಎಂದು ರಾಮನು ಆತಂಕದಿಂದ ಕೇಳಲು; **ಆತನು ಇಂತು ಎಂದನು**= ಗುಪ್ತಚಾರನು ಈ ರೀತಿ ವಿವರಿಸಿದನು;

ಮುಳಿ=ಕೋಪ/ಸಿಟ್ಟು; ಪೇಳದೆ=ಗಂಡನಿಗೆ ತಿಳಿಸದೆ/ಗಂಡನ ಗಮನಕ್ಕೆ

ತಾರದೆ; ಚಂಡಿತನ=ಹಟಮಾರಿತನ/ಮೊಂಡುತನ; **ಪೆಂಡತಿ ತವರ್ಮನೆಗೆ ಮುಳಿದು ಪೇಳದೆ ಪೋದ ಚಂಡಿತನಕೆ**=ಸಂಸಾರದಲ್ಲಿ ದಿನ ನಿತ್ಯ ನಡೆಯುವ ಆಗುಹೋಗುಗಳಲ್ಲಿ ಒಮ್ಮೆ ಅಗಸನ ಹೆಂಡತಿಯು ಗಂಡನ ಮೇಲೆ ಸಿಟ್ಟುಗೊಂಡು, ಗಂಡನ ಅನುಮತಿಯನ್ನು ಪಡೆಯದೆ, ಮೊಂಡುತನದಿಂದ ತನ್ನ ತವರು ಮನೆಗೆ ಹೋಗಿದ್ದಾಗ; ಅಂಡಲೆ=ಒತ್ತಾಯಿಸು/ಅಲೆದಾಡು; **ಅವಳ ತಾಯ್ತಂದೆಗಳು ಕಳುಹಬಂದು ಅಂಡಲೆದೊಡೆ**= ಹಟಮಾರಿತನದಿಂದ ಗಂಡನ ಮನೆಯಿಂದ ತವರಿಗೆ ಬಂದಿರುವ ಮಗಳನ್ನು ಅವಳ ತಾಯಿತಂದೆಯು ಮತ್ತೆ ಗಂಡನ ಮನೆಗೆ ಬಿಡಲೆಂದು ಅಯೋಧ್ಯೆಯಲ್ಲಿರುವ ಅಳಿಯನ ಮನೆಗೆ ಮತ್ತೆ ಮತ್ತೆ ಬಂದು ಪ್ರಯತ್ನಿಸುತ್ತಿದ್ದಾಗ; **ಇನ್ನು ಒಲ್ಲೆನು**=ಇನ್ನು ಅವಳ ಸಹವಾಸ ನನಗೆ ಬೇಕಾಗಿಲ್ಲ; ಅಗಲಿ+ಇರ್ದ; ಅಗಲು=ಬಿಟ್ಟುಹೋಗು/ತೊರೆ; ಮತ್ತೆ= ಪುನಃ; ರಘುನಾಥ=ರಾಮ; ಕೊಂಡು=ಪಡೆದು/ಸ್ವೀಕರಿಸಿ; ಉದ್ದಂಡ=ಸೊಕ್ಕು/ ಅಹಂಕಾರ; ಎಯ್ದು=ಬರು;

ಅಗಲಿರ್ದ ಮಡದಿಯನು ಮತ್ತೆ ರಘುನಾಥನಂತೆ ತಾನು ಕೊಂಡು ಆಳುವವನಲ್ಲ ತಾನೆಂದು ರಜಕನು ಉದ್ದಂಡದೊಳು ನುಡಿಯೆ, ಕಿವಿಮುಚ್ಚಿಕೊಳುತ ಎಯ್ದಿದೆನು=ಕೆಲಕಾಲ ದೂರವಿದ್ದ ಹೆಂಡತಿಯೊಡನೆ ಮತ್ತೆ ಸಂಸಾರ ಮಾಡುವ ರಾಮನಂತೆ ಮನೆ ಬಿಟ್ಟು ಹೋಗಿದ್ದ ಹೆಂಡತಿಯನ್ನು ಮತ್ತೆ ಮನೆಗೆ ಸೇರಿಸಿಕೊಂಡು ಸಂಸಾರ ಮಾಡುವ ಗಂಡ ನಾನಲ್ಲ ಎಂದು ಸೊಕ್ಕಿನಿಂದ ನುಡಿದ ಅಗಸನ ಮಾತನ್ನು ಕೇಳಲಾಗದೆ ಹಿಂತಿರುಗಿ ಬಂದೆನು;

ಅಖಂಡಿತ=ಪರಿಪೂರ್ಣವಾದ/ಇಡಿಯಾದ; ಮಂತ್ರ=ದೇವರ ಮಹಿಮೆ ಯನ್ನು ಕೊಂಡಾಡುವ ನುಡಿಗಳು; ಪೂತ=ಪವಿತ್ರವಾದ; ಹವಿ=ಹೋಮದ ಅಗ್ನಿಕುಂಡಕ್ಕೆ ಹಾಕುವ ತುಪ್ಪ,ಹಾಲು,ದವಸಗಳು; ಅರಿದು=ತಿಳಿದು; ವಾಯಸ= ಕಾಗೆ; ಎಂಜಲಿಪುದೆ=ಅಪವಿತ್ರಗೊಳಿಸುವುದೇ; **ಅಖಂಡಿತದ ಮಂತ್ರಪೂತದ ಹವಿಯನು ಅರಿದು ವಾಯಸಮ್ ಎಂಜಲಿಪುದೆ ಎಂದನು**=ಪರಿಪೂರ್ಣವಾದ ಮಂತ್ರದಿಂದ ಪವಿತ್ರವಾಗಿರುವ ಹವಿಸ್ಸನ್ನು ಕಾಗೆಯು ಎಂಜಲು ಮಾಡಲು ಆಗುತ್ತದೆಯೇ; ಅಂದರೆ ಅಗ್ನಿಕುಂಡದಲ್ಲಿ ಉರಿಯುತ್ತಿರುವ ಹವಿಸ್ಸನ್ನು ಮುಟ್ಟಲು ಹೇಗೆ ಕಾಗೆಗೆ ಆಗುವುದಿಲ್ಲವೋ, ಅಂತೆಯೇ ಅಗಸನು ಆಡಿದ ನುಡಿಗಳು ನಿನ್ನ ವ್ಯಕ್ತಿತ್ವಕ್ಕೆ ಕಳಂಕವನ್ನು ತರಲಾರವು ಎಂದು ಗುಪ್ತಚಾರನು ಸಾಂತ್ವನದ ನುಡಿಗಳನ್ನಾಡಿದನು; **ಎಂದು ಬಿನ್ನೈಸೆ ಕೇಳ್ದು**=ಎಂದು ಗುಪ್ತಚಾರನ್ನು ಹೇಳಲು, ಅದೆಲ್ಲವನ್ನೂ ಕೇಳಿ ತಿಳಿದು ಕೊಂಡು;

ರಘುನಂದನ=ರಾಮ; ಬಂಧನ=ಸೆರೆ; ಮತ್ತ=ಸೊಕ್ಕಿದ; ಗಜ=ಆನೆ; ಅಂದದಿನ್=ರೀತಿಯಲ್ಲಿ; **ಆತನನು ಕಳುಹಿ ರಘುನಂದನನು ಬಂಧನಕ್ಕೆ ಒಳಗಾದ ಮತ್ತಗಜದ ಅಂದದಿನ್**=ಗುಪ್ತಚಾರನನ್ನು ಕಳುಹಿಸಿ, ರಾಮನು ಸೆರೆಗೆ ಒಳಗಾದ ಮದಿಸಿದ ಆನೆಯಂತೆ; ನಿಜ=ತನ್ನ; ಶಿರ=ತಲೆ; ಒಲೆ=ಅತ್ತಿತ್ತ ತೂಗುತ್ತ;

ನಿಜಶಿರವನು ಒಲೆದು=ಮಯ್ ಮನದಲ್ಲಿ ತುಡಿಯುತ್ತಿರುವ ತೀವ್ರವಾದ ಸಂಕಟದಿಂದ ತಲೆಯನ್ನು ಅತ್ತಿತ್ತ ಆಡಿಸುತ್ತ; ಸೈವೆರಗು=ಅತಿಯಾದ ತಳಮಳ/ಸಂಕಟ; **ಮೂಗಿನ ಮೇಲೆ ಬೆರಳಿಟ್ಟು, ಮೌನದಿಂದೆ ನಿಂದು ಸೈವೆರಗಾಗಿ**=ಮಾನಸಿಕವಾಗಿ ತುಂಬಾ ಸಂಕಟಕ್ಕೊಳಗಾಗಿ; ಬಿಸುಸುಯ್ದು=ನಿಟ್ಟುಸಿರನ್ನು ಬಿಡುತ್ತ; ಕಡುಪು+ಅಳಿದು; ಕಡುಪು=ಉತ್ಸಾಹ/ಪರಾಕ್ರಮ; ಅಳಿದು=ನಾಶಗೊಂಡು/ಇಲ್ಲವಾಗಿ; ಕಳೆಗುಂದಿ=ಕಾಂತಿಹೀನವಾಗಿ; ದುಮ್ಮಾನ=ಅಳಲು/ದುಗುಡ/ತಳಮಳ;

ನೆನೆ ನೆನೆದು ಚಿತ್ತದೊಳು ನೊಂದು ಬಿಸುಸುಯ್ದು ಕಡುಪಳಿದು ಕಾತರಿಸಿ ಕಳೆಗುಂದಿ ದುಮ್ಮಾನದಿನ್=ಮತ್ತೆ ಮತ್ತೆ ಅಗಸನಾಡಿದ ನುಡಿಗಳನ್ನು ಮನಸ್ಸಿನಲ್ಲಿ ನೆನೆಪಿಸಿಕೊಳ್ಳುತ್ತ, ನೊಂದು ನಿಟ್ಟುಸಿರನ್ನು ಬಿಡುತ್ತ, ಉತ್ಸಾಹವನ್ನು ಕಳೆದುಕೊಂಡು ಕಾಂತಿಹೀನನಾಗಿ ಅಪಾರವಾದ ಸಂಕಟದಲ್ಲಿ ಬೇಯುತ್ತ;

ಪುತ್ತ=ಹುತ್ತ; ಪುಗು=ಪ್ರವೇಶಿಸು/ಒಳಕ್ಕೆ ಹೋಗು; ಅಹಿಪನ್+ಅಂತೆ; ಅಹಿಪ=ಹಾವುಗಳ ಒಡೆಯನಾದ ಆದಿಶೇಷ; ಅಂತಃಪುರ=ರಾಣಿವಾಸದ ಅರಮನೆ; ಪೊಕ್ಕನು=ಪ್ರವೇಶಿಸಿದನು; **ಪುತ್ತ ಪುಗುವ ಅಹಿಪನಂತೆ ಅಂತಃಪುರಕೆ ಪೊಕ್ಕನು**=ಹುತ್ತದ ಒಳಕ್ಕೆ ಹೋಗುವ ಆದಿಶೇಷನಂತೆ ಅಂತಃಪುರದೊಳಕ್ಕೆ ಬಂದನು;

❖

ನೋಟ–ಮೂರು

ಅಖಿಳ=ಎಲ್ಲ/ಸಮಸ್ತ; ಭೂಪಾಲ=ರಾಜ; **ಬಾಗಿಲ್ಗೆ ಬಂದ ಅಖಿಳ ಭೂಪಾಲರನು ಕರೆಸಿ ಕಾಣಿಸಿಕೊಳ್ಳದೆ**=ತನ್ನನ್ನು ನೋಡಲು ಬಂದ ರಾಜರನ್ನು ಕರೆದು ಮಾತನಾಡದೆ; ಓಲಗ=ರಾಜನು ನಡೆಸುವ ಸಭೆ/ರಾಜ ದರ್ಬಾರು; ಕುಡು=ಕೊಡು/ನೀಡು; **ಓಲಗಮ್ ಕುಡದೆ**=ಮಂತ್ರಿ, ಸೇನಾನಿ ಮತ್ತು ಇನ್ನಿತರ ರಾಜಪ್ರಮುಖರೊಡನೆ ಸಮಾಲೋಚನೆಯನ್ನು ಮಾಡುವ ಸಭೆಯನ್ನು ನಡೆಸದೆ; ಒಳಗೆ=ಅಂತಃಪುರದ ಕೊಟಡಿಯೊಂದರಲ್ಲಿ; ಚಿಂತೆ=ಕಳವಳ/ದುಗುಡ/ದುಮ್ಮಾನ; ಲತಾಂಗಿ=ಬಳ್ಳಿಯಂತೆ ಬಳುಕುವ ಹೆಣ್ಣು/ಕೋಮಲೆ; ಚಿಂತಾಲತಾಂಗಿ=ಚಿಂತೆಯೆಂಬ ಹೆಣ್ಣು; ಕೇಳಿ=ಕ್ರೀಡೆ/ಆಟ; **ಚಿಂತಾಲತಾಂಗಿಯ ಕೇಳಿ**=ಇದೊಂದು ರೂಪಕ. ಮಯ್ ಮನವೆಲ್ಲವೂ ಚಿಂತೆಯಿಂದಲೇ ತೀವ್ರತರವಾದ ಸಂಕಟಕ್ಕೆ ಒಳಗಾಗಿ; ಎಡೆ+ಕೊಟ್ಟು; ಎಡೆಗೊಟ್ಟು=ಅವಕಾಶವನ್ನು ನೀಡಿ; ರಾಜೇಂದ್ರನ್+ಇರೆ;

ಒಳಗೆ ಚಿಂತಾಲತಾಂಗಿಯ ಕೇಳಿಗೆ ಎಡೆಗೊಟ್ಟು ರಾಜೇಂದ್ರನಿರೆ=ಅಗಸನು ಆಡಿದ ಕಟು ನುಡಿಗಳಿಂದ ಕಂಗೆಟ್ಟಿರುವ ರಾಮನ ಮಯ್ ಮನದಲ್ಲಿ ಉಂಟಾಗುತ್ತಿರುವ ಸಂಕಟವನ್ನು ಈ ರೂಪಕ ಸೂಚಿಸುತ್ತಿದೆ; ಭೀತಿ+ಇಂದೆ; ಭೀತಿ=ಹೆದರಿಕೆ; ಲಕ್ಷ್ಮಣ+ಆದಿಗಳು; ಆದಿಗಳು=ಮೊದಲಾದವರು; ಪೊಕ್ಕರು=ಪ್ರವೇಶಿಸಿದರು; **ಕೇಳ್ದು ಭೀತಿಯಿಂದೆ ಆ ಲಕ್ಷಣಾದಿಗಳು ಅಂತಃಪುರವನು ಪೊಕ್ಕರು**=ರಾಮನು ಯಾವುದೋ ಚಿಂತೆಯಲ್ಲಿ ತೊಡಗಿದ್ದಾನೆ ಎಂಬ ಸುದ್ದಿಯನ್ನು ತಿಳಿದು ಲಕ್ಷ್ಮಣನೊಡನೆ ಉಳಿದ ಇನ್ನಿಬ್ಬರು ತಮ್ಮಂದಿರು

ರಾಮನ ಬಳಿಗೆ ಬಂದರು; ಆಲಂಗಿಸು=ಆವರಿಸಿಕೊಳ್ಳುವುದು; ಜಾಡ್ಯ=ಬೇನೆ/ರೋಗ; ಜಡಿ=ನಡುಗು/ಕಂಪಿಸು; ಅವಯವ=ಅಂಗ/ದೇಹ; ನೀಲಾಂಗನ್+ಅನ್; ನೀಲಾಂಗನ್=ರಾಮ. ರಾಮನ ಮಯ್ ಕಡುನೀಲಿಯ ಬಣ್ಣವಾಗಿತ್ತು ಎಂಬ ಕಲ್ಪನೆಯಿಂದ ಈ ಹೆಸರು ಬಂದಿದೆ; ಕಾಲ್ಗೆ+ಎರಗಿ; ಎರಗಿ=ನಮಸ್ಕರಿಸಿ; ಅಮ್ಮದೆ=ಆಗದೆ; ಸುಮ್ಮನೆ+ಇರುತ+ಇರ್ದರು;

ಆಲಿಂಗಿಸಿದ ಜಾಡ್ಯದಿಂದೆ ಜಡಿವ ಅವಯವದ ನೀಲಾಂಗನನ್ ಕಂಡು ಕಾಲ್ಗೆರಗಿ, ನುಡಿಸಲು ಅಮ್ಮದೆ ಸುಮ್ಮನಿರುತಿರ್ದರು=ಮಯ್ ಮನಕ್ಕೆ ಅಂಟಿದ ಚಿಂತೆಯೆಂಬ ರೋಗದಿಂದ ನಡುಗುತ್ತಿರುವ ರಾಮನನ್ನು ತಮ್ಮಂದಿರು ನೋಡಿ, ಅವನ ಕಾಲುಗಳಿಗೆ ನಮಸ್ಕರಿಸಿ, ಅವನನ್ನು ಮಾತನಾಡಿಸಲಾಗದೆ ಸುಮ್ಮನೆ ಇದ್ದರು; ಬಲ್ಲಹ=ರಾಜ/ಒಡೆಯ; **ಕರುಣಾಳುಗಳ ಬಲ್ಲಹ**= ಕರುಣಾಮಯಿಯಾದ ರಾಮ; ಅನುಜ=ತಮ್ಮ; ಮುದ್ದುಗೈದು=ಪ್ರೀತಿಯಿಂದ ನೇವರಿಸಿ; **ಕರುಣಾಳುಗಳ ಬಲ್ಲಹನು ಎದ್ದು ಕುಳ್ಳಿರ್ದು ಅನುಜರನು ಕರೆದು ಮುದ್ದುಗೈದು**=ಚಿಂತೆಯಿಂದ ಮುದುಡಿ ಮಲಗಿಕೊಂಡಿದ್ದ ಕರುಣಾಮಯಿಯಾದ ರಾಮನು ಮೇಲೆದ್ದು ಕುಳಿತುಕೊಂಡು, ತಮ್ಮಂದರನ್ನು ಹತ್ತಿರಕ್ಕೆ ಕರೆದು ಪ್ರೀತಿಯಿಂದ ನೇವರಿಸಿ; ಇಳೆ=ಭೂಮಿ; ಪೊದ್ದು=ಅಂಟು/ಹತ್ತು; ಅಪವಾದಮ್+ಅನ್; ಅಪವಾದ=ನಿಂದೆ/ಕೆಟ್ಟ ಹೆಸರು; ಅರಿ=ತಿಳಿ; **ಇಳೆಯೊಳು ಇಂದು ಎನಗೆ ಪೊದ್ದಿದ ಅಪವಾದಮನ್ ನೀವು ಅರಿದುದಿಲ್ಲ**= ಜಗತ್ತಿನಲ್ಲಿ ಇಂದು ನನ್ನ ವ್ಯಕ್ತಿತ್ವಕ್ಕೆ ಅಂಟಿಕೊಂಡಿರುವ ಅಪವಾದದ ಸ್ವರೂಪವೇನು ಮತ್ತು ಅದರ ಪರಿಣಾಮವೇನು ಎಂಬುದು ನಿಮಗೆ ಗೊತ್ತಿಲ್ಲ; ಅಕಟ=ಅಯ್ಯೋ... ವ್ಯಕ್ತಿಯ ಮಯ್ ಮನದಲ್ಲಿ ಸಂಕಟ ಹೆಚ್ಚಾದಾಗ, ಬಾಯಿಂದ ಹೊರಬೀಳುವ ಪದ; ಸಾಕು+ಇನ್ನು; ನೆರವಿಗಳ್+ಒಳು; ನೆರವಿ=ಗುಂಪು/ಸಮೂಹ; ನೆರವಿಗಳೊಳು=ಜನಸಮುದಾಯದಲ್ಲಿ; ಆಡು=ತೆಗಳು/ನಿಂದಿಸು; ಆರೆನು=ನನಗೆ ಆಗುತ್ತಿಲ್ಲ;

ಅಕಟ, ಸಾಕಿನ್ನು ನೆರವಿಗಳೊಳು ಕದ್ದ ಕಳ್ಳನವೊಲು ಆಡಿಸಿಕೊಳ್ಳಲ್ಕೆ ಆರೆನು=ಅಯ್ಯೋ, ಕದ್ದ ಕಳ್ಳನ ಬಗ್ಗೆ ಜನರು ಆಡಿಕೊಂಡು ನಗುವಂತೆ ನನ್ನನ್ನು ಕುರಿತು ಜನ ಆಡಿಕೊಂಡು ತೆಗಳುವುದನ್ನಾಗಲಿ ಇಲ್ಲವೇ ಗೇಲಿ ಮಾಡುತ್ತ ನಗುವುದನ್ನಾಗಲಿ ತಡೆದುಕೊಳ್ಳಲು ಇನ್ನು ಮುಂದೆ ನನ್ನಿಂದ ಆಗುವುದಿಲ್ಲ; ಇದುವರೆಗೆ ನಾನು ಪಟ್ಟಿರುವ ಸಂಕಟವೇ ಸಾಕು; ಒಡಲು=ದೇಹ/ಶರೀರ; **ಒಡಲಿದ್ದಲ್ಲಿ ನಿಂದೆಗೆ ಒಳಗಾಗಿ ಬದುಕುವನಲ್ಲ**=ಲೋಕದಲ್ಲಿ ನಿಂದೆಗೆ

ಗುರಿಯಾದ ಈ ದೇಹವನ್ನು ಹೊತ್ತುಕೊಂಡು ನಾನು ಬದುಕಲು ಇಚ್ಚೈಸುವುದಿಲ್ಲ; ತಿದ್ದಿ ತೀರದ=ಸರಿಪಡಿಸಲಾಗದ/ನಿವಾರಿಸಲಾಗದ; ವಿಲಗ=ಅಪವಾದ/ದೂರು; ಅಂಜು=ಹೆದರು; **ತಿದ್ದಿ ತೀರದ ವಿಲಗಕೆ ಅಂಜುವೆನು**=ತೊಡೆದುಹಾಕಲಾಗದ ಅಪವಾದಕ್ಕೆ ನಾನು ಹೆದರುತ್ತೇನೆ; **ಸೀತೆಯ ಬಿಟ್ಟಿಲ್ಲದೆ ಇರೆನು ಎಂದನು**=ಸೀತೆಯನ್ನು ಬಿಡದೆ ಇರಲಾರೆನು; ಅಯೋನಿಜೆ=ಸೀತೆ; ಸಂಪನ್ನೆ=ಕೂಡಿದವಳು/ಹೊಂದಿದವಳು; ಇವಳು ಅಯೋನಿಜೆ=ಇವಳು ಸೀತೆ;

ರೂಪ ಗುಣ ಶೀಲ ಸಂಪನ್ನೆ=ರೂಪ ಗುಣ ಶೀಲವಂತಿಕೆಯಿಂದ ಕೂಡಿದವಳು; **ಭುವನಪಾವನೆ**=ಲೋಕಪವಿತ್ರಳು; **ಪುಣ್ಯಚರಿತೆ**=ಒಳ್ಳೆಯ ನಡೆನುಡಿಯುಳ್ಳವಳು; **ಮಂಗಳ ಮಹೋತ್ಸವೆ**=ಒಳ್ಳೆಯ ಕೆಲಸಗಳನ್ನು ಮಾಡುವುದರಲ್ಲಿ ಉತ್ಸುಕಳಾದವಳು; **ಪತಿವ್ರತೆ ಎಂಬುದನ್ ಬಲ್ಲೆನು**=ಪತಿವ್ರತೆ ಎಂಬುದನ್ನು ಬಲ್ಲೆನು; **ಅವನಿಸುತೆ**=ಭೂದೇವಿಯ ಮಗಳಾದ ಸೀತೆ; **ಆದೊಡಮ್ ನಿಂದೆಗೆ ಒಳಗಾದ ಬಳಿಕ ತನಗೆ ಅವನಿಸುತೆಯನು ಬಿಡುವುದೇ ನಿಶ್ಚಯಮ್**=ಸೀತೆಯು ಗುಣವಂತೆ ಎಂಬುದು ನನಗೆ ಚೆನ್ನಾಗಿ ತಿಳಿದಿದ್ದರೂ ಸೀತೆಯು ಲೋಕದ ಅಪವಾದಕ್ಕೆ ಗುರಿಯಾಗಿರುವುದರಿಂದ, ಅವಳನ್ನು ನಾನು ಬಿಡುವುದು ನಿಶ್ಚಿತ;

ರವಿಕುಲದ ರಾಯರು ಅಪಕೀರ್ತಿಯನು ತಾಳ್ದಪರೆ=ಸೂರ್ಯವಂಶದ ರಾಜರು ತಮ್ಮ ವಂಶಕ್ಕೆ ಕೆಟ್ಟಹೆಸರು ಬಂದರೆ ತಾಳಿಕೊಳ್ಳುತ್ತಾರೆಯೇ; ಕುವರನ್+ಆಗಿ+ಇರ್ದ; ಕುವರ=ಮಗ; ತಾತ=ಅಪ್ಪ/ತಂದೆ; ಸತ್ಯಭಾಷೆ=ಆಡಿದ ಮಾತಿನಂತೆ ನಡೆದುಕೊಳ್ಳುವುದು; ಉಳಿ=ಬಿಡು/ತ್ಯಜಿಸು; **ಕುವರನಾಗಿರ್ದ ತನ್ನನು ತಾತನು ಸತ್ಯಭಾಷೆಗಾಗಿ ಉಳಿದುದಿಲ್ಲವೆ**=ನಮ್ಮ ತಂದೆ ದಶರಥ ಮಹಾರಾಜನು ಕೈಕಾದೇವಿಗೆ ಕೊಟ್ಟ ಮಾತನ್ನು ನಡೆಸಿಕೊಡುವುದಕ್ಕಾಗಿ ನನ್ನನ್ನೇ ತೊರೆಯಲಿಲ್ಲವೇ; ದಶರಥ ಮಹಾರಾಜನು ಒಮ್ಮೆ ಹಗೆಗಳೊಡನೆ ಕಾಳೆಗದಲ್ಲಿ ತೊಡಗಿದ್ದಾಗ, ಅವನ ಮೂರನೆಯ ಹೆಂಡತಿಯಾದ ಕೈಕಾದೇವಿಯು ತನ್ನನ್ನು ಕಾಪಾಡಿದ್ದಕ್ಕಾಗಿ ಎರಡು ವರಗಳನ್ನು ನೀಡಿದ್ದನು. ಆಕೆಯು ಅವನ್ನು ತನಗೆ ಅಗತ್ಯ ಬಂದಾಗ ಕೇಳುವೆನೆಂದು ಹೇಳಿದ್ದಳು. ರಾಮನಿಗೆ ಪಟ್ಟಕಟ್ಟುವ ಸನ್ನಿವೇಶದಲ್ಲಿ ರಾಮನ ಬದಲು ತನ್ನ ಮಗ ಭರತನಿಗೆ ಪಟ್ಟಕಟ್ಟುವ ಮತ್ತು ರಾಮನನ್ನು ಹದಿನಾಲ್ಕು ವರುಶಗಳ ಕಾಲ ಕಾಡಿಗೆ ಅಟ್ಟುವ ವರಗಳನ್ನು ಕೇಳಿದಳು. ದಶರಥನು ಕೊಟ್ಟ ಮಾತಿಗೆ ತಪ್ಪದೆ

ಅವೆಲ್ಲವನ್ನೂ ಪಾಲಿಸಿದನು;

ಪಲವು ಮಾತೇನು=ಈಗ ಹಲವು ಮಾತುಗಳನ್ನಾಡುವುದರಿಂದ ಪ್ರಯೋಜನವೇನು; ವಿಪ್ರ=ಬ್ರಾಹ್ಮಣ; ಆಚಾರಮ್+ಅನ್; ಆಚಾರ= ಸಂಪ್ರದಾಯ/ಜಾತಿಯ ಕಟ್ಟುಕಟ್ಟಲೆ; **ಕಲಿಯುಗದ ವಿಪ್ರರು ಆಚಾರಮನ್ ಬಿಡುವಂತೆ ಇನ್ನು ಸೀತೆಯನು ಬಿಟ್ಟೆನು ಎನೆ**=ಕಲಿಯುಗದಲ್ಲಿ ಬ್ರಾಹ್ಮಣರು ಸಂಪ್ರದಾಯದ ಕಟ್ಟುಪಾಡುಗಳನ್ನು ಬಿಡುವಂತೆ ನಾನು ಸೀತೆಯನ್ನು ಬಿಡುತ್ತೇನೆ ಎನ್ನಲು; ಕಾರುಣ್ಯ=ದಯೆ/ಕರುಣೆ; ನಿಧಿ=ಕಡಲು/ಸಮುದ್ರ; ಕಾರುಣ್ಯನಿಧಿ=ಕರುಣಾಸಾಗರ/ರಾಮ; ಬಲು=ಅತಿ ದೊಡ್ಡ; ಗರ=ದೆವ್ವ/ ಪಿಶಾಚಿ; ಎತ್ತಣ=ಯಾವ ಕಡೆ; ಅನುಜಾತರು=ಒಡಹುಟ್ಟಿದವರು; **ಕಾರುಣ್ಯನಿಧಿಗೆ ಬಲು ಗರಮ್ ಇದು ಎತ್ತಣದೊ ಎನುತೆ ಅನುಜಾತರು ಭೀತಿಯಿಂದೆ ನಡನಡುಗಿ**=ಕರುಣಾಸಾಗರನಂತಿದ್ದ ನಮ್ಮ ಅಣ್ಣ ರಾಮನಿಗೆ ಸೀತೆಯ ಬಗೆಗೆ ಇಂತಹ ನಿಲುವನ್ನು ತಳೆಯುವ ಪಿಶಾಚಿ ಯಾವ ಕಡೆಯಿಂದ ಬಂದು ಹಿಡಿಯಿತೋ ಎಂದು ತಮ್ಮಂದರೆಲ್ಲರೂ ಹೆದರಿಕೆಯಿಂದ ನಡನಡುಗುತ್ತ;

ನೆಲೆಗೊಳ್ಳು=ತಳವೂರು/ನೆಲೆನಿಲ್ಲು; ವೇದ=ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣ ವೇದ ಎಂಬ ಹೆಸರಿನ ನಾಲ್ಕು ಹೊತ್ತಿಗೆಗಳು; ಧರೆ=ಭೂಮಂಡಲ; ಪಾಷಂಡಿ=ನೀಚ/ಕೆಟ್ಟವ್ಯಕ್ತಿ; ಸಲೆ=ಒಂದೇ ಸಮನೆ/ ಯಾವಾಗಲೂ; ದ್ವಿಜ=ಬ್ರಾಹ್ಮಣ; ಮಾಣ್=ಬಿಡು/ತ್ಯಜಿಸು; **ನೆಲೆಗೊಂಡ ವೇದಮನ್ ಧರೆಯ ಪಾಷಂಡಿಗಳು ಸಲೆ ನಿಂದಿಸಿದೊಡೆ ಅದನು ದ್ವಿಜರು ಮಾಣ್ಬರೇ**=ಜನಮನದಲ್ಲಿ ಬಹುಕಾಲದಿಂದಲೂ ನೆಲೆಸಿರುವ ವೇದಗಳನ್ನು ಈ ಭೂಮಂಡಳದಲ್ಲಿರುವ ಕೆಲವು ನೀಚ ವ್ಯಕ್ತಿಗಳು ನಿಂದಿಸಿದ ಮಾತ್ರಕ್ಕೆ ಬ್ರಾಹ್ಮಣರು ವೇದಗಳನ್ನು ತೊರೆಯುತ್ತಾರೆಯೇ;

ಅಕಟ=ಅಯ್ಯೋ/ಸಂಕಟದಿಂದ ತೊಳಲಾಡುವಾಗ ಬಾಯಿಂದ ಹೊರಹೊಮ್ಮುವ ಉದ್ಗಾರದ ನುಡಿ; ಕುಲವರ್ಧಿನಿ=ವಂಶದ ಉದ್ಧಾರಕಳನ್ನು; ಎಂತು=ಯಾವ ರೀತಿ; **ಅಕಟ... ನೀನು ಕುಲವರ್ಧಿನಿಯನು ಎಂತು ಬಿಡುವೆ ಪೇಳು**=ಅಯ್ಯೋ, ನಮ್ಮ ವಂಶದ ಉದ್ಧಾರಕಳಾದ ಸೀತಾದೇವಿಯನ್ನು ಅದು ಹೇಗೆ ತಾನೆ ನೀನು ಬಿಡುತ್ತೀಯೆ ಹೇಳು; ಅನುಜಾತರು=ಒಡಹುಟ್ಟಿದವರು; ಅಗ್ರಜ=ಅಣ್ಣ; **ಅನುಜಾತರು ಅಗ್ರಜಂಗೆ ಎಂದರು**=ತಮ್ಮಂದಿರು ಅಣ್ಣನನ್ನು ಪ್ರಶ್ನಿಸಿದರು; ಗದ್ಗದ=ಸಂಕಟವು ಹೆಚ್ಚಾದಾಗ ಆಡುವ ಮಾತುಗಳು

ಗಂಟಲಿನಲ್ಲಿಯೇ ಸಿಕ್ಕಿಕೊಂಡಂತಾಗಿ, ತಡೆತಡೆದು ಮಾತುಗಳು ಹೊರಹೊಮ್ಮುತ್ತವೆ; ಅಶ್ರು=ಕಣ್ಣೀರು; ನಯನ=ಕಣ್ಣು; ಕಂಠ=ಕೊರಳು; ತುಳುಕು=ತುಂಬಿ ಹೊರಚೆಲ್ಲುವುದು;

ಭಯಶೋಕದಿಂದೆ ಗದ್ಗದಿಸೆ ಕಂಠದೊಳು ಅಶ್ರು ನಯನದೊಳು ತುಳಕೆ=ತಮ್ಮ ಭರತನ ಮಯ್ ಮನದಲ್ಲಿ ಅತಿ ಹೆಚ್ಚಾದ ಹೆದರಿಕೆ ಮತ್ತು ಸಂಕಟ ಉಂಟಾಗಿ, ಗಂಟಲು ಕಂಪಿಸತೊಡಗಿ ಆಡುವ ಮಾತುಗಳು ತಡವರಿಸ ತೊಡಗಿದವು... ಕಣ್ಣುಗಳು ತುಂಬಿಬಂದವು; ಕರೆವ=ಹಾಲನ್ನು ಕೊಡುವ; ಕಪಿಲೆ=ಕಂದುಬಣ್ಣದ ಹಸು; ನಯವಿದರು=ನ್ಯಾಯ ನೀತಿಯನ್ನು ಬಲ್ಲ ಒಳ್ಳೆಯ ವ್ಯಕ್ತಿಗಳು; ಪೊಡೆದು=ಹೊಡೆದು; ಅಡವಿ=ಕಾಡು; **ಕರೆವ ಕಪಿಲೆಯನು ನಯವಿದರು ಪೊಡೆದು ಅಡವಿಗೆ ಅಟ್ಟುವರೆ**=ನ್ಯಾಯನೀತಿಯನ್ನು ಬಲ್ಲ ಸಜ್ಜನರು ಹಾಲು ಕೊಡುವ ಹಸುವಿನ ಮೇಲೆ ಹಲ್ಲೆಯನ್ನು ಮಾಡಿ, ಕಾಡಿಗೆ ಅಟ್ಟುತ್ತಾರೆಯೇ; ಪಾವಕ=ಬೆಂಕಿ/ಅಗ್ನಿ; ಅರಸಿ=ರಾಣಿಯಾದ ಸೀತೆಯನ್ನು; ಪುಗಿಸಿದ+ಅಂದು; ಪುಗಿಸು=ಒಳಸೇರು/ಪ್ರವೇಶಿಸು; ಅಂದು=ಆ ದಿನ;

ಪಾವಕನೊಳು ಅರಸಿಯನು ಪುಗಿಸಿದಂದು ಬಯಸಿದೊಡೆ=ಲಂಕೆಯ ಕಾಳೆಗದ ನೆಲದಲ್ಲಿ ನೀನು ಸೀತಾದೇವಿಯ ಶೀಲದ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸಿ, ಸೀತಾದೇವಿಯ ಶೀಲವನ್ನು ಒರೆಹಚ್ಚಿ ನೋಡಲೆಂದು ಅಗ್ನಿಪ್ರವೇಶವನ್ನು ಮಾಡುವಂತೆ ಬಯಸಿದಾಗ; **ಅಯ್ಯನು ಬಂದು**=ನಮ್ಮ ತಂದೆಯಾದ ದಶರಥ ರಾಜನು ಬಂದು; ಸಾವನ್ನಪ್ಪಿರುವ ದಶರಥನು ಗಗನದಲ್ಲಿ ಗೋಚರಿಸಿ ಮಾತನಾಡಿದನು ಎಂಬುದು ಕಾವ್ಯಲೋಕದ ಸತ್ಯ. ಇದು ವಾಸ್ತವ ಜಗತ್ತಿನ ಕ್ರಿಯೆಯಲ್ಲ; ಪರಿಶುದ್ಧೆ=ಕಳಂಕವಿಲ್ಲದ ಹೆಣ್ಣು; ನಿನಗೆ ಪ್ರಿಯೆ=ನಿನಗೆ ಬಹಳ ಮೆಚ್ಚಿನವಳು/ನಿನ್ನನ್ನು ಬಹಳವಾಗಿ ಪ್ರೀತಿಸುವವಳು; ಪರಿಶುದ್ಧೆ=ಯಾವುದೇ ಕಳಂಕವಿಲ್ಲದ ಹೆಣ್ಣು; ಕುಲಕೆ ಮಂಗಳೆ=ನಮ್ಮ ಸೂರ್ಯವಂಶಕ್ಕೆ ಮಂಗಳವನ್ನುಂಟುಮಾಡುವವಳು; ಸುತ+ಉದಯಕೆ; ಸುತ=ಮಗ; ಉದಯ=ಹುಟ್ಟು; ನಿರ್ಮಲೆ=ಕಳಂಕರಹಿತಳು;

ಸುತೋದಯಕೆ ನಿರ್ಮಲೆ=ಮಗನನ್ನು ಪಡೆಯುವುದಕ್ಕೆ ಯೋಗ್ಯಳಾದವಳು; ಗತಿ+ಕುಡುವ; ಗತಿ=ಆಶ್ರಯ; ಕುಡು=ಕೊಡು; **ತನಗೆ ಗತಿಗುಡುವ ಸೊಸೆಯೆಂದು**=ತನ್ನ ವಂಶಕ್ಕೆ ಒಳ್ಳೆಯದನ್ನು ಮಾಡುವ ಸೊಸೆಯೆಂದು; ಸುರ+ಅಸುರರ; ಸುರ=ದೇವತೆ; ಅಸುರ=ರಕ್ಕಸ; ಕಟಕ=ಸೇನೆ/ಗುಂಪು; ಕಪಿಕಟಕ=ವಾನರ ಸೇನೆ; ಅರಿಯೆ=ತಿಳಿಯುವಂತನೆ; ಆಡನೆ=ಹೇಳಲಿಲ್ಲವೇ;

ಸುರಾಸುರರ ಮುಂದೆ ಕಪಿಕಟಕಮ್ ಅರಿಯೆ ಆಡನೆ=ಸೀತೆಯ ಅಗ್ನಿಪ್ರವೇಶದ ಸನ್ನಿವೇಶದಲ್ಲಿ ನಮ್ಮ ತಂದೆಯಾದ ದಶರಥನು ಗೋಚರನಾಗಿ ದೇವತೆಗಳು, ರಕ್ಕಸರು ಮತ್ತು ವಾನರಸೇನೆಯ ಮುಂದೆ ಸೀತಾದೇವಿಯ ಒಳ್ಳೆಯ ಗುಣಗಳನ್ನು ಹೊಗಳಿ ಕೊಂಡಾಡಲಿಲ್ಲವೇ;

ಅದನ್ ಎಲ್ಲಮನ್ ಮರೆದು=ಅದೆಲ್ಲವನ್ನೂ ಮರೆತು; ಹುಲು=ಸಾಮಾನ್ಯ/ಅಲ್ಪವಾದುದು; ಮನುಜ=ಮಾನವ/ವ್ಯಕ್ತಿ; ರಜಕ=ಅಗಸ; ದೂಸರು=ಅಪವಾದ; ಕುಲಪತ್ನಿ=ಕುಲಕ್ಕೆ ಸೇರಿದ ಹೆಂಡತಿ; ಹದನು=ರೀತಿ/ಕ್ರಮ; ಆವುದು=ಯಾವುದು; **ಹುಲುಮನುಜ ರಜಕನು ಆಡಿದ ದೂಸರನು ನೆನೆದು ಕುಲಪತ್ನಿಯನು ಬಿಡುವ ಹದನು ಆವುದು**=ಅತಿ ಸಾಮಾನ್ಯ ವ್ಯಕ್ತಿಯಾದ ಅಗಸನು ಆಡಿದ ನಿಂದನೆಯ ನುಡಿಗಳನ್ನು ನೆನೆದುಕೊಂಡು, ಹೆಂಡತಿಯನ್ನು ಬಿಡುವ ಈ ನಿನ್ನ ರೀತಿಯ ಯಾವುದು. ಅಂದರೆ ನಿನ್ನ ನಿಲುವು ಸರಿಯಲ್ಲ; ಗುರು=ದೊಡ್ಡದು; ಲಘು=ಚಿಕ್ಕದು; ಅಂತರ=ವ್ಯತ್ಯಾಸ; ಎಣಿಸು=ತಿಳಿದು ನೋಡು/ಪರಿಶೀಲಿಸು;

ಗುರುಲಘುವಿನ ಅಂತರ ಎಣಿಸು=ಈ ನುಡಿಗಳು ಒಂದು ರೂಪಕವಾಗಿ ಬಳಕೆಗೊಂಡಿವೆ. ಯಾವುದು ಸರಿ... ಯಾವುದು ತಪ್ಪು ಎಂಬುದನ್ನು ಒರೆಹಚ್ಚಿ ನೋಡುವುದು; ಬರಿದೆ=ಸುಮ್ಮನೆ; ಮೂಢ=ತಿಳಿಗೇಡಿ; ಎದೆಗೆಟ್ಟು=ಮನಸ್ಸನ್ನು ಕೆಡಿಸಿಕೊಂಡು; ದೋಷಿ+ಎಂಬರೆ; ದೋಷಿ=ಅಪರಾಧಿ; ಎಂಬರೆ=ಎನ್ನುತ್ತಾರೆಯೆ; **ಅಕಟ... ಗುರುಲಘುವಿನ ಅಂತರವನು ಎಣಿಸದೆ ಬರಿದೆ ಮೂಢರಂತೆ ಎದೆಗೆಟ್ಟು ದೇವಿಯನು ದೋಷಿಯೆಂಬರೆ**=ಅಯ್ಯೋ, ಈ ಸನ್ನಿವೇಶದಲ್ಲಿ ಯಾವುದು ಸರಿ... ಯಾವುದು ತಪ್ಪು ಎಂಬುದನ್ನು ಒರೆಹಚ್ಚಿ ನೋಡದೆ, ತಿಳಿಗೇಡಿಗಳಂತೆ ಮನಸ್ಸನ್ನು ಹಾಳುಮಾಡಿಕೊಂಡು ವಿನಾಕಾರಣವಾಗಿ ಸೀತಾದೇವಿಯ ಮೇಲೆ ತಪ್ಪನ್ನು ಹೊರಿಸುವುದು ಸರಿಯೇ; ಜೀಯ=ಒಡೆಯ; ಪದುಳ=ನೆಮ್ಮದಿ; ಕದುಬು=ತಳಮಳಿಸು/ಕಳವಳಪಡು;

ಜೀಯ, ಪದುಳವು ಇಹುದು ಎಂದು ವಿನಯದೊಳ್ ಭರತನ್ ಅಗ್ರಜಾತನನು ಕದುಬಿ ನುಡಿದನು=ಒಡೆಯನೇ, ಇಂತಹ ಚಿಕ್ಕ ಸಂಗತಿಗಾಗಿ ಮನಸ್ಸನ್ನು ಕೆಡಿಸಿಕೊಳ್ಳದೆ, ಶಾಂತಚಿತ್ತನಾಗಿ ನೆಮ್ಮದಿಯಿಂದ ಇರುವುದೆಂದು ಭರತನು ರಾಮನನ್ನು ಕುರಿತು ಅತ್ಯಂತ ವಿನಯದ ದನಿಯಲ್ಲಿ ಕಳವಳಿಸುತ್ತ ನುಡಿದನು; **ಆತನನು ನೋಡುತ ಒಯ್ಯನೆ ಭೂಪನು ಇಂತೆಂದನು**=ಆಗ ರಾಮನು ಭರತನನ್ನು ನೋಡುತ್ತ ಕೂಡಲೇ ಈ ರೀತಿ ಹೇಳತೊಡಗಿದನು;

ಉಮ್ಮಳಿಸು=ಚಿಂತಿಸು/ತವಕಿಸು/ತಳಮಳಗೊಳ್ಳು; ವಿರಜೆ=ಕಳಂಕರಹಿತಳು; **ತಮ್ಮ ಉಮ್ಮಳಿಸಬೇಡ. ನೀನು ಆಡಿದಂತೆ ಅವನಿಸುತೆ ವಿರಜೆ ಅಹುದು**= ತಮ್ಮನೇ, ಚಿಂತಿಸಬೇಡ. ನೀನು ಹೇಳಿದಂತೆ ಸೀತೆಯು ಕಳಂಕರಹಿತಳು;

ಈ ದೂಸರನು ಸೈರಿಸಲಾರೆನು=ಆದರೆ ಈಗ ಬಂದಿರುವ ಅಪವಾದವನ್ನು ಸಹಿಸಿಕೊಳ್ಳುವುದಕ್ಕೆ ನನ್ನಿಂದ ಆಗುತ್ತಿಲ್ಲ; ಹರಿಶ್ಚಂದ್ರ+ಆದಿ; ಆದಿ=ಮೊದಲಾದ; ಪೃಥು=ಒಬ್ಬ ರಾಜ; ಪುರೂರವ=ಒಬ್ಬ ರಾಜ; ಹರಿಶ್ಚಂದ್ರ=ಒಬ್ಬ ರಾಜ; ನರಪತಿ=ರಾಜ; ಮಹಿ=ಭೂಮಂಡಲ; **ಪೃಥು ಪುರೂರವ ಹರಿಶ್ಚಂದ್ರಾದಿ ನರಪತಿಗಳು ಮಹಿಯೊಳು ಸುಮ್ಮನೆ ಉಳಿವರೇ**=ಭೂಮಂಡಲದಲ್ಲಿ ಪೃಥು ಪುರೂರವ ಹರಿಶ್ಚಂದ್ರ ಮುಂತಾದ ರಾಜರಿಗೆ ಕೀರ್ತಿಯು ಸುಮ್ಮನೆ ಬಂದಿಲ್ಲ. ಅವರೆಲ್ಲರೂ ಜೀವನದಲ್ಲಿ ಒಳ್ಳೆಯ ನಡೆನುಡಿಯಿಂದ ಬಾಳಿದ್ದರಿಂದಲೇ ಅಮರರಾಗಿ ಉಳಿದಿದ್ದಾರೆ; ಅಪಕೀರ್ತಿ=ಕೆಟ್ಟಹೆಸರು; ಒಳಗಾಗಲು+ಏತಕೆ; **ಅಪಕೀರ್ತಿಗೆ ಒಳಗಾಗಲೇತಕೆ**=ಕೆಟ್ಟಹೆಸರಿಗೆ ಏಕೆ ಬಲಿಯಾಗಬೇಕು; ಮಮತೆ=ನಾನು ನನ್ನದು ಎಂಬ ಮೋಹ/ಮಮಕಾರ; ಯೋಗಿ=ತಪಸ್ವಿ/ರಿಸಿ;

ಮಮತೆಯನು ಮಹಾಯೋಗಿ ಬಿಡುವಂತೆ ಇವಳನು ಉಳಿವೆನು ಎನೆ= ದೊಡ್ಡ ತಪಸ್ವಿಯು ಮಮಕಾರವನ್ನು ತ್ಯಜಿಸುವಂತೆ ನಾನು ಸೀತೆಯನ್ನು ತೊರೆಯುತ್ತೇನೆ ಎಂದು ರಾಮನು ನುಡಿಯಲು; ಹಮ್ಮೈಸು=ಗೋಳಾಡು; ಕಂಪಿಸು=ನಡುಗು; **ಲಕ್ಷ್ಮಣನು ಹಮ್ಮೈಸಿ ಕಂಪಿಸುತೆ ಕಿವಿಮುಚ್ಚುತ ಅಗ್ರಜಂಗೆ ಇಂತೆಂದನು**=ರಾಮನ ನುಡಿಗಳನ್ನು ಕೇಳಿ ಲಕ್ಷ್ಮಣನು ಸಂಕಟದ ತೀವ್ರತೆಯಿಂದ ನಡುಗಿ ಗೋಳಿಡುತ್ತ ಅಣ್ಣನಿಗೆ ಈ ರೀತಿ ಹೇಳಿದನು; ಕಾಯ+ಸುಖಕೆ+ ಓಸುಗಮ್; ಕಾಯ=ದೇಹ/ಮಯ್; ಸುಖ=ಆನಂದ; ಸುಖಕೋಸುಗಮ್= ಆನಂದಕ್ಕಾಗಿ; ಧರ್ಮಕೃತ=ಸತ್ಯನೀತಿನ್ಯಾಯದ ನಡೆನುಡಿ; ಬಿಡುವೊಲು= ಬಿಡುವಂತೆ; **ಕಾಯಸುಖಕೋಸುಗಮ್ ಧರ್ಮಕೃತಮನು ಬಿಡುವೊಲು**= ದೇಹದ ಬಯಕೆಯನ್ನು ಈಡೇರಿಸಿಕೊಂಡು ಆನಂದವನ್ನು ಪಡೆಯುವುದಕ್ಕಾಗಿ ಸತ್ಯನೀತಿನ್ಯಾಯದ ನಡೆನುಡಿಯನ್ನು ಬಿಟ್ಟು ಬಾಳುವಂತೆ; ಆಯತ+ಅಕ್ಷಿಯ; ಆಯತ=ವಿಶಾಲವಾದ; ಅಕ್ಷಿ=ಕಣ್ಣು; ಆಯತಾಕ್ಷಿ=ವಿಶಾಲವಾದ ಕಣ್ಣುಳ್ಳವಳು/ ಸೀತೆ; ಭಾವಶುದ್ಧಿ=ಒಳ್ಳೆಯ ಮನಸ್ಸು; **ಆಯತಾಕ್ಷಿಯ ಭಾವಶುದ್ಧಿಯನು ತಿಳಿದಿರ್ದು**=ಸೀತಾದೇವಿಯ ಮನಸ್ಸು ಎಷ್ಟು ಒಳ್ಳೆಯದು ಎಂಬುದು ತಿಳಿದಿದ್ದರೂ; ನಿಷ್ಕರುಣದಿ=ತುಸುವಾದರೂ ಕರುಣೆಯಿಲ್ಲದೆ; ವಾಯ=ಸುಳ್ಳು/ ಹುಸಿ; ಇಂತು=ಈ ರೀತಿ;

ನಿಷ್ಕರುಣದಿ ವಾಯದ ಅಪವಾದಕೆ ಇಂತು ಅರಸಿಯನು ತೊರೆಯಬೇಕು ಎಂಬರೇ=ಸುಳ್ಳು ಅಪವಾದಕ್ಕಾಗಿ ಸೀತೆಯನ್ನು ತೊರೆಯಬೇಕೆಂದು ಕರುಣೆಯಿಲ್ಲದೆ ಹೇಳುತ್ತಿರುವೆಯಲ್ಲ, ಇದು ಸರಿಯೇ: ಬೆಸಲು+ಆದ; ಬೆಸಲು=ಹಡೆಯುವಿಕೆ/ಹೆರಿಗೆ; ಆರೈದು=ಅಕ್ಕರೆಯನ್ನು ತೋರಿಸುವುದು; ಸಲಹು=ಸಾಕು/ಬೆಳೆಸು/ಪಾಲಿಸು; ಸಲಹಬೇಕು=ಕಾಪಾಡಿಕೊಳ್ಳಬೇಕು; ಜೀಯ, **ತುಂಬಿದ ಬಸುರು ಬೆಸಲಾದ ದೇವಿಯನು ಪ್ರಿಯದಿಂದೆ ಆರೈದು ಸಲಹಬೇಕು ಎಂದು ರಘುರಾಯಂಗೆ ಲಕ್ಷ್ಮಣನು ಬಿನ್ನೈಸೆ**=ಒಡೆಯನೆ, ತುಂಬು ಬಸುರಿಯಾಗಿ ಮಗುವನ್ನು ಹೆರಲಿರುವ ಸೀತಾದೇವಿಯನ್ನು ಅಕ್ಕರೆಯಿಂದ ಕಾಪಾಡಿಕೊಳ್ಳಬೇಕಾದ ಹೊಣೆಯು ನಿನ್ನ ಪಾಲಿಗಿದೆ ಎಂದು ರಾಮನಿಗೆ ಲಕ್ಷ್ಮಣನು ಅರಿಕೆ ಮಾಡಿಕೊಳ್ಳಲು; ಮೇಲ್+ಪಾಯ್ದು; ಪಾಯ್=ನೆಗೆ/ಹಾರು/ಎರಗು; ಮೇಲ್ವಾಯ್ದು=ಆವೇಶದಿಂದ ಮುನ್ನುಗ್ಗಿ; ಇಂತು+ಎಂದನು;

ಶತ್ರುಘ್ನನು ಮೇಲ್ವಾಯ್ದು ಇಂತೆಂದನು=ಶತ್ರುಘ್ನನು ತುಂಬಾ ಆವೇಶದಿಂದ ಮುಂದೆ ಬಂದು ಈ ರೀತಿ ಹೇಳಿದನು; ಇಕ್ಷ್ವಾಕು=ಅಯೋಧ್ಯೆಯನ್ನು ಆಳುತ್ತಿದ್ದ ಸೂರ್ಯವಂಶದ ಮೊದಲ ರಾಜನ ಹೆಸರು; **ಇಕ್ಷ್ವಾಕು ವಂಶದವರು ಅರಸಿಯನು ಎಂತು ಬಿಡುವರು**=ಹೆಸರಾಂತ ಇಕ್ಷ್ವಾಕು ವಂಶದ ರಾಜರು ಪಟ್ಟದ ರಾಣಿಯನ್ನು ಯಾವ ರೀತಿ ಬಿಡಲು ಆಗುತ್ತದೆ. ಹಾಗೆ ಬಿಟ್ಟರೆ ರಾಜವಂಶಕ್ಕೆ ಕಳಂಕ ತಟ್ಟುತ್ತದೆ; ಇಳೆ=ಭೂಮಂಡಲ; ಆರ್+ಆದೊಡಮ್; ಆರ್=ಯಾರು; ಆದೊಡಮ್=ಆದರೂ: ದೂಸರು=ಅಪವಾದ; **ಇಳೆಯೊಳು ಆರಾದೊಡಮ್ ದೂಸರನು ಎಂತು ನುಡಿವರು**=ಭೂಮಂಡಲದಲ್ಲಿ ಯಾರಾದರೂ ಇಂತಹ ನಿಂದನೆಯನ್ನು ಇಕ್ಷ್ವಾಕು ರಾಜವಂಶದ ಬಗ್ಗೆ ಹೇಗೆ ತಾನೆ ನುಡಿಯುವರು; ಅಮಲ=ಕೊಳಕು ಇಲ್ಲದಿರುವುದು/ಪರಿಶುದ್ಧವಾದುದು; ಸತ್ಕೀರ್ತಿ=ಒಳ್ಳೆಯ ಹೆಸರು;

ಅಮಲ ಸತ್ಕೀರ್ತಿಯನು ಎಂತು ಪಡೆವರು=ಈ ರೀತಿ ಅಪವಾದವನ್ನು ಮತ್ತೊಬ್ಬರ ಮೇಲೆ ಹೊರಿಸುವವರು ಹೇಗೆ ತಾನೆ ಒಳ್ಳೆಯ ಹೆಸರನ್ನು ಪಡೆಯಲು ಆಗುತ್ತದೆ; **ಬುದ್ಧಿ ಪೇಳ್ವುದಕೆ ಒಡೆಯರಿಲ್ಲವಾಗಿ**=ಯಾವುದು ಸರಿ/ಯಾವುದು ತಪ್ಪು ಎಂಬುದನ್ನು ತಿಳಿಯಹೇಳಿ, ಸರಿಯಾದ ತಿಳುವಳಿಕೆಯನ್ನು ಹೇಳುವವರು ಇಲ್ಲವಾಗಿರುವುದರಿಂದ ಇಂತಹ ಅಪಚಾರ ನಡೆಯುತ್ತಿದೆ; ಏಳ್ಗೆ=ಬೆಳವಣಿಗೆ; ಕಡಿ=ಕತ್ತರಿಸು; **ಏಳ್ಗೆಯನು ಎಂತು ಕಡಿವರು**=ರಾಜವಂಶದ ಬೆಳವಣಿಗೆಯನ್ನು ಹೇಗೆ ತುಂಡರಿಸುತ್ತಾರೆ. ತುಂಬು ಬಸುರಿಯಾಗಿರುವ

ಸೀತೆಯನ್ನು ತ್ಯಜಿಸುವುದರಿಂದ ರಾಜವಂಶದ ಕುಡಿಯನ್ನು ಕತ್ತರಿಸಿದಂತಾಗುತ್ತದೆ; ಅನ್ವಯ=ವಂಶ/ಕುಲ; ಬಾಳ್ಕೆ=ಬದುಕು/ಜೀವನ; ಅಳಲು=ಸಂಕಟ/ಶೋಕ/ವೇದನೆ; **ಅನ್ವಯದ ಬಾಳ್ಕೆಯನು ಪೆಣ್ ಅಳಲ ಬೆಂಕಿಯಿನ್ ಎಂತು ಸುಡುವರು**=ರಾಜವಂಶದ ಬದುಕನ್ನು ಹೆಣ್ಣಿನ ಸಂಕಟದ ಬೆಂಕಿಯಿಂದ ಹೇಗೆ ತಾನೇ ಸುಡುವರು. ಅಂದರೆ ಸೀತೆಯ ಒಡಲ ಬೆಂಕಿಯು ಇಕ್ಷ್ವಾಕು ರಾಜವಂಶವನ್ನೇ ಸುಟ್ಟು ನಾಶಮಾಡುತ್ತದೆ;

ಉರಿದು+ಎದ್ದನು; ಉರಿ=ರೇಗು/ಕೆರಳು; **ಈಗಳ್ ಎನ್ನ ಒಡಹುಟ್ಟಿದವರು ಇದಕ್ಕೆ ಕಿವಿ ಎಂತು ಕುಡುವರು ಎನುತ ಶತ್ರುಘ್ನನು ಉರಿದೆದ್ದನು**=ಈಗ ನನ್ನ ಒಡಹುಟ್ಟಿದವರು ಸೀತೆಯನ್ನು ತೊರೆಯಬೇಕೆಂಬ ಅಣ್ಣನ ಮಾತನ್ನು ಹೇಗೆ ತಾನೆ ಕೇಳಲು ಆಗುತ್ತದೆ ಎಂದು ಶತ್ರುಘ್ನನು ಕೋಪೋದ್ರೇಕದಿಂದ ನುಡಿದನು; ಅನುಜರು=ಒಡಹುಟ್ಟಿದವರು; ತಲೆ+ಬಾಗಿ; ತರಣಿ=ಸೂರ್ಯ; ತರಣಿಕುಲತಿಲಕ=ಸೂರ್ಯವಂಶಕ್ಕೆ ತಿಲಕಪ್ರಾಯನಂತಿರುವ ರಾಮ; ಒಯ್ಯನೆ= ಮರುಗಳಿಗೆಯಲ್ಲಿಯೇ; ದೈನ್ಯಭಾವ=ಸಂಕಟದಿಂದ ಮುದುಡಿಹೋಗಿ;

ಅನುಜರು ಆಡಿದ ನುಡಿಗೆ ತಲೆವಾಗಿ ತರಣಿಕುಲತಿಲಕನು ಒಯ್ಯನೆ ದೈನ್ಯಭಾವದಿನ್=ತನ್ನ ನಿಲುವಿಗೆ ಎದುರಾಗಿ, ಸೀತೆಯ ಪರವಾಗಿ ಮಾತನಾಡಿದ ತಮ್ಮಂದಿರ ನುಡಿಗಳನ್ನು ಕೇಳಿ, ರಾಮನು ತಲೆಯನ್ನು ಬಗ್ಗಿಸಿ, ಸಂಕಟದಿಂದ ಮುದುಡಿಹೋಗಿ ಮಾತನಾಡತೊಡಗಿದನು; ತರಹರಿಸು= ಸಹಿಸಿಕೊಳ್ಳು; ಹೃತ್+ಶೂಲಮ್+ಅನ್; ಹೃತ್=ಎದೆ; ಶೂಲ=ಚೂಪಾದ ಮೊನೆಯುಳ್ಳ ಹರಿತವಾದ ಹತಾರ; ಹೃತ್ ಶೂಲ=ಇದೊಂದು ನುಡಿಗಟ್ಟು. ಎದೆಯನ್ನು ಹೊಕ್ಕಿರುವ ಶೂಲ ಎಂದರೆ ಮಯ್ ಮನವನ್ನು ಗಾಸಿಗೊಳಿಸುತ್ತಿರುವ ಸಂಕಟ; ಜಾನಕಿ=ಜನಕ ಮಹಾರಾಜನ ಸಾಕು ಮಗಳಾದ ಸೀತೆ; **ತನಗೆ ತರಹರಿಸಬಾರದ ಅಪವಾದ ಹೃಚ್ಛೂಲಮನ್ ಜಾನಕಿಯನು ಉಳಿದು**=ನನ್ನ ಪಾಲಿಗೆ ಪರಿಹರಿಸಲಾಗದಂತಹ ಅಪಮಾನ ಉಂಟಾಗಲು ಕಾರಣವಾಗಿರುವ ಸೀತೆಯನ್ನು ತೊರೆದು;

ಪೆರೆ=ಹಾವಿನ ಪೊರೆ; ಉರ್ಚು=ಉದುರು/ಕಳಚಿ ಬೀಳು; ಉರಗ=ಹಾವು/ ಸರ್ಪ; **ಪೆರೆ ಉರ್ಚಿದ ಉರಗನಂತೆ ಇರ್ದಪೆನು**=ಪೊರೆಯನ್ನು ಕಳಚಿ ಕೊಳ್ಳುವ ಹಾವಿನಂತೆ ಸೀತೆಯನ್ನು ತೊರೆದು ನನಗೆ ಬಂದಿರುವ ಕಳಂಕವನ್ನು ತೊಡೆದುಕೊಂಡು ಒಬ್ಬಂಟಿಯಾಗಿರುತ್ತೇನೆ; ಒರೆ=ಹೇಳು; **ಸಾಕು ನಿಮಗೆ ಒರೆದೊಡೆ ಏನಹುದು ಎಂದು ಬೇಸರೊಳು ಮನೆಗಳ್ಗೆ ಭರತ ಶತ್ರುಘ್ನರನು**

ಕಳುಹುತ=ನಿಮ್ಮ ಜತೆ ನನ್ನ ಸಂಕಟವನ್ನು ಹೇಳಿಕೊಳ್ಳುವುದರಿಂದ ಏನು ತಾನೆ ಪ್ರಯೋಜನ ಎಂದು ಬೇಸರಿಸಿಕೊಂಡು, ಭರತ ಶತ್ರುಘ್ನರನ್ನು ಅವರ ಮನೆಗಳಿಗೆ ಕಳುಹಿಸಿ; ಸೌಮಿತ್ರಿ=ದಶರಥನ ಎರಡನೆಯ ಹೆಂಡತಿಯಾದ ಸುಮಿತ್ರೆಯ ಮಗನಾದ ಲಕ್ಷ್ಮಣ;

ಏಕಾಂತದೊಳು ಸೌಮಿತ್ರಿಗೆ ಇಂತೆಂದನು=ರಾಮನು ಲಕ್ಷ್ಮಣನನ್ನು ಏಕಾಂತಕ್ಕೆ ಕರೆದು ಈ ರೀತಿ ಹೇಳಿದನು; ಇಂದುವರೆಗೆ=ಈ ದಿನದ ತನಕ; ತಾನ್+ಎಂದ; **ತಮ್ಮ ಬಾ. ನೀನು ಇಂದುವರೆಗೆ ತಾನೆಂದ ಮಾತನು ಮೀರಿದವನಲ್ಲ**=ಲಕ್ಷ್ಮಣ, ಈ ದಿನದ ತನಕ ನೀನು ಯಾವತ್ತು ನನ್ನ ಮಾತನ್ನು ಕಡೆಗಣಿಸಿಲ್ಲ; ಆರಯ್=ಚಿಂತಿಸು/ಯೋಚಿಸು; **ಕೆಲಬಲವನು ಆರಯ್ಯುತ ಮರುಗದಿರು**=ಅಗಸನ ಮಾತಿನಿಂದ ಉಂಟಾಗಿರುವ ಬಿಕ್ಕಟ್ಟನ್ನು ಕಂಡು ಮತ್ತು ಅದರ ಬಗ್ಗೆ ತಮ್ಮಂದಿರಾದ ನೀವೆಲ್ಲರೂ ಆಡಿದ ಮಾತುಗಳನ್ನು ಚಿಂತಿಸುತ ಮರುಗಬೇಡ;ಅಲ್ಲದೊಡೆ=ಹಾಗಲ್ಲದಿದ್ದರೆ; **ಅಲ್ಲದೊಡೆ ತನ್ನ ಕೊರಳಿಗಿದೆ ಖಡ್ಗಮ್**=ಈಗ ನನ್ನ ಮಾತು ನಡೆಯದಿದ್ದರೆ, ನನ್ನ ಕೊರಳನ್ನು ನಾನೇ ಕತ್ತರಿಸಿಕೊಂಡು ಸಾವನ್ನಪ್ಪುತ್ತೇನೆ; ಉಮ್ಮಳಿಸು=ಚಿಂತಿಸು/ಕಳವಳಪಡು;

ಈಗ ಜಾನಕಿಯನು ಉಮ್ಮಳಿಸದೆ ಒಯ್ದು ಗಂಗೆಯ ತಡಿಯ ಅರಣ್ಯದೊಳು ಸುಮ್ಮನೆ ಕಳುಹಿ ಬರ್ಪುದು=ಏನನ್ನೂ ಚಿಂತಿಸದೆ ಸುಮ್ಮನೆ ಈಗ ನೀನು ಸೀತೆಯನ್ನು ಗಂಗಾ ನದಿಯ ತಡಿಯಲ್ಲಿರುವ ಕಾಡಿನಲ್ಲಿ ಬಿಟ್ಟು ಬರುವುದು; ಎನ್ನೊಳು=ನನ್ನಲ್ಲಿ; ಒಮ್ಮೆ=ಒಂದು ಬಾರಿ; ಐದಬೇಕು=ಹೋಗಬೇಕು; ನೆವ=ಕಾರಣ; **ಅವಳು ಎನ್ನೊಳು ಬಯಕೆಯಿಂದ ಒಮ್ಮೆ ಕಾನನಕೆ ಐದಬೇಕೆಂದು ಆಡಿರ್ಪಳ್. ಅದೆ ನಿನಗೆ ನೆವಮ್ ಎಂದನು**=ಸೀತಾದೇವಿಯು ಒಮ್ಮೆ ನನ್ನ ಮುಂದೆ ತಾನು ಕಾಡಿಗೆ ಹೋಗಿಬರಬೇಕೆಂಬ ಬಸುರಬಯಕೆಯನ್ನು ಹೇಳಿಕೊಂಡಿದ್ದಳು. ಈಗ ನಿನಗೆ ಅದು ನೆರವಾಗುತ್ತದೆ. ಆಕೆಯ ಬಯಕೆಯಂತೆಯೇ ನೀನು ಕಾಡಿಗೆ ಕರೆದುಕೊಂಡು ಹೋಗುತ್ತಿರುವೆ ಎಂದು ತಿಳಿಯುತ್ತಾಳೆ;ರೌರವ=ಅತಿಹೆಚ್ಚಿನ ದಂಡನೆಯನ್ನು ನೀಡುವ ಈ ಹೆಸರಿನ ನರಕವೊಂದು ಇದೆಯೆಂಬ ಕಲ್ಪನೆಯು ಜನಮನದಲ್ಲಿದೆ;

ನಿನ್ನ ಆಜ್ಞೆಯನು ಮೀರಲ್ಕೆ ತನಗೆ ರೌರವಮ್ ಅಪ್ಪುದು=ನಿನ್ನ ಅಪ್ಪಣೆಯನ್ನು ಮೀರಿದರೆ ಅಂದರೆ ಸೀತಾದೇವಿಯನ್ನು ಕಾಡಿನಲ್ಲಿ ಬಿಟ್ಟುಬಾರದಿದ್ದರೆ, ನನಗೆ ಬಹುದೊಡ್ಡ ನರಕ ಪ್ರಾಪ್ತವಾಗುತ್ತದೆ; **ಎಂದುದನು ಮಾಡಲ್ಕೆ ಜನನಿಯನು**

ಕೊಂದ ಉಗ್ರಗತಿಯಪ್ಪುದು=ನೀನು ಹೇಳಿದಂತೆ ಮಾಡಿದರೆ, ತಾಯಿಯನ್ನು ಕೊಂದ ಪಾಪಿಗೆ ಉಂಟಾಗುವ ಭಯಂಕರವಾದ ದಂಡನೆಗೆ ಗುರಿಯಾಗುತ್ತೇನೆ; ಏಗೈವೆನು=ಏನು ಮಾಡಲಿ; **ಏಗೈವೆನು ಎಂದು**=ಈಗೇನು ಮಾಡಲಿ ಎಂದು ಇಬ್ಬಗೆಯ ಸಂಕಟದಿಂದ ತೊಳಲಾಡುತ್ತ; ಕಡುಶೋಕ=ಬಹಳ ಸಂಕಟ; ತನು=ದೇಹ; ಝೋಂಪಿಸು=ನಡುಗು/ಕಂಪಿಸು;

ಕಡುಶೋಕದಿಂದೆ ತನು ಝೋಂಪಿಸಲ್ಕೆ=ಹೆಚ್ಚಿನ ಸಂಕಟದಿಂದ ದೇಹವು ನಡುಗುತ್ತಿರಲು; ಸೆರೆಬಿಗಿದು=ಕೊರಳು ಕಟ್ಟಿಬಂದಂತಾಗಿ; ನನೆ=ಒದ್ದೆಯಾಗಿ; ಅಳಲ=ಸಂಕಟ/ವೇದನೆ/ನೋವು; ತೊರೆ=ನದಿ/ಹೊಳೆ; ಆಳ್=ಮುಳುಗು; ಘೂರ್ಮಿಸು=ಅಬ್ಬರಿಸು/ದೊಡ್ಡ ದನಿಯಲ್ಲಿ ಗದರಿಸು; **ಸೆರೆಬಿಗಿದು ಕಂಬನಿಯಿಂದೆ ನನೆದು ಅಳಲ ತೊರೆಯೊಳ್ ಆಳ್ದ ಅನುಜನನು ಘೂರ್ಮಿಸುತೆ**= ಗಂಟಲು ಕಟ್ಟಿಬಂದು ಮಾತನಾಡಲಾಗದೆ, ಕಣ್ಣೀರಿನಲ್ಲಿ ತೊಯ್ದುಹೋಗಿ, ಸಂಕಟದ ಹೊಳೆಯಲ್ಲಿ ಮುಳುಗಿದ ತಮ್ಮನನ್ನು ದೊಡ್ಡ ದನಿಯಲ್ಲಿ ಗದರಿಸುತ್ತ; **ತಾನು ಇರಲ್ಕೆ ನಿನಗೆ ದೋಷಮೆ. ನಡೆ ಕಳುಹು ಎಂದ ಅರಸನು**=ನಾನು ಇರುವಾಗ ನಿನಗೆ ಯಾವ ಪಾಪವು ತಟ್ಟುವುದಿಲ್ಲ. ಹೋಗು ಸೀತೆಯನ್ನು ಕಾಡಿಗೆ ಕಳುಹಿಸು ಎಂದು ನುಡಿದ ರಾಮನು;

ಏನ್ ದಯೆ ತೊರೆದನೋ=ಇದೇನು ರಾಮನು ಕರುಣೆ ಎಂಬುದನ್ನು ಸಂಪೂರ್ಣವಾಗಿ ತೊರೆದಿರುವನಲ್ಲ; ಸೀತೆಯ ಬಗ್ಗೆ ತುಂಬಾ ಕ್ರೂರಿಯಾಗಿದ್ದಾನೆ; ಜನಮೇಜಯ ರಾಜನಿಗೆ ರಾಮಾಯಣದ ಕತೆಯನ್ನು ಹೇಳುತ್ತಿರುವ ಜೈಮಿನಿ ಮುನಿಯು ರಾಮನ ಬಗ್ಗೆ ಈ ರೀತಿ ಉದ್ಗಾರದ ನುಡಿಗಳನ್ನಾಡಿದ್ದಾನೆ;

❖

ನೋಟ–ನಾಲ್ಕು

ಇಡಿದ=ಹೆಚ್ಚಾಗಿರುವ/ತುಂಬಿದ; ವಾತ್ಸಲ್ಯಮ್+ಎಂಬ; ವಾತ್ಸಲ್ಯ=ಅಕ್ಕರೆ/ಮಮತೆ; ಎಂಬ=ಎನ್ನುವ; ಬಲ್ಲಿತ್ತು+ಕಣ್ಣಿ+ಒಳು; ಬಲ್ಲಿತ್ತು=ಬಲವಾಗಿರುವುದು; ಕಣ್ಣಿ=ಹಗ್ಗ; ಬಲ್ಗಣ್ಣಿ=ಗಟ್ಟಿಯಾದ ಹಗ್ಗ; ಒಳು=ಅಲ್ಲಿ; ಕಟ್ಟು+ಪಡೆದು; ಕಟ್ಟು=ಸಂಕೋಲೆ/ಬಂಧಿಸು; ಪಡೆದು=ಹೊಂದಿ; **ಅಣ್ಣದೇವನೊಳು ಇಡಿದ ವಾತ್ಸಲ್ಯಮೆಂಬ ಬಲ್ಗಣ್ಣಿಯೊಳು ಕಟ್ಟುವಡೆದು**=ದೇವಸ್ವರೂಪಿಯಾಗಿರುವ ರಾಮನೊಡನೆ ಮಮತೆಯೆಂಬ ಬಲುಗಟ್ಟಿಯಾದ ಹಗ್ಗದಿಂದ ನಾನು ಬಂಧಿತನಾಗಿದ್ದೇನೆ. ಇದೊಂದು ರೂಪಕವಾಗಿ ಬಳಕೆಗೊಂಡಿದೆ. ರಾಮ ಮತ್ತು ಲಕ್ಷ್ಮಣರ ನಡುವಣ ಸೋದರಿಕೆಯ ಗಟ್ಟಿಯಾದ ನಂಟನ್ನು ಇದು ಸೂಚಿಸುತ್ತದೆ;

ಅಲ್ಲ ಎನಲು ಅರಿಯದೆ=ಅಣ್ಣನ ಮಾತಿಗೆ ಆಗದು ಎಂದು ಹೇಳಲು ತಿಳಿಯದೆ; ನಿರ್ವಿಣ್ಣಭಾವದೊಳು=ಉತ್ಸಾಹರಹಿತನಾಗಿ; ಅಂದು=ಆಗ; ತುರಗ=ಕುದುರೆ; ಸಾರಥಿ=ರಥವನ್ನು ನಡೆಸುವವನು; ಕೇತನಂಗಳ್+ಇಂದೆ; ಕೇತನ=ಬಾವುಟ; ಹಣ್=ಅಣಿಗೊಳಿಸು/ಸಿದ್ಧಗೊಳಿಸು; ಹಣ್ಣಿದ=ಸಿದ್ಧಗೊಂಡ/ಸಜ್ಜಾದ; ವರೂಥ=ರಥ; ಪೊರಗೆ ಇರಿಸಿ=ಹೊರಗೆ ನಿಲ್ಲಿಸಿ; ನೆಲ+ಪೆಣ್; ನೆಲವೆಣ್=ಭೂದೇವಿ; ನೆಲವೆಣ್ಣ ಮಗಳು=ಭೂದೇವಿಯ ಮಗಳಾದ ಸೀತೆ; ಇರುತ+ಇರ್ದ; ಐದಿ=ಬಂದು; ಈಕ್ಷಿಸದೆ=ನೋಡದೆ; ಏತಕೆ=ಯಾವ ಕಾರಣಕ್ಕಾಗಿ; ಎಳಸು=ಇಚ್ಚಿಸು/ಬಯಸು; **ತಾಯೆ, ನೀನು ಏತಕೆ ಎಳಸಿದೆ**=ತಾಯೆ, ನೀನು ಏತಕ್ಕೆ ಇಂತಹ ಬಯಕೆಗೆ ಒಳಗಾಗಿ ರಾಮನಿಗೆ ತಿಳಿಸಿದೆ; **ನಿನ್ನನು ಈಗ ರಘುರಾಯನು ತಪೋವನಕೆ ಕಳುಹಿ ಬರಹೇಳಿದನು**=ಈಗ ರಾಮನು ನಿನ್ನನ್ನು ತಪೋವನಕ್ಕೆ ಕಳುಹಿಸಿ ಬಾ ಎಂದು ನನಗೆ ಹೇಳಿದ್ದಾನೆ;

ಪ್ರಿಯಮ್+ಉಳ್ಳೊಡೆ; ಪ್ರಿಯ=ಪ್ರೀತಿ/ಇಷ್ಟವಾದುದು; ಉಳ್ಳೊಡೆ=ಇದ್ದರೆ; **ಪ್ರಿಯಮುಳ್ಳೊಡೆ**=ಆ ನಿನ್ನ ಬಯಕೆ ಈಗಲೂ ಇದ್ದರೆ; **ರಥಮ್ ಪಣ್ಣಿ ಬಂದಿದೆಕೋ**=ಇದೋ ನೋಡಿರಿ, ನಿಮ್ಮನ್ನು ಕಾಡಿಗೆ ಕರೆದುಕೊಂಡು ಹೋಗಲು ರಥವು ಸಿದ್ಧವಾಗಿ ಬಂದಿದೆ; ಬಿಜಯಂಗೈವುದು=ಹೊರಡುವುದು/ತೆರಳುವುದು; ಛಾಯೆ+ಕಾಣಿಸಿ; ಛಾಯೆ=ಸೂಚನೆ; ಛಾಯೆಗಾಣಿಸಿ= ಸೂಚನೆಯನ್ನು ನೀಡಿ; **ಸುಮಿತ್ರಾತ್ಮಜನು ಛಾಯೆಗಾಣಿಸಿ ನುಡಿದ ಅಭಿಪ್ರಾಯಮನ್ ತಿಳಿಯದೆ**= "ನೀವೇತಕ್ಕೆ ಕಾಡಿಗೆ ಹೋಗುವ ಬಯಕೆಯನ್ನು ನನ್ನ ಅಣ್ಣನ ಮುಂದೆ ಹೇಳಿಕೊಂಡಿರಿ. ಈಗ ಅದನ್ನೇ ನೆಪವನ್ನಾಗಿ ಮಾಡಿಕೊಂಡು ನಿಮ್ಮನ್ನು ತೊರೆಯುತ್ತಿದ್ದಾನೆ" ಎಂಬ ಸಂಕಟದ ದನಿಯನ್ನು ಸೂಚಿಸುವಂತೆ ಹೇಳಿದ ಲಕ್ಷ್ಮಣನ ಮಾತಿನ ಹಿನ್ನೆಲೆಯನ್ನು ಸೀತೆಯು ತಿಳಿಯದೆ;

ಆಯತ+ಅಂಬಕಿ; ಆಯತ=ವಿಶಾಲವಾದ; ಅಂಬಕ=ಕಣ್ಣು; ಆಯತಾಂಬಕಿ=ವಿಶಾಲವಾದ ಕಣ್ಣುಗಳನ್ನುಳ್ಳ ಸೀತೆ; ಸಂಭ್ರಮ+ಅನ್ವಿತೆಯಾದಳು; ಅನ್ವಿತೆ=ಕೂಡಿದವಳು; **ಆಯತಾಂಬಕಿ ಅತಿ ಸಂಭ್ರಮಾನ್ವಿತೆಯಾದಳು**=ಸೀತೆಯು ಆನಂದದಿಂದ ಓಲಾಡಿದಳು; ಅಭೀಷ್ಟಮ್+ಅನ್; ಅಭೀಷ್ಟ=ಆಸೆ/ಬಯಕೆ/ಇಚ್ಛೆ; ಸಲಿಸುವನು=ಈಡೇರಿಸುವನು/ನೇರವೇರಿಸುವನು; ಕಾಂತ=ಗಂಡ/ಪತಿ; **ತನ್ನ ಅಭೀಷ್ಟಮನ್ ಸಲಿಸುವನು ಕಾಂತನು ಎಂಬ ಉತ್ಸವದೊಳು**=ತನ್ನ ಬಯಕೆಯನ್ನು ರಾಮನು ಈಡೇರಿಸುತ್ತಿದ್ದಾನೆ ಎಂಬ ಸಡಗರದಿಂದ; ಅಂಬುಜ+ಆನನೆ; ಅಂಬುಜ=ತಾವರೆ; ಆನನ=ಮುಖ/ಮೊಗ; ಅಂಬುಜಾನನೆ= ತಾವರೆಯಂತಹ ಮೊಗವುಳ್ಳವಳು. ಸುಂದರವಾದ ಮುಖವನ್ನುಳ್ಳ ಹೆಣ್ಣನ್ನು ಬಣ್ಣಿಸಲು ಈ ನುಡಿಗಟ್ಟನ್ನು ಬಳಸುತ್ತಾರೆ:

ನಂಬಿದರ=ನಂಬಿದವರ; ಕೃಪಾಳು=ಕರುಣೆಯ ಗುಣವುಳ್ಳವನು; ಕಾಂತ= ಗಂಡ; **ನಂಬಿದರ ಅಭೀಷ್ಟಮನ್ ಸಲಿಸುವ ಕೃಪಾಳು ತಾನು ಎಂಬುದನು ಎನ್ನ ಕಾಂತನು ಇಂದು ಎನಗೆ ಕಾಣಿಸಿದನು ಎಂದು ಕೌಸಲೆಗೆ ಪೇಳ್ದು**="ನಂಬಿದವರ ಕೋರಿಕೆಯನ್ನು ಈಡೇರಿಸುವ ಕರುಣಾವಂತನು ತಾನು" ಎಂಬುದನ್ನು ಇಂದು ನನ್ನ ರಾಮನು ನನಗೆ ಮನಗಾಣಸಿದನು ಎಂದು ಅತ್ತೆಯಾದ ಕೌಸಲ್ಯೆಯ ಮುಂದೆ ರಾಮನ ಗುಣಗಾನ ಮಾಡಿ; ಕೌಸಲ್ಯೆ=ದಶರಥ ರಾಜನ ಮೊದಲನೆಯ ಹೆಂಡತಿ. ರಾಮನ ತಾಯಿ; ಮುಂದು+ಪರಿದು; ಮುಂಬರಿದು=ಮುಂದಕ್ಕೆ ಬಂದು; ಒಡಂಬಡಿಸಿ=ಒಪ್ಪಿಸಿ; ಬಲವಂದು=ಬಲಗಡೆಯಿಂದ ಸುತ್ತುಬಂದು; ಕಾಲ್ಗೆ+ಎರಗಿ; ಎರಗಿ=ನಮಸ್ಕರಿಸಿ; ಪರಕೆ+ಪೆತ್ತು; ಪರಕೆ=ಆಶೀರ್ವಾದ; ಪರಕೆವೆತ್ತು=ಆಶೀರ್ವಾದವನ್ನು ಪಡೆದು;

ಮುಂಬರಿದು ಒಡಂಬಡಿಸಿ ಬಲವಂದು ಕಾಲ್ಗೆರಗಿ ತುಂಬಿದ ಪರಕೆವೆತ್ತು=ಸೀತೆಯು ಅತ್ತೆಯ ಮುಂದಕ್ಕೆ ಬಂದು, ತಾನು ಕಾಡಿಗೆ ಹೋಗುತ್ತಿರುವದಕ್ಕೆ ಅತ್ತೆಯ ಅನುಮತಿಯನ್ನು ಪಡೆದುಕೊಂಡ ನಂತರ ಬಲಗಡೆಯಿಂದ ಅವರನ್ನು ಒಮ್ಮೆ ಸುತ್ತುಬಂದು, ಕಾಲುಗಳಿಗೆ ನಮಿಸಿ, ಆಶೀರ್ವಾದವನ್ನು ಪಡೆದುಕೊಂಡು; **ಕೈಕೆಯೀ ದೇವಿಗೆ ಶಿರಂಬಾಗಿ**=ಕೈಕೆಯೀ ದೇವಿಯವರಿಗೆ ತಲೆಬಾಗಿ ನಮಿಸಿ; ವರ=ಪೂಜ್ಯರಾದ; ಸುಮಿತ್ರೆ=ದಶರಥ ರಾಜನ ಎರಡನೆಯ ಹೆಂಡತಿ. ಲಕ್ಷ್ಮಣ ಮತ್ತು ಶತ್ರುಘ್ನರ ತಾಯಿ; **ವರಸುಮಿತ್ರೆಗೆ ನಮಿಸಿ ಸಖಿಯರನು ಸಂತೈಸಿ ಬೀಳ್ಕೊಂಡಳು**=ಪೂಜ್ಯರಾದ ಸುಮಿತ್ರಾದೇವಿಯವರಿಗೆ ನಮಸ್ಕರಿಸಿ, ಗೆಳತಿಯರನ್ನು ಸಮಾಧಾನ ಹೇಳಿ, ಅಲ್ಲಿಂದ ಹೊರಟಳು; **ನಿಜಮ್ ಇದೆಂದು**=ತನ್ನ ಕೋರಿಕೆಯಂತೆ ಆಶ್ರಮದಲ್ಲಿರುವ ರಿಸಿಪತ್ನಿಯರ ಬಳಿ ಕೆಲವು ದಿನಗಳ ಕಾಲ ಇದ್ದುಬರುತ್ತೇನೆ ಎಂಬುದನ್ನೇ ನಿಜವೆಂದು ತಿಳಿದು;

ಮಿಗೆ=ಹೆಚ್ಚಾಗಿ/ಅತಿಶಯವಾಗಿ; ಅಗರು=ಸುವಾಸನೆಯುಳ್ಳ ವಸ್ತು; ಚಂದನ=ಶ್ರೀಗಂಧದ ಚೆಕ್ಕೆ; ಅನುಲೇಪನ=ಮುಖಕ್ಕೆ ಬಳಿದುಕೊಳ್ಳುವ ವಸ್ತು; ದಿವ್ಯ+ಅಂಬರ; ದಿವ್ಯ=ಉತ್ತಮವಾದ/ಮನೋಹರವಾದ; ಅಂಬರ=ಬಟ್ಟೆ/ವಸ್ತ್ರ; ದಿವ್ಯಾಂಬರ=ಮನೋಹರವಾದ ಮತ್ತು ಬೆಲೆಬಾಳುವ ಬಟ್ಟೆ; ಮಣಿ=ಮುತ್ತು, ರತ್ನ, ವಜ್ರದ ಹರಳುಗಳು; ಭೂಷಣ=ಒಡವೆ; ಸುವಸ್ತು=ಒಳ್ಳೆಯ ವಸ್ತು; ಇಂಬಿಟ್ಟು=ಸರಿಯಾಗಿ ಜೋಡಿಸಿಕೊಂಡು; **ಮಿಗೆ ತಪೋವನದ ಋಷಿಗಳ್ಗೆ ಮುನಿಪತ್ನಿಯರ್ಗೆ ಅಗರು ಚಂದನ ಕುಂಕುಮ ಅನುಲೇಪನಗಳನು ಬಗೆಬಗೆಯ ದಿವ್ಯಾಂಬರಗಳನು ವಿವಿಧ ಮಣಿಭೂಷಣ ಸುವಸ್ತುಗಳನು ತೆಗೆದು ಕಟ್ಟಿಸಿ ರಥದೊಳು ಇಂಬಿಟ್ಟು**=ಆಶ್ರಮವಾಸಿಗಳಾದ ರಿಸಿಗಳಿಗೆ ಮತ್ತು ರಿಸಿಪತ್ನಿಯರಿಗೆ ಕೊಡಲೆಂದು ಅಗರು ಚಂದನ ಕುಂಕುಮ ಅನುಲೇಪನದ ವಸ್ತುಗಳನ್ನು, ಬೆಲೆಬಾಳುವ ಮನೋಹರವಾದ ಬಟ್ಟೆಗಳನ್ನು, ಮುತ್ತು ರತ್ನ ವಜ್ರದ ಹರಳುಗಳಿಂದ ಕೂಡಿದ ಒಡವೆಗಳೆಲ್ಲವನ್ನೂ ತೆಗೆದು ಕಟ್ಟಿಸಿಕೊಂಡು ರಥದಲ್ಲಿ ಜೋಡಿಸಿಟ್ಟುಕೊಂಡು;

ಅಂಘ್ರಿ=ಪಾದ; ಚೆಂಬೊನ್ನು=ಕೆಂಪನೆಯ ಲೋಹ/ಚಿನ್ನ; ಪಾವುಗೆ=ಪಾದಕೆ/ಮೆಟ್ಟು; **ರಾಮನ ಅಂಘ್ರಿಗಳ ಚೆಂಬೊನ್ನ ಪಾವುಗೆಗಳನು ತರಿಸಿಕೊಂಡು**=ರಾಮನು ತೊಡುವ ಚಿನ್ನದ ಪಾದುಕೆಗಳನ್ನು ತರಿಸಿಕೊಂಡು;

ಒಗುಮಿಗೆ=ಹೆಚ್ಚಳ/ಅತಿಯಾದ; ಅಂಗನೆ=ಹೆಣ್ಣು; ಮಣಿ=ಮುತ್ತು, ರತ್ನ, ವಜ್ರದ ಹರಳುಗಳು; ವರೂಥ=ರಥ/ತೇರು; ಅಡರು=ಏರು/ಹತ್ತು; **ಒಗುಮಿಗೆಯ ಹರುಷದೊಳು ಅಂಗನೆ ಮಣಿವರೂಥಮನು ಅಡರ್ದಳು**=ಸೀತಾದೇವಿಯು ಅತಿಯಾದ ಆನಂದದಿಂದ ಕೂಡಿದವಳಾಗಿ ಮಣಿಗಳಿಂದ

ಅಲಂಕಾರಗೊಂಡಿರುವ ರಥವನ್ನು ಏರಿ ಕುಳಿತಳು; ತರಿಸಲ್=ನಿಶ್ಚಯಿಸು; ತರಿಸಂದು=ನಿಶ್ಚಯಿಸಿಕೊಂಡು; ಕಜ್ಜ=ಕೆಲಸ; ಉಗ್ರ=ಕ್ರೂರ/ಕರುಣೆಯಿಲ್ಲದ; **ಅಗ್ರಜನು ತರಿಸಂದು ತನ್ನೊಳು ಆಡಿದ ಕಜ್ಜದ ಉಗ್ರಮನು**=ಅತ್ತ ಸೀತಾದೇವಿಯನ್ನು ತೊರೆಯುವ ನಿಶ್ಚಯವನ್ನು ಮಾಡಿಕೊಂಡು ಅಣ್ಣನಾದ ರಾಮನು ತನ್ನ ಜತೆಯಲ್ಲಿ ಹೇಳಿರುವ ಕೆಲಸದ ಕ್ರೂರತೆಯನ್ನು; ಬನ=ಕಾಡು/ಅರಣ್ಯ; ಪೋದಪೆನು=ಹೋಗುತ್ತಿದ್ದೇನೆ; ಸಮಗ್ರ=ಪರಿಪೂರ್ಣವಾದ;

ಬನಕೆ ಪೋದಪೆನು ಎಂಬ ದೇವಿಯ ಸಮಗ್ರ ಸಂತೋಷಮನ್ ಕಂಡು=ಇತ್ತ ತಾನು ಕಾಡಿನಲ್ಲಿರುವ ರಿಸಿಪತ್ನಿಯರ ಬಳಿಗೆ ಹೋಗುತ್ತಿದ್ದೇನೆ ಎಂದು ಆನಂದದಿಂದ ಓಲಾಡುತ್ತಿರುವ ಸೀತಾದೇವಿಯನ್ನು ಕಂಡು; **ಸೌಮಿತ್ರಿ ಮನದೊಳ್ ಮರುಗಿ ಕಂಬನಿಯನು ನಿಗ್ರಹಿಸಿಕೊಂಡು**=ಲಕ್ಷ್ಮಣನು ಮನದಲ್ಲಿ ಮರುಗುತ್ತ, ಒತ್ತಿಬರುತ್ತಿರುವ ಕಣ್ಣೀರನ್ನು ತಡೆದುಕೊಂಡು; **ಸಾರಥಿಗೆ ಸೂಚನೆಗೈದು**=ಸಾರಥಿಗೆ ರಥವನ್ನು ಮುನ್ನಡೆಸಲು ಸೂಚನೆಯನ್ನು ನೀಡಿ; ವ್ಯಗ್ರ=ಕಳವಳ/ಉದ್ವೇಗ; ವ್ಯಗ್ರದಿಂದೆ ಆಗ=ಮನದಲ್ಲಿ ತೀವ್ರತರವಾದ ಸಂಕಟವನ್ನು ಪಡುತ್ತಾ;

ದೇವಗ್ರಾಮ=ದೇವನೂರು; ನಿಲಯ=ಮನೆ; ಉಂಗುಟ=ಕಾಲಿನ ಹೆಬ್ಬೆರಳು; ಒಗೆ=ಹುಟ್ಟು; ಅಮಲ=ಪರಿಶುದ್ಧಳಾದ; ಜಾಹ್ನವಿ=ಗಂಗಾನದಿ; ತಡಿ=ದಂಡೆ/ತೀರ; ಐದಿಸು=ಬರು/ಸಮೀಪಿಸು; **ಆ ದೇವಗ್ರಾಮನಿಲಯ ಲಕ್ಷ್ಮೀಶನ ಉಂಗುಟದೊಳ್ ಒಗೆದ ಅಮಲಜಾಹ್ನವಿಯ ತಡಿಗೆ ರಥವನು ಐದಿಸಿದನು**=ದೇವನೂರಿನಲ್ಲಿ ನೆಲೆಸಿರುವ ಲಕ್ಷ್ಮೀಶ ದೇವರ ಹೆಬ್ಬೆರಳಿನಿಂದ ಹುಟ್ಟಿ ಹರಿಯುತ್ತಿರುವ ಗಂಗಾನದಿಯ ತೀರಕ್ಕೆ ರಥವನ್ನು ಮುನ್ನಡೆಸಲು ಸಾರಥಿಗೆ ಹೇಳಿದನು;

❖

ನೋಟ ಐದು

ಅರಸ ಕೇಳು=ಜನಮೇಜಯ ರಾಜನಿಗೆ ರಾಮಾಯಣದ ಕತೆಯನ್ನು ಜೈಮಿನಿ ಮುನಿಯು ಹೇಳುತ್ತಿದ್ದಾನೆ; ರಥ+ಅಗ್ರದೊಳು; ಅಗ್ರ=ಮೇಲುಗಡೆ; ವೈದೇಹಿ=ಸೀತೆ; ಪತಾಕೆ=ಬಾವುಟ; **ಸೌಮಿತ್ರಿ ವೈದೇಹಿಯನೆ ಕೊಂಡು ತೆರಳುವ ರಥಾಗ್ರದೊಳು ಚಲಿಸುವ ಪತಾಕೆ**=ಲಕ್ಷ್ಮಣನು ಸೀತೆಯನ್ನು ಕರೆದುಕೊಂಡು ಹೋಗುತ್ತಿರುವ ರಥದ ಮೇಲುಗಡೆ ಹಾರಾಡುತ್ತಿರುವ ಬಾವುಟ; ಅಹಹ=ಅಯ್ಯಯ್ಯೊ ಎಂಬ ಉದ್ಗಾರ; ಅಂಗನೆ=ಹೆಣ್ಣು; ಉಳಿ=ತ್ಯಜಿಸು; ಅಡಿಗಡಿಗೆ=ಪದೇಪದೇ/ಮತ್ತೆ ಮತ್ತೆ; ಕೊಡಹು+ಅಂತೆ; ಕೊಡಹು= ಅಲ್ಲಾಡಿಸು/ಒದರು; ಇರಲ್ಕೆ=ಇರಲು; **"ಅಹಹ...ರಘುವರನು ಅಂಗನೆಯನು ಉಳಿದನು ಎಂದು ಅಡಿಗಡಿಗೆ ತಲೆ ಕೊಡಹುವಂತೆ" ಇರಲ್ಕೆ**=ಅಯ್ಯಯ್ಯೋ... ರಾಮನು ಸೀತೆಯನ್ನು ತೊರೆದನು ಎಂಬ ಸಂಕಟದಿಂದ ಮತ್ತೆ ಮತ್ತೆ ತಲೆಯನ್ನು ಅಲ್ಲಾಡಿಸುತ್ತಿರುವಂತೆ ಪಟಪಟನೆ ಬಡಿಯುತ್ತಿರಲು; ನೆರವಿ=ಗುಂಪು/ಸಮೂಹ; ಪರಮ=ಅತಿ ಹೆಚ್ಚಿನ; ದಾರುಣ=ಕ್ರೂರತನ/ಉಗ್ರ; ಗುಜುಗುಜಿಸು=ತಂತಮ್ಮಲ್ಲೇ ಮಾತನಾಡಿ ಕೊಳ್ಳುತ್ತ; ಕಾತರಿಸುತ+ಇರೆ; ಕಾತರಿಸು=ಕಳವಳಗೊಳ್ಳು; ಇರೆ=ಇರಲು;

ಅಯೋಧ್ಯಾಪುರದ ನೆರವಿಯ ಜನಮ್ 'ಪರಮ ದಾರುಣಮ್ ಆಯ್ತು ಇದು' ಎಂದು ಗುಜುಗುಜಿಸಿ ಮನದೆ ಕರಗಿ ಕಾತರಿಸುತಿರೆ= ಅಯೋಧ್ಯಾಪುರದಲ್ಲಿ ಅಲ್ಲಲ್ಲಿ ಗುಂಪುಗೂಡಿದ್ದ ಜನರು "ಇದು ತುಂಬಾ ಕ್ರೂರತನದ ಕೆಲಸವಾಯಿತು" ಎಂದು ತಮ್ಮತಮ್ಮಲ್ಲಿಯೇ ಮಾತನಾಡಿ

ಕೊಳ್ಳುತ್ತ, ಸೀತೆಯ ಬಗ್ಗೆ ಅಪಾರವಾದ ಕರುಣೆಯಿಂದ ಕೂಡಿ, ಸೀತಾದೇವಿಗೆ ಮುಂದೆ ಏನಾಗುವುದೋ ಎಂಬ ಆತಂಕದಿಂದ ಕಳವಳಪಡುತ್ತಿರಲು; ಕಾಲ್+ಬಟ್ಟೆ+ಕೊಂಡು; ಬಟ್ಟೆ=ದಾರಿ/ಮಾರ್ಗ; ಕಾಲ್=ನದಿಯ ನೀರನ್ನು ಇತರ ಕಡೆಗೆ ಹಾಯಿಸಲು ಮಾಡಿರುವ ನಾಲೆ; ಕಾಲ್ಬಟ್ಟೆ=ನದಿಯ ಪಕ್ಕದಲ್ಲಿರುವ ದಾರಿ; ಅನಿಲ=ಗಾಳಿ/ವಾಯು; ಅನಿಲವೇಗ=ತುಂಬಾ ವೇಗವಾಗಿ; ಪರಿ=ಚಲಿಸು/ಓಡಿಸು/ನಡೆಸು; **ಕಾಲ್ಬಟ್ಟೆಗೊಂಡು ಅನಿಲವೇಗದಿಂದೆ ಆ ರಥವನು ಪರಿಸಿದನು**=ಗಂಗಾ ನದಿಯ ಮಗ್ಗುಲಲ್ಲಿ ಇದ್ದ ದಾರಿಯಲ್ಲಿ ವಾಯುವೇಗದಿಂದ ರಥವನ್ನು ಮುನ್ನಡೆಸಿದನು : ಧುರ+ಒಳು; ಧುರ=ಕಾಳೆಗ; ಒಳು=ಅಲ್ಲಿ; ಆಂತರನು=ಎದುರಾದವರನ್ನು/ಹಗೆಗಳನ್ನು; ಇರಿ=ತಿವಿ/ಚುಚ್ಚು; ಮೆರೆ=ತೋರಿಸು; ತರಳೆ=ತರುಣಿ/ಯುವತಿ; ಅಡರ್ವಂತೆ+ಆಯ್ತು; ಅಡರು=ಮೇಲಕ್ಕೆ ಹತ್ತು;

ಧುರದೊಳು ಆಂತರನು ಇರಿದು ಮೆರೆಯಲು ಏರುವ ರಥಮ್ ತರಳೆಯನು ಕಾನನಕೆ ಕಳುಹಲು ಅಡರ್ವಂತಾಯ್ತು=ರಣರಂಗದಲ್ಲಿ ಎದುರಾಗುವ ಹಗೆಗಳನ್ನು ತಿವಿದು ಕೊಂದು ಪರಾಕ್ರಮವನ್ನು ತೋರಿಸಲೆಂದು ಏರಬೇಕಾಗಿದ್ದ ರಥವನ್ನು, ಈಗ ಸೀತಾದೇವಿಯನ್ನು ಕಾಡಿಗೆ ಕಳುಹಿಸಲು ಏರುವಂತಾಯ್ತು;

ಧರೆ+ಒಳು; ಧರೆ=ಭೂಮಂಡಲ; ಆರ್ತರು=ಸಂಕಟಕ್ಕೆ ಗುರಿಯಾದವರು; ಐದೆ=ಚೆನ್ನಾಗಿ; ರಕ್ಷಿಸು=ಕಾಪಾಡು; ಕೋಮಲೆ=ಮೃದು ಸ್ವಭಾವದ ಹೆಣ್ಣು/ ಒಳ್ಳೆಯತನವುಳ್ಳ ಹೆಂಗಸು; **ಧರೆಯೊಳು ಆರ್ತರನು ಐದೆ ರಕ್ಷಿಸುವ ಬುದ್ಧಿ ಕೋಮಲೆಯ ಕೊಲೆಗೆಲಸಕೆ ಆಯ್ತು**=ಭೂಮಂಡಲದಲ್ಲಿ ಸಂಕಟಕ್ಕೆ ಒಳಗಾದವರನ್ನು ಚೆನ್ನಾಗಿ ಕಾಪಾಡಬೇಕಾಗಿದ್ದ ನನ್ನ ಶಕ್ತಿ ಮತ್ತು ಯುಕ್ತಿಯು ಇದೀಗ ಕೋಮಲೆಯಾದ ಸೀತಾದೇವಿಯನ್ನು ಕೊಲ್ಲುವುದಕ್ಕೆ ಬಳಕೆಯಾಗುತ್ತದೆ; ಕರುಣಮ್+ಇಲ್ಲದೆ; ಹೊರೆ=ಕಾಪಾಡು; ಹರಣಮ್+ ಅನ್; ಹರಣ=ಜೀವ/ಪ್ರಾಣ; **ಕರುಣಮಿಲ್ಲದೆ ಹೊರೆವ ಹರಣಮನ್ ಸುಡಲಿ**= ಕರುಣೆಯಿಲ್ಲದೆ ಇಂತಹ ಕ್ರೂರಕೆಲಸದಲ್ಲಿ ತೊಡಗಿರುವ ಈ ನನ್ನ ಜನ್ಮಕ್ಕೆ ಬೆಂಕಿಹಾಕಲಿ; ಕೃತ್ಯ=ಕೆಲಸ/ಕಾರ್ಯ; ನಿಷ್ಠುರ+ಒಳು; ನಿಷ್ಠುರ= ಕ್ರೂರವಾದುದು/ದಯೆಯಿಲ್ಲದ್ದು; ಎಸಗು=ಮಾಡು; **ಎಂತು ಈ ಕೃತ್ಯಮ್ ನಿಷ್ಠುರದೊಳು ಎಸಗುವೆನೊ**=ಹೇಗೆ ತಾನೆ ಇಂತಹ ಕೆಲಸವನ್ನು ತುಸುವಾದರೂ ಕರುಣೆಯಿಲ್ಲದೆ ಮಾಡವೆನೊ; ಬೆಸಸು=ಅಪ್ಪಣೆ ಮಾಡು;

ರಾಘವೇಶ್ವರನು ತನಗೆ ಎಂತು ಇದಕ್ಕೆ ಬೆಸಸಿದನೊ ಎನುತೆ ಸೌಮಿತ್ರಿ ಮರುಗುತೆ ನಡೆದನು=ಅಣ್ಣನಾದ ರಾಮನು ತನಗೆ ಏತಕ್ಕಾದರೂ ಇಂತಹ ಕೆಲಸವನ್ನು ಮಾಡಲು ಹೇಳಿದನೊ ಎಂದು ಲಕ್ಷ್ಮಣನು ಮನದೊಳಗೆ ಸಂಕಟಪಡುತ್ತ ರಥವನ್ನು ಮುನ್ನಡೆಸುತ್ತಿದ್ದನು; ಬಳ್ಳು=ನರಿ; ಒರಲು=ಅರಚು/ಕೂಗು; **ಬಳ್ಳು ಒರಲ್ದುದು**=ನರಿಗಳು ಅರಚತೊಡಗಿದವು; **ಕುಳ್ಳಿರ್ದ ಮೃಗಮ್ ಎದ್ದು ಮುಂದೆ ಮಾರ್ಗವನು ದಾಂಟಿದುದು**=ಮರಗಿಡ ಮರೆಯಲ್ಲಿ ಕುಳಿತಿದ್ದ ಪ್ರಾಣಿಗಳು ದಾರಿಗೆ ಅಡ್ಡಲಾಗಿ ಹಾಯ್ದುಹೋದವು; ಅದಿರು=ಅಲ್ಲಾಡು/ಬಡಿ/ಹೊಡೆ; **ಬಲದ ಕಣ್ಣು ಅದಿರೆ**=ಬಲದ ಕಣ್ಣಿನ ರೆಪ್ಪೆಗಳು ಬಡಿದುಕೊಳ್ಳಲು; ಅಳ್ಳೆರ್ದೆ+ಒಳು; ಅಳ್ಳೆರ್ದೆ=ನಡುಗುವ ಎದೆ; **ಅಳ್ಳೆರ್ದೆಯೊಳು ಅವನಿಸುತೆ**=ಸೀತೆಯು ಹೆದರಿಕೆಯಿಂದ ತತ್ತರಿಸಿ ನಡುಗುತ್ತ; ಪಥ=ದಾರಿ/ಮಾರ್ಗ; ನಿಮಿತ್ತ=ಶಕುನ; ದುರ್ನಿಮಿತ್ತಂಗಳನು=ಕೆಟ್ಟ ಶಕುನಗಳನ್ನು; ಡಿಳ್ಳ=ದಿಗಿಲು/ಹೆದರಿಕೆ; ಆದಪುದು=ಆಗುತ್ತಿರುವುದು;

ನೋಡು ಲಕ್ಷ್ಮಣ...ಪಥದೊಳು ದುರ್ನಿಮಿತ್ತಂಗಳನು ಕಂಡು ಈಗಳ್ ಇದಕೆ ಎನ್ನ ಮನಮ್ ಡಿಳ್ಳಮ್ ಆದಪುದು=ಅದೊ ನೋಡು ಲಕ್ಷ್ಮಣ, ದಾರಿಯಲ್ಲಿ ಉಂಟಾಗುತ್ತಿರುವ ಕೆಟ್ಟಶಕುನಗಳನ್ನು ಕಂಡು, ಇದರಿಂದ ಏನಾಗುವುದೋ ಎಂಬ ಹೆದರಿಕೆಯು ನನ್ನನ್ನು ಕಾಡುತ್ತಿದೆ; ಉಳ್ಳ=ಇರುವ; **ರಾಮನ ಆಯುಷ್ಯಕೆ ಐಶ್ವರ್ಯಕೆ ಉಳ್ಳ ಭುಜಬಲಕೆ ಮುಂದೆ ಒಳ್ಳಿತಾಗಲಿ**=ರಾಮನ ಆಯುಸ್ಸು, ಸಿರಿವಂತಿಕೆ ಮತ್ತು ಅವನಲ್ಲಿರುವ ತೋಳ್ಬಲಕ್ಕೆ ಸದಾಕಾಲ ಒಳಿತಾಗಲಿ; ಅಸುರ=ರಕ್ಕಸ; ಸಲಹು=ಕಾಪಾಡು; **ಅಸುರರನು ಗೆಲ್ದ ರಾಘವನು ನಮ್ಮನು ಸಲಹಲಿ ಎಂದಳು**=ರಕ್ಕಸರನ್ನು ಸದೆಬಡಿದಿರುವ ರಾಮನು ನಮ್ಮನ್ನು ಕಾಪಾಡಲಿ; ಅನ್ನೆಗಮ್=ಅಷ್ಟರಲ್ಲಿ; **ಅನ್ನೆಗಮ್ ಜಾನಕಿಯ ಕಣ್ಗೆ ಮುಂದೆ ತೋರಿತು**=ಹೀಗೆ ಸೀತೆಯು ತನ್ನ ಮನದ ಆತಂಕವನ್ನು ಲಕ್ಷ್ಮಣನೊಡನೆ ಹೇಳಿಕೊಳ್ಳುತ್ತಿರುವಾಗ ಅವಳ ಕಣ್ಣ ಮುಂದೆ ಗಂಗಾನದಿಯು ಕಂಡುಬಂದಿತು;

ಸನ್ನುತ=ಚೆನ್ನಾಗಿ ಹೊಗಳಿದ/ಗುಣಗಾನ ಮಾಡಿದ; ರಘೂದ್ವಹ=ರಾಮ; ಕೀರ್ತಿ+ಎನೆ; ಎನೆ=ಎನ್ನುವಂತೆ; **ಸನ್ನುತ ರಘೂದ್ವಹನ ಕೀರ್ತಿಯೆನೆ**=ಹೊಗಳಿಕೆಗೆ ಪಾತ್ರನಾದ ರಾಮನ ಕೀರ್ತಿಯೆನ್ನುವಂತೆ; ಮೂರು+ಬಟ್ಟೆ; ಬಟ್ಟೆ=ದಾರಿ; ಮೂವಟ್ಟೆ=ಮೂರು ದಾರಿ; **ಮೂವಟ್ಟೆಯನು ನಡೆದು**=ದೇವಲೋಕ... ಭೂಲೋಕ... ಪಾತಾಳ ಲೋಕವೆಂಬ ಮೂರು ಲೋಕಗಳಲ್ಲಿಯೂ ಹರಿದು; ಮುಕ್ಕಣ್ಣ=ಮೂರು ಕಣ್ಣುಳ್ಳ ಶಿವ; ಸಾರ್ದು=ಸಮೀಪಿಸಿ; **ಮುಕ್ಕಣ್ಣನನು**

ಸಾರ್ದು=ಮೂರು ಕಣ್ಣುಗಳುಳ್ಳ ಶಿವನ ಜಟೆಯನ್ನು ಸೇರಿ; ಮೂಜಗ=ಮೂರು ಲೋಕಗಳು; ಮುರಿದು=ತುಂಡರಿಸಿ/ನಾಶಪಡಿಸಿ; ಮುಕ್ಕಿ=ಕಬಳಿಸಿ; ಮುನ್ನೀರು=ಕಡಲು/ಸಮುದ್ರ; **ಮೂಜಗದ ಪಾಪಮನು ಮುರಿದು ಮುಕ್ಕಿ ಮುನ್ನೀರು ಮುಂತಾಗಿ**=ಮೂರು ಲೋಕಗಳಲ್ಲಿಯೂ ಇದ್ದ ಪಾಪವೆಲ್ಲವನ್ನೂ ಸಂಪೂರ್ಣವಾಗಿ ನಾಶಪಡಿಸಿ ಕಡಲಿನ ಕಡೆಗೆ ಹರಿಯುತ್ತ;

ಮೂದೇವರ+ಒಳಗಾದ; ಮುನ್ನುಳ್ಳ=ಮೊದಲಿನಿಂದಲೂ ಇರುವ; ಮೂದೇವರು=ಬ್ರಹ್ಮ... ವಿಷ್ಣು... ಶಿವ; ವಿಬುಧ=ದೇವತೆ; **ಮೂದೇವರೊಳಗಾದ ಮುನ್ನುಳ್ಳ ಮೂವತ್ತು ಮೂರ್ಕೋಟಿ ವಿಬುಧರನು**=ಬ್ರಹ್ಮ... ವಿಷ್ಣು... ಶಿವನನ್ನು ಒಳಗೊಂಡಂತೆ ಮೊದಲಿನಿಂದಲೂ ಇರುವ ಮೂವತ್ತು ಮೂರು ಕೋಟಿ ದೇವತೆಗಳನ್ನು; ಅಣಕಿಪ=ಅಪಹಾಸ್ಯ ಮಾಡುವ/ಮೂದಲಿಸುವ; ಒದವು=ಉಂಟಾಗು; ಪರಿವ=ಹರಿಯುತ್ತಿರುವ; ದಿವಿಜ=ದೇವತೆ/ಸಗ್ಗದಲ್ಲಿ ಹುಟ್ಟಿದ; ಬೆಳ್ವೊನಲು=ಬೆಳ್ಳನೆಯ ನೊರೆತೊರೆಗಳಿಂದ ಕೂಡಿದ ನದಿ; **ತನ್ನೊಳು ಮುಳುಗಿದರು ಅಣಕಿಪ ಪೆಂಪು ಒದವಿ ಪರಿವ ದಿವಿಜ ನದಿಯ ಬೆಳ್ವೊನಲು**=ತನ್ನಲ್ಲಿ ಮಿಂದೆದ್ದ ಭಕ್ತಜನರು ದೇವತೆಗಳನ್ನು ಅಣಕಿಸುತ್ತಾರೆ. ಅಂದರೆ ದೇವತೆಗಳಿಗಿಂತಲೂ ಹೆಚ್ಚಿನ ಪುಣ್ಯವನ್ನು ಗಂಗೆಯ ಸ್ನಾನದಿಂದ ಪಡೆಯುತ್ತಾರೆ ಎಂಬ ಕೀರ್ತಿಯನ್ನು ಪಡೆದು ಹರಿಯುತ್ತಿರುವ ಬೆಳ್ಳನೆಯ ನೊರೆತೆರೆಯ ಗಂಗಾ ನದಿ;

ಕಲ್ಲೋಲ=ದೊಡ್ಡ ದೊಡ್ಡ ಅಲೆಗಳು; ಮಾಲೆ=ಸಾಲು/ಪಂಕ್ತಿ; ಲೀಲೆ=ಆಟ/ಕ್ರೀಡೆ/ಬೆಡಗು/ಚೆಲುವು; **ತೆರತೆರದ ಕಲ್ಲೋಲ ಮಾಲೆಗಳ ಲೀಲೆಗಳ**=ಗಂಗಾ ನದಿಯಲ್ಲಿ ಬಹುಬಗೆಯಲ್ಲಿ ಹೊಯ್ದಾಡುತ್ತಿರುವ ದೊಡ್ಡ ದೊಡ್ಡ ಅಲೆಗಳ ಉರುಳುವಿಕೆಯ ಚೆಲುವು; ಬೆರೆ=ಕೂಡು/ಸೇರು; ರಾಜಹಂಸ+ಆಳಿಗಳ; ಕೇಳಿ=ಆಟ; **ಬೆರೆಬೆರೆವ ರಾಜಹಂಸಾಳಿಗಳ ಕೇಳಿಗಳ**=ಜೊತೆಗೂಡಿರುವ ರಾಜಹಂಸಗಳ ಆಟ; ಪರಿಪರಿ=ಬಹುಬಗೆಯ; ನೀರ್+ಪನಿ; ನೀರ್ವನಿ=ನೀರಿನ ಹನಿ; ಆಕರ=ಮೂಲ/ಉತ್ಪತ್ತಿಯ ಜಾಗ; ಶೀಕರ=ತುಂತುರು; **ಪರಿಪರಿಯ ನೀರ್ವನಿಗಳ ಆಕರದ ಶೀಕರದ ನೊರೆಯ**=ನೀರಿನ ಹನಿಗಳಿಂದ ಕೂಡಿದ ಬೆಳ್ಳನೆಯ ನೊರೆಯ ಬಹುಬಗೆಯ ತುಂತುರು; ಬೊಬ್ಬುಳಿ=ನೀರಿನ ಗುಳ್ಳೆ; ಸುಳಿ=ಮಡು/ನೀರು ಗುಂಡಾಗಿ ತಿರುಗುತ್ತಿರುವ ಜಾಗ; **ಬೊಬ್ಬುಳಿಯ ಸುಳಿಯ**=ನೀರಿನ ಗುಳ್ಳೆಗಳಿಂದ ತುಂಬಿದ ಮಡುವಿನ; ಮೊರೆ=ಜೋರಾಗಿ ದನಿಮಾಡುವುದು; ಘೂರ್ಮಿಸು=ಅಬ್ಬರಿಸು/ಗರ್ಜಿಸು; ಪರಿವು=ಪ್ರವಾಹ/

ನೀರಿನ ಓಟ; ಮುರಿ=ತಿರುಗಣೆ/ಹೊರಳುವಿಕೆ;

ಮೊರೆಮೊರೆದು ಘೂರ್ಮಿಸುವ ಪರಿವುಗಳ ಮುರಿಗಳ=ಉಕ್ಕೆದ್ದು ಮೊರೆಯುತ್ತ ಹರಿಯುತ್ತಿರುವ ಪ್ರವಾಹದ ಹೊರಳುವಿಕೆಯ; ಸುಳಿ=ಕಂಡುಬರುವ; ಜಂತು=ಜೀವಿ; ಗೊಂತು=ಮಡು; **ತಿರುತಿರುಗಿ ಸುಳಿವ ಜಲಜಂತುಗಳ ಗೊಂತುಗಳ**=ಮತ್ತೆಮತ್ತೆ ನೀರಿನಿಂದ ಮೇಲಕ್ಕೆ ಚಿಮ್ಮಿ ಕಂಡು ಬರುತ್ತಿರುವ ಜಲಜೀವಿಗಳಾದ ಮೀನು, ಮೊಸಳೆಗಳಿಂದ ತುಂಬಿದ ಮಡುವುಗಳ; ನೆರೆ=ಗುಂಪುಗೂಡಿ; ಸೇವಿಸು=ಪೂಜಿಸು; ಭಾವಿಸು=ಜಪಮಾಡು /ದೇವರ ಸ್ಮರಣೆ ಮಾಡು; ಅವನಿಜೆ=ಸೀತೆ; **ನೆರೆನೆರೆದು ಮುನಿಜನಮ್ ಸೇವಿಸುವ ಭಾವಿಸುವ ಗಂಗೆಗೆ ಅವನಿಜೆ ಬಂದಳು**=ಗುಂಪುಗೂಡಿ ಮುನಿಜನರು ಜಪಮಾಡುತ್ತ ಪೂಜಿಸುವ ಗಂಗಾನದಿ ಬಳಿಗೆ ಸೀತೆಯು ಬಂದಳು; ಜಾಹ್ನವಿ=ಗಂಗಾ ನದಿ; ತಡಿ=ದಡ/ತೀರ; ಬನದ+ಎಡೆಯೊಳು; ಬನ=ಕಾಡು; ಎಡೆ=ಜಾಗ; **ಆ ಜಾಹ್ನವಿಯ ತಡಿಯ ಬನದೆಡೆಯೊಳು**=ಆ ಗಂಗಾ ನದಿಯ ದಡದಲ್ಲಿದ್ದ ಕಾಡಿನ ಜಾಗದಲ್ಲಿ;

ಎಳ=ಎಳೆಯ/ಸಸಿ; ಕವುಂಗು=ಅಡಕೆ; ಪನಸ=ಹಲಸು; ಜಂಬು=ನೇರಿಳೆ; ನಾರಂಗ=ಹೇರಳೆ; ಜಂಬೀರ=ನಿಂಬೆ; ಮಾತುಳಂಗ=ಮಾದಲವೆಂಬ ಹಣ್ಣು; ತಿಂತ್ರಿಣಿ=ಹುಣಿಸೆ; ಚೂತ=ಮಾವು; ಬಿಲ್ವ=ಬಿಲ್ವಮರದ ಎಲೆಯನ್ನು ಶಿವನ ಪೂಜೆಗೆ ಬಳಸುತ್ತಾರೆ; ಕಪಿತ್ಥ=ಬೇಲದ ಹಣ್ಣು; ತರು=ಮರ; ತೊಂಗು= ತೂಗಾಡು/ತೊನೆದಾಡು; ಫಲ+ಆವಳಿ; ಫಲ=ಹಣ್ಣು; ಆವಳಿ=ಗುಂಪು/ರಾಶಿ; ಆವಗಮ್=ಯಾವಾಗಲೂ; ಪಿಂಗು=ಕಡಿಮೆಯಾಗು/ಕಾಣದಂತಾಗು; **ತೆಂಗು ಎಳ ಕವುಂಗು ಪನಸಮ್ ದ್ರಾಕ್ಷೆ ಜಂಬು ನಾರಂಗ ಜಂಬೀರ ಖರ್ಜೂರ ಕಿತ್ತಳೆ ಮಾತುಳಂಗ ತಿಂತ್ರಿಣಿ ಚೂತ ನೆಲ್ಲಿ ಬಿಲ್ವ ಕಪಿತ್ಥಮ್ ಎಂಬ ನಾನಾ ತರುಗಳು ತೊಂಗುವ ಫಲಾವಳಿಯ ಭಾರಂಗಳು ಆವಗಮ್ ಪಿಂಗವು**=ತೆಂಗು, ಅಡಕೆಯ ಸಸಿಗಳು, ಹಲಸು, ದ್ರಾಕ್ಷಿ, ನೇರಳೆ, ಹೇರಳೆ, ನಿಂಬೆ, ಖರ್ಜೂರ, ಕಿತ್ತಳೆ, ಮಾದಳ, ಹುಣಿಸೆ, ಮಾವು, ನೆಲ್ಲಿ, ಬಿಲ್ವ, ಬೇಲ ಮುಂತಾದ ಮರಗಳಲ್ಲಿ ಗೊನೆತುಂಬಿ ತೂಗಾಡುವ ಹಣ್ಣುಗಳು ಯಾವಾಗಲು ಕಡಿಮೆಯಾಗುವುದಿಲ್ಲ. ಅಂದರೆ ಒಂದಲ್ಲ ಒಂದು ಬಗೆಯ ಹಣ್ಣುಗಳು ಕಾಡಿನಲ್ಲಿ ಇದ್ದೇ ಇರುತ್ತವೆ; ಇಳೆ=ಭೂಮಿ; ಇಳಿಪಬೇಕು+ಎಂದು; ಇಳಿಪು=ತಂದಿರಿಸು/ಕೆಳಕ್ಕೆ ತರು; ಬಾಗಿ=ಬಗ್ಗಿದ; ಅಂಗ=ರೀತಿ; ಎನೆ=ಎನ್ನುವಂತೆ; ಇಕ್ಕೆಲ=ಎರಡು ಕಡೆಗಳಲ್ಲಿ; ಎಸೆ=ಚೆಲುವಾಗು/ಅಂದವಾಗು;

ಇವನು ಇಳೆಗೆ ಇಳಿಪಬೇಕೆಂದು ಬಾಗಿದ ಒಂದು ಅಂಗಮ್ ಎನೆ ಇಕ್ಕೆಲದೊಳು ಕಣ್ಗೆ ಎಸೆದುವು=ಇಂತಹ ಹಣ್ಣುಗಳೆಲ್ಲವನ್ನು ಭೂಮಿಯಲ್ಲಿ ನೆಲೆಗೊಳಿಸಬೇಕೆಂದು ಮಾಡಿರುವ ಒಂದು ಅಂಗವೇನೋ ಎನ್ನುವಂತೆ ಎರಡು ಕಡೆಗಳಲ್ಲೂ ಹಣ್ಣಿನ ಮರಗಿಡಗಳು ಕಣ್ಣಿಗೆ ಚೆಲುವಾಗಿ ಕಂಡುಬಂದವು; ಮಂದಾಕಿನಿ=ಗಂಗಾ ನದಿಗೆ ಸೇರುವ ಒಂದು ಉಪನದಿಯ ಹೆಸರು; ಪೊಡಮಡು=ನಮಸ್ಕರಿಸು; ನಿರ್ಮಲ=ಶುಚಿಯಾದ/ಪರಿಶುದ್ಧವಾದ; ತೀರ್ಥ=ನೀರು; **ಇಳಿದು ರಥದಿಂದೆ ಮಂದಾಕಿನಿಗೆ ಪೊಡಮಟ್ಟು ನಿರ್ಮಲ ತೀರ್ಥದೊಳು ಮಿಂದು**=ಸೀತೆಯು ರಥದಿಂದ ಇಳಿದು, ಗಂಗಾನದಿಗೆ ನಮಸ್ಕರಿಸಿ, ಪರಿಶುದ್ಧವಾದ ನೀರಿನಲ್ಲಿ ಸ್ನಾನ ಮಾಡಿ; ನಾವಿಕ=ಅಂಬಿಗ/ದೋಣಿಯನ್ನು ನಡೆಸುವವನು; ನಾವ=ನಾವೆ/ದೋಣಿ; ಭೂಜಾತೆ=ಸೀತೆ; ಕಳೆದು=ದಾಟಿ;

ಬಳಿಕ ನಾವಿಕರೊಡನೆ ನಾವದೊಳು ಭೂಜಾತೆ ಸಹಿತ ಗಂಗೆಯನು ಕಳೆದು=ಅನಂತರ ಅಂಬಿಗರೊಡನೆ ದೋಣಿಯಲ್ಲಿ ಕುಳಿತು ಸೀತೆಯೊಡನೆ ಗಂಗಾನದಿಯನ್ನು ದಾಟಿ; ಮತ್ತೆ=ಪುನಹ; ಬಿಸುಸುಯ್ದು= ನಿಟ್ಟುಸಿರನ್ನು ಬಿಡುತ್ತ/ಸಂಕಟದಿಂದ ಉಸಿರನ್ನು ಬಿಡುತ್ತ; **ಸೌಮಿತ್ರಿ ಮತ್ತೆ ಒಳಗೊಳಗೆ ಮರುಗಿ ಬಿಸುಸುಯ್ದು ಚಿಂತಿಸುತೆ**=ಲಕ್ಷ್ಮಣನು ಮತ್ತೆ ತನ್ನ ಮನದೊಳಗೆ ಸಂಕಟದ ಬೇಗೆಯಲ್ಲಿ ಬೇಯುತ್ತ, ನಿಟ್ಟುಸಿರನ್ನು ಬಿಡುತ್ತ ಚಿಂತಿಸುತ್ತ; ಉಗ್ರ=ಭಯಂಕರವಾದ/ಕ್ರೂರವಾದ; ಗಣ=ಸಮೂಹ/ಗುಂಪು; ಘೂರ್ಮಿಸು=ಅಬ್ಬರಿಸು; ಅಡಿ=ಹೆಜ್ಜೆ; ಇಡುವೊಡೆ=ಇಡಬೇಕೆಂದರೆ; ಅಸದಳ=ಅಸಾಧ್ಯ/ಆಗುವುದಿಲ್ಲ; ಕರ್ಕಶ=ಬಿರುಸಾದ; ಮುಂದಳೆದು= ಮುನ್ನಡೆಯುತ್ತ; ಹಳು=ಕಾಡು/ಅರಣ್ಯ; ಪೊಕ್ಕನು=ಪ್ರವೇಶಿಸಿದನು;

ಉಗ್ರ ಮೃಗಪಕ್ಷಿ ಗಣದಿಂದ ಘೂರ್ಮಿಸುವ ಅಡಿ ಇಡುವೊಡೆ ಅಸದಳಮ್ ಎಂಬ ಕರ್ಕಶದ ಮಾರ್ಗದಿಂದೆ ಮುಂದಳೆದು ಹಳುವಮನು ಪೊಕ್ಕನು= ಕ್ರೂರವಾದ ಪ್ರಾಣಿಪಕ್ಷಿಗಳ ದನಿಯ ಅಬ್ಬರದಿಂದ ಕೂಡಿರುವ, ಹೆಜ್ಜೆಯಿಡಲು ಆಗದಂತಹ ರೀತಿಯಲ್ಲಿ ಮುಳ್ಳುಕಲ್ಲುಗಳಿಂದ ಕೂಡಿದ ಕೆಟ್ಟ ಹಾದಿಯಲ್ಲಿ ಮುನ್ನಡೆಯುತ್ತ ಕಾಡಿನೊಳಕ್ಕೆ ಬಂದನು; ಇಲ್ಲಿಂದ ಮುಂದೆ ಸೀತೆ ಮತ್ತು ಲಕ್ಷ್ಮಣ ಇಬ್ಬರೇ ಕಾಡಿನೊಳಕ್ಕೆ ತೆರಳುತ್ತಾರೆ; ಶಕುನಿ=ಹಕ್ಕಿ; ಚೀತ್ಕಾರ=ದೊಡ್ಡ ದನಿಯಲ್ಲಿ ಅರಚುವಿಕೆ; ಘೋಷಣ=ಕೂಗಿಹೇಳುವಿಕೆ/ಸಾರುವಿಕೆ; ಮಯ=ತುಂಬಿದ; **ಶಕುನಿ ಚೀತ್ಕಾರ ಘೋಷಣಮಯಮ್**=ಕಾಡಿನ

ಎಲ್ಲೆಡೆಯಲ್ಲಿಯೂ ಹಕ್ಕಿಗಳ ಕೂಗು ದೊಡ್ಡ ದನಿಯಲ್ಲಿ ಕೇಳಿಬರುತ್ತಿತ್ತು; ತೃಣ=ಹುಲ್ಲು; ತೃಣಮಯಮ್=ಹುಲ್ಲು ದಟ್ಟವಾಗಿ ಹಬ್ಬಿತ್ತು;

ವಿಕಿರದ+ಉಪಲ+ಆಳಿ; ವಿಕಿರ=ಹರಡಿಕೊಂಡಿರುವ; ಉಪಲ=ಕಲ್ಲು; ಆಳಿ=ಗುಡ್ಡೆ/ಗುಂಪು; ವಿಕಿರದುಪಲಾಳಿ=ಎಲ್ಲೆಡೆ ಹರಡಿಕೊಂಡಿರುವ ನುರುಜು ಕಲ್ಲಿನ ರಾಶಿ; ಕರ್ಕಶ=ಗಟ್ಟಿಯಾದ/ಬಿರುಸಾದ/ಒರಟಾದ; **ವಿಕಿರದುಪಲಾಳಿ ಕರ್ಕಶಮಯಮ್**=ಮೊನಚಾದ ಹಾಗೂ ಒರಟಾದ ನುರುಜುಕಲ್ಲುಗಳು ಹರಡಿಕೊಂಡಿದ್ದವು; ಶಶ=ಮೊಲ; ಶಶಮಯಮ್=ಮೊಲಗಳಿಂದ ತುಂಬಿತ್ತು; ಪ್ರಕಟ=ಕಣ್ಣಿಗೆ ಕಾಣುವ; ಕಂಟಕ=ಮುಳ್ಳು; ಕೀರ್ಣ=ಮುಸುಕಿದ/ಆವರಿಸಿದ;

ಪ್ರಕಟ ಕಂಟಕ ಕೀರ್ಣ ತರುಮಯಮ್=ಕಾಡಿನಲ್ಲಿ ಮುಳ್ಳಿಡಿದ ಮರಗಳು ಆವರಿಸಿಕೊಂಡಿರುವುದು ಎದ್ದು ಕಾಣುತ್ತಿತ್ತು; ರುರು=ಜಿಂಕೆ; ಮಯ= ತುಂಬಿದ; **ರುರುಮಯಮ್**=ಜಿಂಕೆಗಳ ಹಿಂಡು ಎಲ್ಲೆಡೆಯಲ್ಲಿಯೂ ಇದ್ದವು; ವಿವಿಧ+ಉಗ್ರ+ಜಂತು; **ವಿವಿಧೋಗ್ರಜಂತು ಮಯವು**=ಕಾಡಿನ ತುಂಬಾ ಬಗೆಬಗೆಯ ಕ್ರೂರಪ್ರಾಣಿಪಕ್ಷಿಗಳಿದ್ದವು; ನಕುಲ=ಮುಂಗುಸಿ; ಮೂಷಕ=ಇಲಿ; ಸರೀಸೃಪ=ಹಾವು; **ನಕುಲ ಮೂಷಕ ಸರೀಸೃಪ ಮಯಮ್**=ಮುಂಗುಸಿ, ಇಲಿ, ಹಾವುಗಳು ಎಲ್ಲೆಡೆ ಸಂಚರಿಸುತ್ತಿದ್ದವು; ದ್ವಿಪ=ಆನೆ; ಭೂ+ವಿಷಮ; ಭೂ=ಭೂಮಿ; ವಿಷಮ=ಕೆಟ್ಟ; ಸಂಕುಲ=ಸಮೂಹ/ಗುಂಪು;

ದ್ವಿಪಮಯಮ್ ಸಕಲ ಭೂವಿಷಮ ಸಂಕುಲಮಯಮ್=ಆನೆಗಳನ್ನು ಮೊದಲುಗೊಂಡು ಅತ್ಯಂತ ಕ್ರೂರವಾದ ಪ್ರಾಣಿಪಕ್ಷಿಗಳ ಗುಂಪಿನಿಂದ ಕಾಡು ಕೂಡಿತ್ತು; **ಬಿಲಮಯಮ್**=ಬಿಲಗಳಿಂದ ಕೂಡಿತ್ತು; ವೃಕ=ತೋಳ; ಸೂಕರ=ಹಂದಿ; ವ್ಯಾಘ್ರ=ಹುಲಿ; ಚಯ=ಗುಂಪು; **ವೃಕ ಸೂಕರ ವ್ಯಾಘ್ರ ಚಯಮಯಮ್**=ತೋಳ, ಹಂದಿ, ಹುಲಿಗಳ ಗುಂಪಿನಿಂದ ಕಾಡು ತುಂಬಿ ಹೋಗಿತ್ತು; **ಭಯಮಯಮ್ ತಾನು ಎನಿಸಿ ಕಾಡು ಇರ್ದುದು**=ಕಾಡನ್ನು ಹೊಕ್ಕವರ ಮಯ್ ಮನದಲ್ಲಿ ಹೆದರಿಕೆಯನ್ನು ಉಂಟುಮಾಡುವಂತೆ ಕಾಡು ಕಂಡುಬರುತ್ತಿತ್ತು; ಇರುಳ್+ಅಂತೆ; ಇರುಳ್=ರಾತ್ರಿ; ಅಂತೆ=ಹಾಗೆ; ಪಗಲ್+ಅಂತೆ; ಪಗಲ್=ಹಗಲು; ಮಖ=ಯಾಗ; ಮಖದಂತೆ=ಯಾಗದ ಕುಂಡದ ಹಾಗೆ; ದಿವ=ದೇವಲೋಕ; ದಿವದಂತೆ=ದೇವಲೋಕದ ಹಾಗೆ; ವರ=ಉತ್ತಮವಾದ; ಪಯೋನಿಧಿ=ಹಾಲಿನ ಕಡಲು; ಕೈಲಾಸಗಿರಿ= ಹಿಮಾಲಯ ಪರ್ವತ ಶ್ರೇಣಿಯಲ್ಲಿರುವ ಒಂದು ದೊಡ್ಡ ಬೆಟ್ಟ. ಇಲ್ಲಿ ದೇವರಾದ ಶಿವನು ನೆಲೆಸಿದ್ದಾನೆ ಎಂಬ ನಂಬಿಕೆ ಜನಮನದಲ್ಲಿದೆ;

ಇರುಳಂತೆ ಪಗಲಂತೆ ಮಖದಂತೆ ದಿವದಂತೆ ವರ ಪಯೋನಿಧಿಯಂತೆ ಕೈಲಾಸಗಿರಿಯಂತೆ=ರಾತ್ರಿಯಂತೆ; ಹಗಲಿನಂತೆ; ಯಾಗದಂತೆ; ದೇವಲೋಕದಂತೆ; ಉತ್ತಮವಾದ ಹಾಲ್ಗಡಲಿನಂತೆ; ಕೈಲಾಸಗಿರಿಯಂತೆ; ನಿರುತಮ್+ಉಮ್; ನಿರುತ=ನಿಶ್ಚಯ/ದಿಟ; ಸೋಮ=ಚಂದ್ರ; ಅರ್ಕ=ಸೂರ್ಯ; ಶಿಖಿ=ಅಗ್ನಿದೇವ; ಸಹಸ್ರ+ಅಕ್ಷ; ಸಹಸ್ರಾಕ್ಷ=ಸಾವಿರ ಕಣ್ಣುಗಳನ್ನುಳ್ಳ ದೇವತೆಯಾದ ಇಂದ್ರ; ಹರಿ=ವಿಷ್ಣು; ನುತ=ಕೊಂಡಾಡಿದ/ಹೊಗಳಿದ; ಆವಾಸಮ್+ಆಗಿ; ಆವಾಸ=ನೆಲೆ/ಮನೆ; **ನಿರುತಮುಮ್ ಸೋಮ ಅರ್ಕ ಶಿಖಿ ಸಹಸ್ರಾಕ್ಷ ಹರಿನುತ ಶಿವ ಆವಾಸಮಾಗಿ**=ದಿಟವಾಗಿ ಚಂದ್ರ, ಸೂರ್ಯ, ಅಗ್ನಿದೇವ, ಇಂದ್ರ , ವಿಷ್ಣು ದೇವರುಗಳೆಲ್ಲವೂ ಕೊಂಡಾಡಿದ ಶಿವನ ವಾಸದ ನೆಲೆಯಾಗಿ; ಮಹಾ+ಅಟವಿ; ಮಹಾ=ದೊಡ್ಡ; ಅಟವಿ=ಅಡವಿ; ಧುರ=ಕಾಳೆಗ; ನಭ=ಆಕಾಶ; ಶರ=ಸರೋವರ; ಪುಂಡರೀಕ=ಹುಲಿ; ವಿದ್ರುಮ=ದೊಡ್ಡ ಮರ; ಋಕ್ಷ=ಕರಡಿ; ಇಡಿದು+ಇರುತ; ಇಡಿದು=ತುಂಬಿರು/ನಿಬಿಡವಾಗು;

ಆ ಮಹಾಟವಿ ಧುರದಂತೆ ಕೊಳದಂತೆ ಕಡಲಂತೆ ನಭದಂತೆ ಶರ ಪುಂಡರೀಕ ವಿದ್ರುಮ ಋಕ್ಷಮಯದೊಳು ಇಡಿದಿರುತ=ಆ ದೊಡ್ಡ ಕಾಡು ರಣರಂಗದಂತೆ; ಕೊಳದಂತೆ; ಕಡಲಿನಂತೆ; ಗಗನದಂತೆ; ಸರೋವರಗಳಿಂದ, ಹುಲಿಗಳಿಂದ, ದೊಡ್ಡ ದೊಡ್ಡ ಮರಗಳಿಂದ, ಕರಡಿಗಳಿಂದ ಕಿಕ್ಕಿರಿದು ತುಂಬಿಹೋಗಿರಲು; ಕಾಡಿನಲ್ಲಿರುವ ಚರಾಚರಗಳೆಲ್ಲವೂ ಒಂದೊಂದು ಗಳಿಗೆಯಲ್ಲಿ ಒಂದೊಂದು ಬಗೆಯಲ್ಲಿ ಗೋಚರಿಸುತ್ತಿದ್ದವು ಎಂಬ ರೂಪಕದ ತಿರುಳಿನಲ್ಲಿ ಈ ವರ್ಣನೆಯ ನಿರೂಪಣೆಗೊಂಡಿದೆ; ಘೋರತರಮ್+ಆಗಿ; ಘೋರತರ=ಅತಿ ಉಗ್ರವಾಗಿ;

ಜಾನಕಿಯ ಕಣ್ಗೆ ಘೋರತರಮಾಗಿ ಮುಂದೆ ಇರ್ದುದು=ಸೀತೆಯ ಕಣ್ಣಿಗೆ ಅತಿ ಭಯಂಕರವಾಗಿ ಕಂಡುಬಂದಿತು; ಗಹ್ವರ=ಗುಹೆ; ದುರ್ಘಟಮ್+ಆಗೆ; ದುರ್ಘಟ=ಒಳಹೊಗಲು ಆಗದಿರುವುದು; **ಅಟವಿಯ ಮಹಾಘೋರ ಗಹ್ವರಮ್ ಮುಂದೆ ದುರ್ಘಟಮಾಗೆ**=ಮುಂದೆ ಅಡಿಯಿಡಲು ಆಗದ ಅತಿ ಭಯಂಕರವಾದ ಗುಹೆಯಂತೆ ಕಾಡು ವ್ಯಾಪಿಸಿರಲು; **ನಡುನಡುಗಿ ಭೀತಿಯಿಮ್ ಸೀತೆ ಸಂಕಟದಿಂದೆ ರಾಮನಾಮಂಗಳನು ಜಪಸುತ**=ಹೆದರಿಕೆಯಿಂದ ಸೀತೆಯು ನಡುನಡುಗುತ್ತ ಸಂಕಟದಿಂದ ರಾಮನ ಹೆಸರನ್ನು ಜಪಿಸುತ್ತ; ಅಟನ=ಸಂಚಾರ/ಓಡಾಡಲು; ಅಸದಳಮ್+ಅಪ್ಪುದು; ಅಸದಳ=ಅಸಾಧ್ಯ/ಅಶಕ್ತ; ಅಪ್ಪುದು=ಆಗಿರುವುದು; **ಎಲೆ ಸೌಮಿತ್ರಿ, ಕಾನನಮ್ ಇದು ಅಟನಕೆ**

ಅಸದಳಮಪ್ಪುದು=ಎಲೆ ಲಕ್ಷ್ಮಣ, ಈ ಕಾಡಿನ ಒಳಕ್ಕೆ ಕಾಲಿಡಲು ಆಗುತ್ತಿಲ್ಲ; ಪುಣ್ಯ+ಆಶ್ರಮ; ಪುಣ್ಯ=ಮಂಗಳಕರವಾದುದು; ಜಟಿ=ರಿಸಿ/ಮುನಿ; ವಲ್ಕಲವನು+ಉಟ್ಟ; ವಲ್ಕಲ=ನಾರುಮಡಿ/ಮರದ ತೊಗಟೆಯಿಂದ ಮಾಡಿದ ಬಟ್ಟೆ; ಮುನಿವಧುಗಳನು=ಮುನಿಗಳ ಹೆಂಡತಿಯರನ್ನು; ವಟು=ವಿದ್ಯೆಯನ್ನು ಕಲಿಯಲು ಮುನಿಗಳ ಬಳಿಗೆ ಬಂದಿರುವ ಹುಡುಗರು; ಶ್ರುತಿ=ವೇದ; ಘೋಷ=ದೊಡ್ಡ ದನಿಯಲ್ಲಿ ಉಚ್ಚರಿಸುವುದು; ಹೋಮ=ಯಾಗದ ಅಗ್ನಿಕುಂಡ; ದೂಮ=ಹೊಗೆ; ಹೋಮಧೂಮ=ಅಗ್ನಿಕುಂಡದಲ್ಲಿ ದೇವತೆಗಳಿಗೆಂದು ಅರ್ಪಿಸಿದ ವಸ್ತುಗಳೆಲ್ಲವೂ ಬೆಂಕಿಗೆ ಆಹುತಿಯಾದಾಗ ಹೊರಹೊಮ್ಮುವ ಹೊಗೆ; ಅಳವಳಿ=ಕಳವಳಪಡು/ಶೋಕಿಸು;

ಇಲ್ಲಿ ಪುಣ್ಯಾಶ್ರಮದ ಜಟಿಗಳನು ವಲ್ಕಲವನುಟ್ಟ ಮುನಿವಧುಗಳನು ವಟುಗಳನು ಶ್ರುತಿಘೋಷ ಹೋಮಧೂಮಂಗಳನು ಕಾಣೆನು ಎಂದು ಅಳವಳಿದಳು=ದಟ್ಟವಾದ ಈ ಕಾಡಿನ ಎಡೆಯಲ್ಲಿ ಮಂಗಳಕರವಾದ ಆಶ್ರಮದ ರಿಸಿಗಳನ್ನಾಗಲಿ, ನಾರುಮಡಿಯನ್ನುಟ್ಟ ರಿಸಿಪತ್ನಿಯರನ್ನಾಗಲಿ, ವಿದ್ಯೆಯನ್ನು ಕಲಿಯಲು ಬಂದಿರುವ ಹುಡುಗರನ್ನಾಗಲಿ, ವೇದದ ಮಂತ್ರಗಳ ಉಚ್ಚಾರಣೆಯನ್ನಾಗಲಿ, ಹೋಮದ ಕುಂಡದಿಂದ ಹೊರಹೊಮ್ಮುತ್ತಿರುವ ಹೊಗೆಯನ್ನಾಗಲಿ ನಾನು ಕಾಣುತ್ತಿಲ್ಲ ಎಂದು ಕಳವಳಪಟ್ಟಳು; ಮುನಿಪ+ಉತ್ತಮರ; ಪಾವನ=ಪವಿತ್ರವಾದುದು; ಎಡೆ=ಜಾಗ; **ಎಲ್ಲಿ ಮುನಿಪೋತ್ತಮರ ಪಾವನದ ವನದ ಎಡೆಗಳು**=ಉತ್ತಮರೆಂದು ಹೆಸರಾಂತ ಮುನಿಗಳ ಪವಿತ್ರವಾದ ಆಶ್ರಮಗಳು ಈ ಕಾಡಿನಲ್ಲಿ ಎಲ್ಲಿವೆ; **ಎಲ್ಲಿ ಸಿದ್ಧಾಶ್ರಮಂಗಳ ಮಂಗಳಸ್ಥಳಗಳು**=ಪವಿತ್ರವಾದ ಆಶ್ರಮಗಳ ಮಂಗಳಕರವಾದ ಜಾಗಗಳು ಎಲ್ಲಿವೆ;

ಹವಿ=ಹೋಮದ ಅಗ್ನಿಕುಂಡಕ್ಕೆ ಹಾಕುವ ತುಪ್ಪ, ಹಾಲು, ಅನ್ನ ಮತ್ತು ಇತರ ವಸ್ತುಗಳು; ಸುಹವಿ=ಹೋಮಾಗ್ನಿಗೆ ಹಾಕುವ ಒಳ್ಳೆಯ ವಸ್ತುಗಳು; ಕಂಪು+ಒಗೆದ; ಕಂಪು=ಪರಿಮಳ/ಸುವಾಸನೆ; ಒಗೆ=ಆವರಿಸು/ವ್ಯಾಪಿಸು/ಹರಡು; ಪೊಗೆ=ಹೊಗೆ; ತಳೆ=ಹೊಂದು; ಅಗ್ನಿಹೋತ್ರ=ಅಗ್ನಿದೇವನನ್ನು ಕುರಿತು ಮಾಡುವ ಹೋಮ; ಕುಟೀರ=ಎಲೆವನೆ/ಯಾಗಶಾಲೆ;

ಎಲ್ಲಿ **ಸುಹವಿಗಳ ಕಂಪೊಗೆದ ಪೊಗೆ ತಳೆದ ಅಗ್ನಿಹೋತ್ರದ ಕುಟೀರಂಗಳು**=ಹೋಮಕುಂಡದಲ್ಲಿ ಉರಿಯುತ್ತಿರುವ ಬೆಂಕಿಗೆ ಹಾಕಿದ ವಸ್ತುಗಳಿಂದ ಹೊರಹೊಮ್ಮಿದ ಸುವಾಸನೆಯಿಂದ ಕೂಡಿದ ಅಗ್ನಿದೇವನ ಯಾಗಶಾಲೆಗಳೆಲ್ಲಿ;

ವಾದ=ಮಾತುಕತೆ/ಚರ್ಚೆ; **ಎಲ್ಲಿ ಪರಿಚಿತವಾದ ವಾದ ವೇದ ಧ್ವನಿಗಳು**=ವೇದಗಳನ್ನು ಕುರಿತು ಚರ್ಚೆ ಮಾಡುತ್ತಿರುವ ರಿಸಿಗಳ ಮಾತುಗಳ ದನಿಯೆಲ್ಲಿ; ಒಯ್ಯದೆ=ಕರೆದುಕೊಂಡು ಬರದೆ; ಸುಯ್=ನಿಟ್ಟುಸಿರು ಬಿಡು; **ಅಲ್ಲಿಗೆ ಒಯ್ಯದೆ**=ರಿಸಿಗಳಿಂದ ಕೂಡಿ, ಯಾಗದ ಆಚರಣೆಗಳಿಂದ ಕಂಗೊಳಿಸುತ್ತಿರುವ ಆಶ್ರಮಗಳು ಇರುವ ಕಡೆಗೆ ನನ್ನನ್ನು ಕರೆದುಕೊಂಡುಹೋಗದೆ; ದಾರು=ದೇವದಾರು ಎಂಬ ಹೆಸರಿನ ದೊಡ್ಡ ಮರ; ದಾರುಣ=ಭಯಂಕರವಾದುದು; ಕಡಿದು+ಅಡವಿ; ಕಡಿದು=ದಟ್ಟವಾದುದು; ಕಟ್ಟಡವಿ=ದಟ್ಟವಾದ ಕಾಡು;

ದಾರುದಾರುಣದ ಕಟ್ಟಡವಿಗೆ=ದೊಡ್ಡ ದೊಡ್ಡ ದೇವದಾರು ಮರಗಳಿಂದ ಕೂಡಿ ಭಯಂಕರವಾಗಿರುವ ದಟ್ಟವಾದ ಕಾಡಿಗೆ; **ಇಲ್ಲಿಗೆ ಏಕೈತಂದೆ ಹೇಳು ಎಂದು ಜಾನಕಿ ಸುಯ್ದಳು**=ಇಂತಹ ಕಡೆಗೆ ಏತಕ್ಕಾಗಿ ಕರೆದುಕೊಂಡು ಬಂದೆ ಎಂಬುದನ್ನು ಹೇಳು ಎಂದು ಸೀತೆಯು ಸಂಕಟದಿಂದ ನಿಟ್ಟುಸಿರನ್ನು ಬಿಟ್ಟಳು; ಪಾವನ=ಪವಿತ್ರವಾದುದು; **ಪಾವನಕೆ ಪಾವನಮ್**=ಪವಿತ್ರವಾದುದಕ್ಕೆ ಇನ್ನೂ ಹೆಚ್ಚಿನ ಪವಿತ್ರತೆಯನ್ನು ತಂದು ಕೊಡುವುದು; **ಮಂಗಳಕೆ ಮಂಗಳಮ್**=ಒಳಿತನ್ನು ಉಂಟುಮಾಡುವುದಕ್ಕೆ, ಇನ್ನೂ ಹೆಚ್ಚಿನ ಮಂಗಳವನ್ನು ತಂದು ನೀಡುವುದು;

ಆವನ=ಯಾರ/ಯಾವ ವ್ಯಕ್ತಿಯ; ಚರಿತ್ರ=ನಡವಳಿಕೆ/ನಡೆನುಡಿ; ನಾಮ=ಹೆಸರು; **ಅದು ಅವನ ಚರಿತ್ರ ನಾಮಂಗಳು**=ಪಾವನ ಮತ್ತು ಮಂಗಳಕರವೆಂದು ಯಾರ ಹೆಸರು ಮತ್ತು ನಡೆನುಡಿಗಳು ಇವೆಯೋ;

ಜೀವೇಶನ್+ಆಗಿರಲ್ಕೆ; ಜೀವೇಶ=ಗಂಡ; **ಆ ರಾಘವನೆ ಜೀವೇಶನಾಗಿರಲ್ಕೆ**=ಅಂತಹ ರಾಮನೇ ನನ್ನ ಗಂಡನಾಗಿರುವಾಗ; ಅಂಘ್ರಿ=ಪಾದ; ಅಗಲು=ತೊರೆದು/ದೂರಸರಿದು; **ಆತನ ಅಂಘ್ರಿಯನು ಅಗಲ್ದು ಈಗ ನಾನು ಬಂದ ಬಳಿಕ ಈ ವನದೊಳು ಇನ್ನು ಪುಣ್ಯಾಶ್ರಮಮ್ ಗೋಚರಿಪುದೇ**=ಅವನ ಪಾದದಿಂದ ಅಂದರೆ ಅವನ ಬಳಿಯಿಂದ ಈಗ ನಾನು ದೂರಸರಿದು ಬಂದ ಬಳಿಕ, ಇನ್ನು ಈ ಕಾಡಿನಲ್ಲಿ ನನಗೆ ಪುಣ್ಯಾಶ್ರಮವು ಗೋಚರಿಸುತ್ತದೆಯೇ; ವನಜ=ತಾವರೆ; ಅರಲು=ಅರಳಿದ ಹೂವು; ಉಳಿ=ತ್ಯಜಿಸು/ಬಿಡು; ಆರಡಿ=ದುಂಬಿ; ಬೊಬ್ಬುಳಿ=ಗೊಬ್ಬಳಿ ಮರ; ಪೂವು=ಹೂವು; ಮಧು+ಉಂಟೆ; ಮಧು=ಮಕರಂದ/ಹೂವಿನ ರಸ; ಪೊದಕುಳಿ=ಸಂಕಟ/ಅಳಲು;

ವನಜದ ಅರಳನು ಉಳಿದ ಆರಡಿಗೆ ಬೊಬ್ಬುಳಿಯ ಪೂವಿನೊಳು ಮಧುವುಂಟೆ ಸೌಮಿತ್ರಿ... ಹೇಳು ಎಂದು ಸೀತೆ ಪೊದಕುಳಿಗೊಂಡಳು= ತಾವರೆಯ ಹೂವನ್ನು ಬಿಟ್ಟು ಮುಳ್ಳಿನ ಮರವಾದ ಗೊಬ್ಬಳಿಯ ಹೂವಿನತ್ತ ಬಂದ ದುಂಬಿಗೆ ಹೂವಿನ ಮಕರಂದ ದೊರೆಯುವುದೇ ಲಕ್ಷ್ಮಣ ಎಂದು ಸೀತೆಯು ತನ್ನ ಸಂಕಟವನ್ನು ತೋಡಿಕೊಂಡಳು; ಅಂದರೆ ರಾಮನಿಂದ ದೂರಬಂದ ನನಗೆ ಇನ್ನು ಮುಂದೆ ಒಳ್ಳೆಯದಾಗುವುದಿಲ್ಲವೆಂಬ ಹೆದರಿಕೆಯು ಸೀತೆಯಲ್ಲಿ ಉಂಟಾಗಿದೆ; ನರನಾಥ=ರಾಜ; **ನರನಾಥ ಕೇಳು**=ಜನಮೇಜಯ ರಾಜನಿಗೆ ರಾಮಾಯಣದ ಕತೆಯನ್ನು ಜೈಮಿನಿ ರಿಸಿಯು ಹೇಳುತ್ತಿದ್ದಾನೆ; ಅವನಿಸುತೆ= ಭೂದೇವಿಯ ಮಗಳಾದ ಸೀತೆ; ಉರೆ=ಬಹಳವಾಗಿ/ಹೆಚ್ಚಾಗಿ; **ಅವನಿಸುತೆ ನುಡಿದ ಮಾತಿಗೆ ಉತ್ತರವನ್ ಆಡದೆ ಮನದೊಳು ಉರೆ ನೊಂದು**= ಸೀತೆಯ ಆಡಿದ ಮಾತುಗಳಿಗೆ ಲಕ್ಷ್ಮಣನು ಯಾವುದೇ ಉತ್ತರವನ್ನು ನೀಡದೆ ಮನಸ್ಸಿನಲ್ಲಿ ಬಹಳವಾಗಿ ಸಂಕಟಪಡುತ್ತ; ಎಂದ=ಅಣ್ಣನಾದ ರಾಮನು ಹೇಳಿದ; ಕಷ್ಟಮನ್=ಸಂಕಟದ ಸಂಗತಿಯನ್ನು; ಪೇಳ್ದಪೆನೊ=ಹೇಳಲೊ; ಮೇಣ್=ಇಲ್ಲವೇ; ಉಸಿರದೆ=ಏನನ್ನೂ ಹೇಳದೆ; ಇರ್ದಪೆನೊ=ಇರುವೆನೊ;

ರಾಘವೇಶ್ವರನು ಎಂದ ಕಷ್ಟಮನ್ ಪೇಳ್ದಪೆನೊ... ಮೇಣ್... ಉಸಿರದೆ ಇರ್ದಪೆನೊ=ರಾಮನು ಹೇಳಿರುವ ನೋವಿನ ಸಂಗತಿಯನ್ನು ಸೀತೆಗೆ ಹೇಳಲೊ ಇಲ್ಲವೇ ಹೇಳದೆ ಸುಮ್ಮನಿರಲೊ; ನಿಷ್ಠುರ=ಕ್ರೂರವಾದುದು/ ಕರುಣೆಯಿಲ್ಲದುದು; ತರಣಿ=ಸೂರ್ಯ; ಸಾರ್ವಭೌಮ=ಚಕ್ರವರ್ತಿ; ಪೋದಪೆನೆಂತೊ=ಹೋಗಲೊ; **ನಿಷ್ಠುರದೊಳು ತರಣಿಕುಲಸಾರ್ವಭೌಮನ ರಾಣಿಯನು ಬನದೊಳು ಇರಸಿ ಪೋದಪೆನೆಂತೊ**=ರಾಮನ ಮಡದಿಯಾದ ಸೀತೆಯನ್ನು ಕರುಣೆಯಿಲ್ಲದೆ ಕಾಡಿನಲ್ಲಿ ಹೇಗೆ ತಾನೆ ಬಿಟ್ಟು ಹೋಗಲಿ; ಬೇಗುದಿ=ಅತಿ ಹೆಚ್ಚಿನ ಸಂಕಟ/ಪರಿತಾಪ; **ಬೆಂದು ಬೇಗುದಿಗೊಂಡನು**= ಬೆಂಕಿಯಲ್ಲಿ ಬೇಯುವಾಗ ಪಡುವ ಸಂಕಟದಂತೆ ಹೆಚ್ಚಿನ ಸಂಕಟಕ್ಕೆ ಒಳಗಾದನು; **ಪೋಗದಿರ್ದೊಡೆ ಸಹೋದರನು ಅದೇನು ಎಂದಪನೊ ಹಾ... ಎಂದು ಲಕ್ಷ್ಮಣನು ಬೆಂದು ಬೇಗುದಿಗೊಂಡನು**=ಸೀತೆಯನ್ನು ಕಾಡಿನಲ್ಲಿ ಬಿಟ್ಟು ಹೋಗದಿದ್ದರೆ ನನ್ನ ಬಗ್ಗೆ ಅಣ್ಣನು ಅದೇನೆಂದುಕೊಳ್ಳುವನೊ... ಅಯ್ಯೋ... ಎಂದು ಲಕ್ಷ್ಮಣನು ಸಂಕಟದ ಬೇಗೆಯಲ್ಲಿ ಬೆಂದುಹೋದನು;

ಕಂಬನಿಗಳು ಉಕ್ಕಿದುವು=ಕಣ್ಣುಗಳಿಂದ ಒಂದೇ ಸಮನೆ ಕಣ್ಣೀರು ಸುರಿಯತೊಡಗಿತು; ಅಧರ+ಓಷ್ಠಮ್; ಅಧರ=ಕೆಳಗಡೆ; ಓಷ್ಠ=ತುಟಿ;

ಅದಿರು=ನಡುಗು/ಕಂಪಿಸು; **ಅಧರೋಷ್ಠಮ್ ಅದಿರಿತು**=ಕೆಳತುಟಿ ಕಂಪಿಸತೊಡಗಿತು; ಒಡಲು=ದೇಹ/ಮಯ್; ಅಲಗು+ಇಕ್ಕಿ; ಅಲಗು=ಕತ್ತಿ; ಇಕ್ಕಿ=ತಿವಿದು; ತಿರುಪಿದ+ವೊಲ್+ಆಯ್ತು; ವೊಲ್=ಅಂತೆ; **ಒಡಲೊಳು ಅಲಗಿಕ್ಕಿ ತಿರುಪಿದವೊಲಾಯ್ತು**=ದೇಹದೊಳಕ್ಕೆ ಕತ್ತಿಯನ್ನು ತಿವಿದು ತಿರುಗಿಸಿದಂತಾಯ್ತು; ಎಡೆ+ಪರಿಯದೆ; ಪರಿ=ತೀರು/ಮುಗಿ; ಎಡೆವರಿಯದೆ= ತುಂಡಾಗದೆ/ಒಂದೇ ಸಮನೆ; ಒಕ್ಕು=ಹರಿ; **ಉಸಿರು ಎಡೆವರಿಯದೆ ಒಕ್ಕುದು**= ಒಂದೇ ಸಮನೆ ಉಸಿರು ಹೊರಹೊಮ್ಮತೊಡಗಿತು; ಅವಯವ=ದೇಹ; ಉರೆ=ಬಹಳ ಹೆಚ್ಚಾಗಿ; **ಅವಯವಮ್ ಉರೆ ಕಂಪಿಸಿದುದು**=ಇಡೀ ದೇಹ ಬಹಳವಾಗಿ ನಡುಗತೊಡಗಿತು;

ಎರ್ದೆ ಕರಗಿತು=ಮನಸ್ಸು ಕುಗ್ಗಿತು; ಸೈರಣೆ=ತಾಳ್ಮೆ/ಸಹನೆ; ಸಮತೆ+ಕೆಟ್ಟುದು; ಸಮತೆ=ನೆಮ್ಮದಿ/ಮನಸ್ಸಿನ ಹತೋಟಿ; **ಸೈರಣೆ ಸಮತೆಗೆಟ್ಟುದು**=ತಾಳ್ಮೆ ತಪ್ಪಿಹೋಯಿತು; ಸೆರೆಬಿಗಿ=ಕೊರಳಿನ ನರಗಳು ಎಳೆದುಕೊಂಡು; **ಕಂಠದೊಳ್ ಮಾತುಗಳು ಸೆರೆಬಿಗಿದು ಸಿಕ್ಕಿದುವು**= ಕೊರಳಿನಿಂದ ಮಾತು ಹೊರಹೊಮ್ಮದಾದುವು; ಬೆಂಡು+ಆಗಿ; ಬೆಂಡು= ತಿರುಳಿಲ್ಲದ್ದು/ಪೊಳ್ಳು; **ಮಿಕ್ಕು ಮೀರುವ ಶೋಕದಿಂದೆ ಬೆಂಡಾಗಿ**=ಉಕ್ಕಿಬಂದ ಸಂಕಟದಿಂದ ಸುಸ್ತಾಗಿ; ಕಡು+ಕಕ್ಕಸ; ಕಡು=ಅತಿ ಹೆಚ್ಚಿನ; ಕಕ್ಕಸ=ಕಷ್ಟ/ ಪ್ರಯಾಸ/ಕ್ರೂರ; ಉಸಿರಲ್=ಹೇಳಲು; **ಕಡುಗಕ್ಕಸದ ಕೆಲಸಮನ್ ಉಸಿರಲ್ ಅರಿಯದೆ**=ಅತ್ಯಂತ ಕ್ರೂರವಾದ ರಾಮನ ಅಪ್ಪಣೆಯನ್ನು ನೇರವಾಗಿ ಹೇಳಲು ತಿಳಿಯದೆ; ಒಯ್ಯನೆ=ಕೂಡಲೇ/ಮರುಗಳಿಗೆಯಲ್ಲೇ; **ಅವನು ಒಯ್ಯನೆ ಅವನಿಸುತೆಗೆ ಇಂತೆಂದನು**=ಲಕ್ಷ್ಮಣನು ಮರುಗಳಿಗೆಯಲ್ಲಿಯೇ ಸೀತೆಗೆ ಈ ರೀತಿ ಹೇಳಿದನು; ಇನ್ನೆಗಮ್=ಇದುವರೆಗೂ;

ದೇವಿ ನಿನಗೆ ಇನ್ನೆಗಮ್ ಅದ ಪೇಳ್ವುದಿಲ್ಲ=ದೇವಿ, ನಿನಗೆ ಇದುವರೆಗೂ ಒಂದು ಸಂಗತಿಯನ್ನು ಹೇಳಿರಲಿಲ್ಲ; ಅಪವಾದ=ನಿಂದೆ/ತೆಗಳಿಕೆ/ಕೆಟ್ಟ ಹೆಸರು; ಆವರಿಸು=ಸುತ್ತಿಕೊಂಡು; **ಅಪವಾದಮ್ ಆವರಿಸಿ ನಿನ್ನನ್ ಒಲ್ಲದೆ**=ನಿಂದೆಗೆ ಒಳಗಾಗಿ, ನಿನ್ನ ಜೊತೆಯಲ್ಲಿರಲು ಒಪ್ಪದೆ; ರಘು+ಕುಲ+ಉದ್ಭವನು; ಉದ್ಭವ=ಹುಟ್ಟುವುದು;

ರಘುಕುಲೋದ್ಭವನು=ರಾಮನು; ಸೀವರಿಸಿ=ಹೇಸು/ಜುಗುಪ್ಸೆಗೊಂಡು; **ರಘುಕುಲೋದ್ಭವನು** ಸೀವರಿಸಿ=ರಾಮನು ನಿನ್ನ ಬಗ್ಗೆ ಜುಗುಪ್ಸೆಗೊಂಡು; ಕಾಂತಾರ=ಕಾಡು; ನೇಮಿಸು=ಅಪ್ಪಣೆಮಾಡು/ಕೆಲಸವನ್ನು ವಹಿಸಲು;

ಕಾಂತಾರಕ್ಕೆ ಕಳುಹಿ ಬಿಟ್ಟು ಬಾ ಎಂದು ಎನಗೆ ನೇಮಿಸಿದೊಡೆ=ಕಾಡಿಗೆ ಕಳುಹಿಸಿ, ಕಾಡಿನಲ್ಲಿಯೇ ಬಿಟ್ಟು ಹಿಂತಿರುಗು ಎಂದು ನನಗೆ ಅಪ್ಪಣೆ ಮಾಡಲು; ವಿಭು=ರಾಜ; ವಿಪಿನ=ಕಾಡು; ಒಡಗೊಂಡು=ಜತೆಯಲ್ಲಿ ಕರೆದುಕೊಂಡು; **ಆ ವಿಭುವಿನ ಆಜ್ಞೆಯನು ಮೀರಲು ಅರಿಯದೆ ನಿಮ್ಮನು ಈ ವಿಪಿನಕೆ ಒಡಗೊಂಡು ಬಂದೆನು**=ರಾಜನ ಅಪ್ಪಣೆಯನ್ನು ಕಡೆಗಣಿಸಲು ತಿಳಿಯದೆ, ನಿಮ್ಮನ್ನು ಈ ಕಾಡಿಗೆ ನನ್ನ ಸಂಗಡ ಕರೆದುಕೊಂಡು ಬಂದೆನು; ಒಯ್ಯೊಯ್ಯನೆ=ಈ ಕೂಡಲೇ; ಆವಲ್ಲಿಗೆ+ಆದೊಡಮ್; ಆವಲ್ಲಿಗೆ=ಯಾವ ಕಡೆಗಾದರೂ; ಬಾಷ್ಪ= ಕಣ್ಣೀರು; ಲೋಚನ=ಕಣ್ಣು; ಬಾಷ್ಪಲೋಚನ=ಅಳಲು ತೊಡಗಿ ಕಣ್ಣೀರನ್ನು ಹಾಕತೊಡಗಿದನು; **ಇನ್ನು ಒಯ್ಯೊಯ್ಯನೆ ಆವಲ್ಲಿಗಾದೊಡಮ್ ಪೋಗಿ ಎಂದು ಲಕ್ಷ್ಮಣನು ಬಾಷ್ಪಲೋಚನನಾದನು**=ಈ ಕೂಡಲೇ ಇನ್ನು ಯಾವ ಕಡೆಗಾದರೂ ಹೋಗಿರಿ ಎಂದು ಹೇಳುತ್ತ ಲಕ್ಷ್ಮಣನು ಅಳತೊಡಗಿದನು;

ಪೊಡೆ=ಅಪ್ಪಳಿಸು/ಹೊಡೆ; ಫಲಿತ=ಗೊನೆಯಿಂದ ತೂಗುತ್ತಿರುವ; ಕದಳಿ=ಬಾಳೆ; ಇಳೆ=ಭೂಮಿ; ಒರಗು=ಕೆಳಕ್ಕೆ ಬಾಗು; **ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ ಮುರಿದು ಇಳೆಗೆ ಒರಗುವಂತೆ**=ಬಿರುಗಾಳಿ ಅಪ್ಪಳಿಸಿದಾಗ ಗೊನೆಬಿಟ್ಟ ಬಾಳೆಯ ಗಿಡವು ಅತ್ತಿತ್ತ ತೂಗಾಡಿ ಮುರಿದು ಭೂಮಿಯ ಮೇಲೆ ಒರಗಿ ಬೀಳುವಂತೆ; ಕಿವಿ+ತೆರೆ; ತೆರೆ=ಕಿವಿಯ ಒಳಗಿನ ಪೊರೆ; ಕಿವಿದೆರೆ= ಕಿವಿಯ ಮೇಲೆ; ಅಂಗನೆ=ಸೀತೆ; ಹಮ್ಮೈಸು=ಎಚ್ಚರ ತಪ್ಪು/ಮೂರ್ಛೆ ಹೋಗು/ ಪ್ರಜ್ಞೆ ತಪ್ಪು; ಧರೆ=ಭೂಮಿ/ನೆಲ; **ಲಕ್ಷ್ಮಣನ ಮಾತು ಕಿವಿದೆರೆಗೆ ಬೀಳದ ಮುನ್ನ ಅಂಗನೆ ಹಮ್ಮೈಸಿ ನಡನಡುಗುತೆ ಧರೆಗೆ ಬಿದ್ದಳು**=ಲಕ್ಷ್ಮಣನ ಮಾತುಗಳನ್ನು ಕೇಳುತ್ತಿದ್ದಂತೆಯೇ ಸೀತೆಯು ಎಚ್ಚರತಪ್ಪಿ ನಡನಡುಗುತ್ತ ನೆಲದ ಮೇಲೆ ಬಿದ್ದಳು; ಅಂಗ+ಉಪಾಂಗಮ್+ಅನ್; ಅಂಗ=ದೇಹ; ಉಪಾಂಗ=ದೇಹದ ಇತರ ಭಾಗಗಳು; ಅಂಗೋಪಾಂಗ= ದೇಹದ ಭಾಗಗಳು;

ಅಂಗೋಪಾಂಗಮನ್ ಮರೆದಳು=ಮಯ್ ಮೇಲಿನ ಅರಿವನ್ನೇ ಕಳೆದುಕೊಂಡಳು; ಮರುಗು=ತಳಮಳ/ಸಂಕಟ; ಬಳಿಕ ಸೌಮಿತ್ರಿ ಮರುಗಿ=ಆಗ ಲಕ್ಷ್ಮಣನು ಸಂಕಟದಿಂದ ನೊಂದು; ತಳಿ=ಚಿಮುಕಿಸು/ ಸಿಂಪಡಿಸು; **ತಣ್ಣೀರು ತಳಿದು**=ಸೀತೆಯ ಮೊಗದ ಮೇಲೆ ತಣ್ಣೀರನ್ನು ಚಿಮುಕಿಸಿ; ಪತ್ರ=ಎಲೆ; ಕೊಡೆ+ಪಿಡಿದು; ಕೊಡೆ=ಚತ್ರಿ; ಕೊಡೆವಿಡಿದು=ನೆರಳು ಮಾಡಿ; **ಪತ್ರದೊಳು ಕೊಡೆವಿಡಿದು**=ಅಗಲವಾದ ಎಲೆಯೊಂದರಿಂದ ನೆರಳು ಮಾಡಿ; ಸೆರಗು=ಹೆಗಲ ಮೇಲೆ ಹಾಕಿಕೊಳ್ಳುವ ಬಟ್ಟೆಯ ಅಂಚು; **ಸೆರಗಿಂದೆ**

ಬೀಸಿ=ಸೆರಗಿನ ತುದಿಯಿಂದ ಗಾಳಿಯಾಡಿಸುತ್ತ; ಸೇವೆ=ಊಳಿಗ/ಕೆಲಸ; ಸಲ್ಲು=ನೆರವೇರು/ಈಡೇರು; ಸಂದುದು=ಈಡೇರುವುದು/ನೆರವೇರುವುದು; ರೋದಿಸು=ಅಳುವುದು; **ರಾಯನ ಸೇವೆ ಸಂದುದೇ ತನಗೆ ಎಂದು ರೋದಿಸಿದನು**=ರಾಮನ ಕೆಲಸವನ್ನು ಈ ರೀತಿ ತನಗೆ ಮಾಡುವಂತಾಯಿತೇ ಅಂದರೆ ಇಂತಹ ಕ್ರೂರವಾದ ಕೆಲಸದಲ್ಲಿ ನಾನು ಭಾಗಿಯಾಗುವಂತಾಯಿತಲ್ಲ ಎಂದು ಅಳತೊಡಗಿದನು; **ಒಯ್ಯನೆ ಅರೆಗಳಿಗೆಯೊಳು ಕಣ್ ತೆರೆದು**=ಲಕ್ಷ್ಮಣನ ಉಪಚಾರದಿಂದ ಮರುಗಳಿಗೆಯಲ್ಲಿಯೇ ಎಚ್ಚರಗೊಂಡ ಸೀತೆಯು; ದೈನ್ಯ=ದೀನತೆ/ಅಸಹಾಯಕತೆ; ಸುಯ್+ಎಲರನು; ಸುಯ್=ನಿಟ್ಟುಸಿರು ಬಿಡು; ಎಲರ್=ಗಾಳಿ;

ಸುಯ್ಯೆಲರು=ನಿಟ್ಟುಸಿರು; ಉರೆ=ಹೆಚ್ಚಾಗಿ/ಅತಿಶಯವಾಗಿ; ಸೂಸಿ=ಚೆಲ್ಲಿ/ಬಿಟ್ಟು; **ದೈನ್ಯದಿನ್ ಸುಯ್ಯೆಲರನು ಉರೆ ಸೂಸಿ**=ಯಾವ ಆಸರೆಯಿಲ್ಲದೆ ದೀನಳಾಗಿ ಒಡಲ ಸಂಕಟದಿಂದ ಹೊರಹೊಮ್ಮಿದ ನಿಟ್ಟುಸಿರನ್ನು ದೊಡ್ಡದಾಗಿ ಬಿಡುತ್ತ; **ಸೌಮಿತ್ರಿಯನು ನೋಡಿ**=ಲಕ್ಷ್ಮಣನನ್ನು ಕುರಿತು; ಕೊಯ್ಯಲ್+ಒಲ್ಲದೆ; ಒಲ್ಲದೆ=ಇಚ್ಚಿಸದೆ/ಬಯಸದೆ; **ಕೊರಳನು ಕೊಯ್ಯಲೊಲ್ಲದೆ**=ಕೊರಳನು ಕತ್ತರಿಸಲು ಬಯಸದೆ; **ಇಂತು ತನ್ನನು ಬಿಡಲು**=ಈ ರೀತಿ ತನ್ನನ್ನು ತ್ಯಜಿಸಲು; **ಮಾಡಿದ ಅಪರಾಧಮ್ ಉಂಟೆ**=ನಾನು ಮಾಡಿದ ತಪ್ಪೇನು; **ಕಯ್ಯಾರೆ ಖಡ್ಗಮನ್ ಕೊಟ್ಟು ತನ್ನ ಅರಸಿಯನು ಹೊಯ್ಯೆಂದು ಪೇಳದೆ ಅಡವಿಗೆ ಕಳುಹಿ ಬಾ ಎಂದನೆ**=ತಾನೇ ಕತ್ತಿಯನ್ನು ನಿನ್ನ ಕಯ್ಯಲ್ಲಿ ಕೊಟ್ಟು, ತನ್ನ ಮಡದಿಯಾದ ನನ್ನನ್ನು ಕತ್ತರಿಸು ಎಂದು ಹೇಳದೆ, ಕಾಡಿನಲ್ಲಿ ಬಿಟ್ಟು ಬಾ ಎಂದನೆ; ಕಾರುಣ್ಯ=ಕರುಣೆಯಿಂದ ತುಂಬಿದ; ನಿಧಿ=ಸಮುದ್ರ/ಕಡಲು/ಸಾಗರ; ಅಂಭೋಜ=ತಾವರೆ; ನೇತ್ರ=ಕಣ್ಣು; ಅಂಭೋಜನೇತ್ರೆ=ಸೀತೆ; ಅಳಲ್= ಸಂಕಟ;

ಅಯ್ಯಯ್ಯೊ... ರಾಘವನು ಕಾರುಣ್ಯನಿಧಿ ಎಂದು ಅಂಭೋಜನೇತ್ರೆ ಅಳಲ್ದಳು=ಅಯ್ಯಯ್ಯೋ... ನನ್ನ ಪತಿಯಾದ ರಾಮನು ಕರುಣಾಸಾಗರನು ಎಂದು ಸೀತೆ ಸಂಕಟಪಡತೊಡಗಿದಳು; **ರಘುಶ್ರೇಷ್ಠನು ಎನ್ನನು ಬಿಟ್ಟನೆ**=ರಾಮನು ನನ್ನನ್ನು ತೊರೆದನೆ; **ಅಕಟಕಟ, ತಾನು ಮುಟ್ಟನೆ**=ಅಯ್ಯಯ್ಯೋ... ಇನ್ನು ಅವನು ನನ್ನನ್ನು ಮುಟ್ಟುವುದಿಲ್ಲವೇ. ಅಂದರೆ ಅವನು ನನ್ನನ್ನು ಒಲವು ನಲಿವಿನಿಂದ ಆಲಂಗಿಸಿಕೊಳ್ಳುವುದಿಲ್ಲವೇ; ನೆಗಳ್=ಹೆಸರುವಾಸಿಯಾಗು/ಪ್ರಸಿದ್ಧಿಯನ್ನು ಪಡೆ; ಸಂಚಕಾರಮ್+ಅನ್; ಸಂಚಕಾರ=ಕೇಡು/ಹಾನಿ;

ನೆಗಳ್ದ ಬಾಳ್ಕೆಗೆ ಸಂಚಕಾರಮನ್ ಕೊಟ್ಟನೆ=ರಾಮಸೀತೆಯರೆಂಬ ಹೆಸರಾಂತ

ದಾಂಪತ್ಯದ ಬದುಕಿಗೆ ಕೇಡನ್ನು ಬಗೆದನೆ; ತನುಜ=ಮಗ; ಸುಮಿತ್ರಾತನುಜ= ಸುಮಿತ್ರೆಯ ಮಗ ಲಕ್ಷ್ಮಣ; ಕಟ್ಟರಣ್ಯ=ದಟ್ಟವಾದ ಕಾಡು; ನಿರೂಪಮ್+ಅನ್; ನಿರೂಪ=ಅಪ್ಪಣೆ/ಆದೇಶ; **ಸುಮಿತ್ರಾತನುಜ ಕಟ್ಟರಣ್ಯದೊಳು ಕಳುಹಿ ಬಾಯೆಂದು ನಿನಗೆ ನಿರೂಪಮನ್ ಕೊಟ್ಟನೆ**=ಲಕ್ಷ್ಮಣ, ದಟ್ಟವಾದ ಕಾಡಿನಲ್ಲಿ ನನ್ನನ್ನು ಬಿಟ್ಟು ಬಾ ಎಂದು ನಿನಗೆ ಅಪ್ಪಣೆ ಮಾಡಿದನೆ; ಕಣ್+ಬಟ್ಟೆ+ಕೆಟ್ಟನೇ; ಬಟ್ಟೆ=ದಾರಿ; ಕಣ್ಬಟ್ಟೆ=ಕಣ್ಣ ಮುಂದಿನ ದಾರಿ; ಕೆಡು=ನಾಶವಾಗು/ಇಲ್ಲವಾಗು; **ತಾನು ಎನ್ನ ಕಣ್ಬಟ್ಟೆಗೆಟ್ಟನೇ**=ಅವನು ನನ್ನ ಬದುಕಿನ ದಾರಿಯನ್ನು ಕಾಣದಂತೆ ಮಾಡಿದನೆ; ಜೀವನದಲ್ಲಿ ಇನ್ನು ಮುಂದೆ ಒಳ್ಳೆಯದನ್ನು ನೋಡದಂತೆ ಮಾಡಿದನೆ; ವಲ್ಲಭ=ಗಂಡ; **ಮನೋವಲ್ಲಭನನು ಅಗಲ್ದು**=ಮನಮೆಚ್ಚಿದ ಗಂಡನಿಂದ ದೂರವಾಗಿ; ನೆಟ್ಟನೆ=ಒಬ್ಬಂಟಿಯಾಗಿ/ಯಾರ ನೆರವು ಇಲ್ಲದೆ; ಎಂತು+ಇಹೆನೊ; ಇಹೆನೊ=ಇರುವೆನೊ;

ಅಡವಿಯೊಳು ನೆಟ್ಟನೆ ಪಿಶಾಚದವೊಲು ಎಂತಿಹೆನೊ=ಕಾಡಿನಲ್ಲಿ ಒಬ್ಬಂಟಿಯಾಗಿ ದೆವ್ವದಂತೆ ಹೇಗೆ ತಾನೆ ಇರುವೆನೊ; **ಕೆಟ್ಟೆನಲ್ಲಾ ಎಂದು ಅಬಲೆ ಒರಲ್ದಳು**=ನನ್ನ ಜೀವನ ಹಾಳಾಯಿತಲ್ಲಾ ಎಂದು ಸೀತೆ ಸಂಕಟದಿಂದ ನರಳತೊಡಗಿದಳು; ಕೌಶಿಕಮುನಿಪನ+ಒಡನೆ; ಕೌಶಿಕ=ವಿಶ್ವಾಮಿತ್ರ; ಎಂದು= ಯಾವಾಗ/ಯಾವ ದಿನ; ಮಿಥಿಲಾಪುರ=ಸೀತೆಯ ತಂದೆಯಾದ ಜನಕ ಮಹಾರಾಜನ ರಾಜಧಾನಿ; ಹರ=ಶಿವ; ಧನು=ಬಿಲ್ಲು; ಮುರಿ=ತುಂಡುಮಾಡು; ರಮಿಸು=ಆನಂದವನ್ನು ಪಡೆದನು; **ಕೌಶಿಕಮುನಿಪನೊಡನೆ ಎಂದು ಮಿಥಿಲಾಪುರಕ್ಕೆ ಬಂದು ಹರಧನುವ ಮುರಿದು ಎನ್ನನು ಮದುವೆಯಾದನು, ಅಂದು ಮೊದಲಾಗಿ ಎನ್ನೊಳು ರಮಿಸಿದನು**=ವಿಶ್ವಾಮಿತ್ರಮುನಿಯೊಡನೆ ಯಾವಾಗ ಮಿಥಿಲಾಪುರಕ್ಕೆ ಬಂದು ನನ್ನ ಮದುವೆಗೆ ಪಣವಾಗಿ ಇಟ್ಟಿದ್ದ ಶಿವನ ಬಿಲ್ಲನ್ನು ಮುರಿದು ನನ್ನನ್ನು ಮದುವೆಯಾದನೊ, ಅಂದಿನಿಂದ ಮೊದಲುಗೊಂಡು ನನ್ನೊಡನೆ ಒಲವು ನಲಿವು ನೆಮ್ಮದಿಯಿಂದ ಇದ್ದನು; **ಆನ್ ಅಗಲ್ದೊಡೆ**=ರಾವಣನು ನನ್ನನ್ನು ಅಪಹರಿಸಿ ಲಂಕೆಗೆ ಎಳೆದೊಯ್ದಾಗ;

ನವೆದನ್+ಅಲ್ಲದೆ; ನವೆ=ಕೊರಗು/ಬಡವಾಗು; ಒಂದು=ಪಡೆ/ಹೊಂದು; **ತಾನು ನವೆದನಲ್ಲದೆ ಒಂದಿದನೆ ಸೌಖ್ಯಮನ್**=ತಾನು ಬಹಳವಾಗಿ ಕೊರಗಿ ಬಡವಾದನಲ್ಲದೆ, ಸುಖವನ್ನು ಹೊಂದಿದನೆ; ವೃಂದ=ಗುಂಪು; ನೆರಪು=ಕೂಡಿಸು/ಸೇರಿಸು; ದೈತ್ಯ=ರಕ್ಕಸ; **ರಾಮನು ಎನಗಾಗಿ ಕಪಿವೃಂದಮನ್ ನೆರಪಿ, ಕಡಲನು ಕಟ್ಟಿ, ದೈತ್ಯರನು ಕೊಂದು**=ನನ್ನನ್ನು ರಾವಣನ ಸೆರೆಯಿಂದ

ಬಿಡಿಸುವುದಕ್ಕಾಗಿ ಕಪಿಗಳ ಗುಂಪನ್ನು ಕೂಡಿಸಿ, ಕಡಲಿಗೆ ಸೇತುವೆಯನ್ನು ಕಟ್ಟಿ, ರಕ್ಕಸರನ್ನು ಕೊಂದು; ಅಗ್ನಿಮುಖ=ಬೆಂಕಿಯ ಕುಂಡ; **ಅಗ್ನಿಮುಖದೊಳು ಪರೀಕ್ಷಿಸಿದನು**=ಲೋಕದ ಕಣ್ಣಿನಲ್ಲಿ ನಾನು ಶೀಲವತಿ ಎಂಬುದನ್ನು ನಿರೂಪಿಸುವುದಕ್ಕಾಗಿ ಬೆಂಕಿಯ ಕುಂಡವನ್ನು ನಾನು ಪ್ರವೇಶಿಸುವಂತೆ ಮಾಡಿದನು; ಕಾಣಿಸು=ತೋರಿಸು; **ಎನ್ನೊಳು ಅಪರಾಧಮನ್ ಕಾಣಿಸಿದನೇ**= ನನಗಾಗಿ ಇಷ್ಟೆಲ್ಲಾ ಸಂಕಟಗಳನ್ನು ಮತ್ತು ಸವಾಲುಗಳನ್ನು ಎದುರಿಸಿ ಗೆದ್ದಿದ್ದ ರಾಮನು, ಇದೀಗ ನನ್ನ ಮೇಲೆ ತಪ್ಪನ್ನು ಹೊರಿಸಿದನೆ; ಮುಳ್ಳು+ಇಡಿದ; ಇಡಿದ=ತುಂಬಿದ; ಅಂದು=ಆಗ; ಉಪಚರಿಸು=ಸೇವೆ ಮಾಡು;

ಕಲ್ಲು ಮುಳ್ಳಿಡಿದ ಕಾಡೊಳು ಅಂದು ಎನ್ನನು ಉಪಚರಿಸಿ=ಹದಿನಾಲ್ಕು ವರುಶದ ವನವಾಸದಲ್ಲಿ ಸಮಯದಲ್ಲಿ ಕಲ್ಲುಮುಳ್ಳುಗಳಿಂದ ಕಿಕ್ಕಿರಿದು ತುಂಬಿದ್ದ ಕಾಡಿನಲ್ಲಿ ನನ್ನನ್ನು ಕಾಪಾಡಿ ಸೇವೆಯನ್ನು ಮಾಡಿ; ಪಲ್+ಮೊರೆದು; ಪಲ್=ಹಲ್ಲು; ಮೊರೆದು=ಅಬ್ಬರಿಸಿ; ವಿರಾಧ=ಒಬ್ಬ ರಕ್ಕಸ; ಮರ್ದಿಸು=ಕೊಲ್ಲು; **ಪಲ್ಮೊರೆದು ಗರ್ಜಿಪ ವಿರಾಧನನು ಮರ್ದಿಸಿದೆ**=ಹಲ್ಲನ್ನು ಮಸೆದು ಅಬ್ಬರಿಸುತ್ತ ನನ್ನನ್ನು ತಿನ್ನಲು ಬರುತ್ತಿದ್ದ ವಿರಾಧನೆಂಬ ರಕ್ಕಸನನ್ನು ಕೊಂದೆ;ಬಲ್ಮೆ+ಇಮ್; ಬಲ್ಮೆ=ಒತ್ತಾಯ; ಇಮ್=ಇಂದ; ಜನಸ್ಥಾನ= ವನವಾಸದ ಸಮಯದಲ್ಲಿ ಸೀತೆಯು ಅಪಹರಣಗೊಂಡಾಗ ಸೀತಾರಾಮ ಲಕ್ಷ್ಮಣರು ವಾಸಿಸುತ್ತಿದ್ದ ಕಾಡಿನ ನೆಲೆಯ ಹೆಸರು; **ರಾಘವನ ಬಳಿಗೆ ಬಲ್ಮೆಯಿಮ್ ನಾನು ಕಳುಹಿದೊಡೆ ಜನಸ್ಥಾನದಿಂದೆ ಹೋದೆ**="ಓ... ಲಕ್ಷ್ಮಣಾ... ಓ... ಸೀತಾ" ಎಂಬ ಮಾರೀಚನ ಮಾಯಾದನಿಯನ್ನು ಕೇಳಿ, ನಾನು ಬಯಸಿದ ಜಿಂಕೆಯನ್ನು ಹಿಡಿಯಲು ಹೋಗಿದ್ದ ರಾಮನು ಅಪಾಯಕ್ಕೆ ಸಿಲುಕಿದನೆಂದು ಹೆದರಿ, ನಿನ್ನನ್ನು ರಾಮನ ಬಳಿಗೆ ಹೋಗಲೇಬೇಕೆಂದು ಹಟ ಹಿಡಿದಾಗ, ನನ್ನನ್ನು ಒಬ್ಬಂಟಿಯಾಗಿ ಬಿಟ್ಟುಹೋಗಲು ಮನಸ್ಸಿಲ್ಲದಿದ್ದರೂ ನನ್ನ ಮಾತಿಗೆ ಎದುರಾಡದೆ ಜನಸ್ಥಾನಕ್ಕೆ ಹೋದೆ;

ನಲ್ಮೆ+ಅಮ್; ನಲ್ಮೆ=ಪ್ರೀತಿ/ಒಳಿತು; **ಸೌಮಿತ್ರಿ, ನಲ್ಮೆಯಮ್ ಮರೆದಪೆನೆ**= ಲಕ್ಷ್ಮಣ, ಜೀವನದ ಉದ್ದಕ್ಕೂ ನೀನು ನನಗೆ ಮತ್ತು ರಾಮನಿಗೆ ತೋರಿದ ಪ್ರೀತಿ, ಕರುಣೆ ಮತ್ತು ವಿಶ್ವಾಸವನ್ನು ನಾನು ಮರೆಯುತ್ತೇನೆಯೇ; ಒಲ್ಮೆ=ಪ್ರೀತಿ; ಮೈದುನ=ಗಂಡನ ತಮ್ಮ; **ನೀನು ಎಲ್ಲರ ಒಲ್ಮೆ ಮೈದುನನೆ ತನಗೆ**=ಎಲ್ಲರ ಒಳಿತಿಗಾಗಿ ಶ್ರಮಿಸುವ ನೀನು ನನ್ನ ಪಾಲಿನ ಪ್ರೀತಿಯ ಮೈದುನನಾಗಿರುವೆ; ನಿಲಿಸು=ನಿಲ್ಲಿಸಲು; ಮಿಡಿ=ಹೊಮ್ಮಿಸು; ತಂದೆ=ಲಕ್ಷ್ಮಣನು ಸೀತೆಯ ಪಾಲಿಗೆ

ಕೇವಲ ಮೈದುನ ಮಾತ್ರ ಆಗಿರಲಿಲ್ಲ. ತಂದೆಯ ಜಾಗದಲ್ಲೂ ಇದ್ದು ಸೀತಾರಾಮರನ್ನು ನೋಡಿಕೊಳ್ಳುತ್ತಿದ್ದ;

ಕಾನನದೊಳು ಎನ್ನ ನಿಲಿಸಲು ಮನಮ್ ಬಂದಪುದೆ ತಂದೆ ನಿನಗೆ ಎಂದು ಅಂಬುಜಾಕ್ಷಿ ಕಂಬನಿ ಮಿಡಿದಳು=ಕಾಡಿನಲ್ಲಿ ನನ್ನನ್ನು ಈ ರೀತಿ ತಂದು ನಿಲ್ಲಿಸಲು ನಿನಗೆ ಮನಸ್ಸಾದರೂ ಹೇಗೆ ಬಂದಿತು ತಂದೆ ಎಂದು ನುಡಿಯುತ್ತ ಸೀತೆಯು ಕಂಬನಿ ಕರೆದಳು; **ತೊಳೆವ ನಾಸಿಕದ**=ಕಾಂತಿಯಿಂದ ಕೂಡಿರುವ ಮೂಗಿನ; **ನುಣ್ ಕದಪುಗಳ**=ನುಣ್ಣನೆಯ ಕೆನ್ನೆಗಳ; **ಪೊಳೆವ ಕಂಗಳ**=ಹೊಳೆಯುವ ಕಣ್ಣುಗಳ; **ತುರುಗಿದ ಎವೆಯ**=ಒತ್ತಾಗಿರುವ ಕಣ್ಣಿನ ರೆಪ್ಪೆಯ; ನಿಡಿದಾದ+ಪುರ್ಬು; ನಿಡಿದು=ಉದ್ದವಾದುದು; ಪುರ್ಬು=ಹುಬ್ಬು; **ನಿಡುಪುರ್ಬುಗಳ**=ಉದ್ದನೆಯ ಹುಬ್ಬುಗಳ; ಪೆರೆ=ಚಂದ್ರ; ನೊಸಲು=ಹಣೆ; **ಪೆರೆನೊಸಲ**=ಚಂದ್ರನಂತೆ ಪ್ರಕಾಶಮಾನವಾದ ಹಣೆಯನ್ನುಳ್ಳ; **ಥಳಥಳಿಪ ಮಕುಟದ**=ಮಿರುಗುತ್ತಿರುವ ಕಿರೀಟದ; ಮಕರ=ಮೀನು; ಕುಂಡಲ=ಕಿವಿಗೆ ತೊಡುವ ಓಲೆ; **ಕಿವಿಯ ಮಕರಕುಂಡಲದ**=ಕಿವಿಯಲ್ಲಿ ತೊಟ್ಟಿರುವ ಮೀನಿನ ಆಕಾರದ ಓಲೆಯ; ಕೋಮಲಿತ=ರಮಣೀಯವಾದ/ಸುಂದರವಾದ; ಚುಬುಕ+ಅಗ್ರದ; ಚುಬುಕ=ಗಲ್ಲ; ಅಗ್ರ=ತುದಿ; **ಕೋಮಲಿತ ಚುಬುಕಾಗ್ರದ**=ಸುಂದರವಾದ ಗಲ್ಲದ; ಲಲಿತ+ಅರುಣ; ಲಲಿತ=ಚೆಲುವು/ಮನೋಹರವಾದುದು; ಅರುಣ=ಕೆಂಪು ಬಣ್ಣ; ಅಧರ=ತುಟಿ; **ಲಲಿತಾರುಣ ಅಧರದ**=ಚೆಲುವಾದ ಕೆಂಪನೆಯ ತುಟಿಯ; ಮಿರುಗು=ಕಾಂತಿ/ಹೊಳಪು; ರದನ=ಹಲ್ಲು; ಪಂಕ್ತಿ=ಸಾಲು; **ಮಿರುಗುವ ರದನಪಂಕ್ತಿಗಳ**=ಹೊಳೆಯುವ ಹಲ್ಲುಗಳ ಸಾಲಿನ; ಸೂಸು=ಚಿಮ್ಮು/ಎಸೆ; ಎಳೆನಗೆ=ಮುಗುಳ್ನಗೆ; **ಸೂಸುವ ಎಳೆನಗೆಯ**=ಚಿಮ್ಮುತ್ತಿರುವ ಮುಗುಳ್ನಗೆಯ;

ಒಬ್ಬುಳಿ+ಎನಿಪ; ಒಬ್ಬುಳಿ=ಗುಂಪು/ಸಮೂಹ; ಎನಿಪ=ಎನಿಸುವ; **ಮೋಹನದ ಚೆಲ್ವಿನ ಒಬ್ಬುಳಿಯೆನಿಪ**=ನೋಡಿದವರ ಕಣ್ಮನವನ್ನು ಸೆಳೆಯುವಂತಿರುವ ಚೆಲುವಿನ ಆಗರವಾದ; ಸಿರಿಮೊಗ=ಸುಂದರವಾದ ಮೊಗ; ಮಾಣ್=ಸುಮ್ಮನಿರು; **ರಾಘವನ ಸಿರಿಮೊಗವನು ಅಕಟ ಎಂತು ನೋಡದೆ ಮಾಣ್ಬೆನು**=ರಾಮನ ಸುಂದರವಾದ ಮೊಗವನ್ನು ನೋಡದೆ, ಅಯ್ಯೋ... ಹೇಗೆ ತಾನೇ ಇರುವೆನು; ಭುವನ+ಅಭಿರಾಮು; ಭುವನ=ಪ್ರಪಂಚ/ಲೋಕ; ರಾಮನನು=ರಾಮನನ್ನು; ಅಭಿರಾಮ=ಸುಂದರವಾದ; **ಭುವನಾಭಿರಾಮನನು**=ಜಗತ್ತಿನಲ್ಲಿಯೇ ಸುಂದರನಾಗಿರುವವನನ್ನು; ಗುಣರತ್ನ=ಒಳ್ಳೆಯ ನಡೆನುಡಿ;

ಧಾಮ=ನೆಲೆ/ಜಾಗ; **ಗುಣರತ್ನಧಾಮನನು**=ಒಳ್ಳೆಯ ನಡೆನುಡಿಗಳಿಗೆ ನೆಲೆಯಾದವನನ್ನು; ರಘು+ಕುಲ+ಉದ್ದಾಮ; ಉದ್ದಾಮ=ಉತ್ತಮವಾದ; **ರಘುಕುಲೋದ್ದಾಮನನು**=ರಘುವಂಶದಲ್ಲಿಯೇ ಉತ್ತಮನಾದವನನ್ನು; ಜಿತ=ಜಯಸಲ್ಪಟ್ಟುದ್ದು/ಗೆದ್ದದ್ದು; ಕಾಮ=ಪ್ರೇಮದೇವತೆಯ ಹೆಸರು;

ರೂಪಜಿತಕಾಮನನು=ರೂಪದಲ್ಲಿ ಕಾಮದೇವನಿಗಿಂತಲೂ ಸುಂದರನಾಗಿರುವವನು ಎಂಬ ರೂಪಕದ ತಿರುಳಿನಲ್ಲಿ ಈ ನುಡಿಗಟ್ಟು ಬಳಕೆಯಾಗಿದೆ; ಸತ್ಕೀರ್ತಿ=ಒಳ್ಳೆಯ ಹೆಸರು; ಕಾಮ=ಆಸೆ/ಬಯಕೆ/ಹಂಬಲ; **ಸತ್ಕೀರ್ತಿ ಕಾಮನನು**=ಒಳ್ಳೆಯ ಹೆಸರನ್ನು ಪಡೆಯಬೇಕೆಂಬ ಹಂಬಲವುಳ್ಳವನನ್ನು; ಶರಣಜನ=ಆಶ್ರಯವನ್ನು ಕೋರಿ ಬರುವ ಜನರು; ವಾರ್ಧಿ=ಸಾಗರ/ಕಡಲು; **ಶರಣಜನವಾರ್ಧಿಯನು**=ತನ್ನ ಆಶ್ರಯವನ್ನು ಕೋರಿಬಂದವರ ಪಾಲಿಗೆ ಸಾಗರದಂತಿರುವವನನ್ನು, ಅಂದರೆ ಅವರನ್ನು ಚೆನ್ನಾಗಿ ಕಾಪಾಡುವವನನ್ನು; ಮಿಗೆ=ಚೆನ್ನಾಗಿ; ಪೆರ್ಚು=ದೊಡ್ಡದಾಗು; ಸೋಮ=ಚಂದ್ರ; **ಮಿಗೆ ಪೆರ್ಚಿಪ ಸೋಮನನು**=ದಿನೇ ದಿನೇ ಹೆಚ್ಚಾಗುವ ಚಂದ್ರನಂತಿರುವವನನ್ನು; **ಸೌಭಾಗ್ಯ ಸೋಮನನು**=ಮಂಗಳವನ್ನು ಉಂಟುಮಾಡುವ ಚಂದ್ರನಂತಿರುವವನನ್ನು; ಕುವಲಯ=ನೀಲಿಯ ತಾವರೆ; ಶ್ಯಾಮ=ಕಡು ನೀಲಿಬಣ್ಣ; **ಕುವಲಯ ಶ್ಯಾಮನನು**=ನೀಲಿಯ ತಾವರೆಯ ಬಣ್ಣದ ದೇಹವುಳ್ಳವನನ್ನು; **ನಿಜತನುಶ್ಯಾಮನನು**=ಕಡುನೀಲಿಯ ದೇಹವುಳ್ಳವನನ್ನು; ಘನ=ದೊಡ್ಡ; ಪುಣ್ಯ=ಒಳ್ಳೆಯ ನಡೆನುಡಿಯಿಂದ ವ್ಯಕ್ತಿಯು ಗಳಿಸುವುದು; ನಾಮ=ಹೆಸರು; ಸಂತತ=ಸದಾಕಾಲ/ಯಾವಾಗಲೂ; ನಾ=ನಾನು; ಮನಮ್+ತಣಿಯೆ; ತಣಿ=ತೃಪ್ತಿಹೊಂದು/ಸಮಾಧಾನಗೊಳ್ಳು; ರಮಿಸು=ಆನಂದಪಡು; ಎಂತು=ಹೇಗೆ;

ಘನಪುಣ್ಯ ನಾಮನನು ಸಂತತಮ್ ನಾ ಮನಂದಣಿಯೆ ರಮಿಸದೆ ಎಂತು ಬಾಳ್ವೆನು=ಒಳ್ಳೆಯ ಹೆಸರನ್ನು ಪಡೆದಿರುವ ರಾಮನೊಡನೆ ಸದಾಕಾಲ ನನ್ನ ಮಯ್ ಮನವು ತಣಿಯುವಂತೆ ಜತೆಗೂಡಿ ಆನಂದಿಸದೆ ಯಾವ ರೀತಿ ಜೀವಿಸಲಿ; **ರಾಯ ಕೇಳು**=ಜನಮೇಜಯ ರಾಜನಿಗೆ ರಾಮಾಯಣದ ಕತೆಯನ್ನು ಜೈಮಿನಿ ಮುನಿಯು ಹೇಳುತ್ತಿದ್ದಾನೆ; ಇಂತು+ಇಂತು; ಇಂತು=ಈ ರೀತಿ; ರಮಣೀಯ=ಸುಂದರ/ಮನೋಹರ; ಗುಣಮಾಲೆ=ಬಹುಬಗೆಯ ಗುಣಗಳನ್ನು; ಹಂಬಲಿಸು=ಮೊರೆಯಿಡು/ಅಳು/ನೊಂದುಕೊಳ್ಳು; **ಇಂತಿಂತು ರಾಘವೇಶ್ವರನ ರಮಣೀಯ ಗುಣಮಾಲೆಯನು ನೆನೆನೆನೆದು ಹಂಬಲಿಸುತ**= ಈ

ರೀತಿ ನಾನಾಬಗೆಗಳಲ್ಲಿ ರಾಮನ ಮನೋಹರವಾದ ಗುಣಗಳೆಲ್ಲವನ್ನು ನೆನೆನೆನೆದು ನೊಂದುಕೊಳ್ಳುತ್ತ; ಆಯತ+ಅಂಬಕಿ; ಆಯತ= ವಿಶಾಲವಾದ; ಅಂಬಕ=ಕಣ್ಣು; ಆಯತಾಂಬಕಿ=ವಿಶಾಲವಾದ ಕಣ್ಣುಗಳನ್ನುಳ್ಳ ಸೀತೆ; **ಆಯತಾಂಬಕಿ ಮತ್ತೆ ಮೈಮರೆಯುತ ಎಚ್ಚರುತೆ**=ಸೀತೆಯು ತೀವ್ರವಾದ ಸಂಕಟದಲ್ಲಿ ತೊಳಲಾಡುತ್ತ ಮತ್ತೆ ಮತ್ತೆ ಎಚ್ಚರತಪ್ಪುತ್ತ, ಮತ್ತೆ ಮತ್ತೆ ಎಚ್ಚರಗೊಳ್ಳುತ್ತ;

ಪಾವ್=ಹಾವು; ಅಗಿ=ಕಚ್ಚು; ಪಸುಳೆ+ವೊಲು; ಪಸುಳೆ=ಮಗು; ಇರೆ=ಇರಲು; **ಪಾವ್ ಅಗಿದ ಪಸುಳೆವೊಲು ಇರೆ**=ಹಾವು ಕಚ್ಚಿದ ಮಗುವಿನಂತಿರಲು ಅಂದರೆ ತನ್ನ ಒಡಲಿನಲ್ಲಿ ಬೇಯುತ್ತಿರುವ ಸಂಕಟವನ್ನು ಹೇಳಿಕೊಳ್ಳಲಾರದೆ ಮೂಕಳಾಗಿರಲು; **ತಾಯೆ ನಿನ್ನನು ಬಿಟ್ಟು ಹೋಗಲಾರೆನು**= ತಾಯೆ, ನಿನ್ನನ್ನು ಕಾಡಿನಲ್ಲಿ ಒಬ್ಬಂಟಿಯಾಗಿ ಬಿಟ್ಟು ಹೋಗುವುದಕ್ಕೆ ನನ್ನಿಂದ ಆಗುತ್ತಿಲ್ಲ; ಅವಸ್ಥೆ=ಇರುವಿಕೆ; **ಪೋಗದೆ ಈ ಅವಸ್ಥೆಯೊಳು ಇರ್ದೊಡೆ**= ಅಯೋಧ್ಯೆಗೆ ಹಿಂತಿರುಗದೆ ನಿನ್ನೊಡನೆಯೇ ಇದ್ದರೆ; **ಏಗೈದಪನೊ**=ಏನು ಮಾಡುವನೊ; ಶೋಕ+ಗದ್ಗದನ್+ಆಗೆ; ಶೋಕ=ಸಂಕಟ; ಗದ್ಗದ= ಮಾತನಾಡುವಾಗ ತುಂಬಾ ಸಂಕಟದಿಂದ ಗಂಟಲು ಕಟ್ಟಿದಂತಾಗುವುದು; ಆಗೆ=ಆಗಲು; **ಅಣ್ಣನು ಏಗೈದಪನೊ... ಹಾ... ಎಂದು ಲಕ್ಷ್ಮಣನು ಶೋಕಗದ್ಗದನಾಗೆ**=ಅಣ್ಣನು ಏನನ್ನು ಮಾಡುತ್ತಾನೆಯೋ... ಹಾ... ಎಂದು ಗೋಳಾಡುತ್ತಿರುವ ಲಕ್ಷ್ಮಣನ ಗಂಟಲು ಕಟ್ಟಿದಂತಾಗಲು;

ಮಗುಳ್=ಪುನಹ/ಮತ್ತೆ; ಇಂತು+ಎಂದಳು; **ಸೀತೆ ಮಗುಳ್ ಇಂತೆಂದಳು**=ಸೀತೆಯು ಮತ್ತೆ ಲಕ್ಷ್ಮಣನನ್ನು ಕುರಿತು ಈ ರೀತಿ ಹೇಳಿದಳು; **ತಂದೆ ಲಕ್ಷ್ಮಣ, ನಿನ್ನೊಳು ಎಂದೊಡೆ ಇನ್ನೇನು ಅಹುದು**=ತಂದೆ ಲಕ್ಷ್ಮಣ, ನಿನ್ನೊಡನೆ ನನ್ನ ಸಂಕಟವನ್ನು ಹೇಳಿಕೊಂಡರೆ, ಏನು ತಾನೆ ಪ್ರಯೋಜನ. ಅಂದರೆ ನೀನು ಅಣ್ಣನ ಮಾತನ್ನು ಮೀರಿ ನಡೆಯುವುದಿಲ್ಲ;ಅಂದ=ರೀತಿ/ ಹಾಗೆ; ಪೋಗು=ಹೋಗು; **ನೀನು ಹಿಂದಣ ಜನಸ್ಥಾನದ ಅಂದದೊಳು ಪೋಗು**=ವನವಾಸದ ಸನ್ನಿವೇಶದಲ್ಲಿ ನಿನ್ನನ್ನು ನಾನು ಜನಸ್ಥಾನದಿಂದ ಒತ್ತಾಯಪೂರ್ವಕವಾಗಿ ಕಳುಹಿಸಿದ್ದಾಗ, ನನ್ನನ್ನು ಒಬ್ಬಂಟಿಗಳನ್ನಾಗಿ ಬಿಟ್ಟು ಹೋಗಿದ್ದಂತೆ ಈಗಲೂ ಇಲ್ಲಿಂದ ತೆರಳು; ಬೆಂದ+ಒಡಲ್+ಒಳು; ಬೆಂದ= ಸಂಕಟದಿಂದ ಕೂಡಿರುವ; ಒಡಲ್=ದೇಹ/ಮಯ್; ಬಸಿರು= ಹೊಟ್ಟೆಯಲ್ಲಿ ಮಗುವು ಇರುವುದು; ದಂದುಗ=ತೊಡಕು/ಸಿಕ್ಕು/ತೊಂದರೆ; ಬಸಿರ

ದಂದುಗ=ಮಗುವನ್ನು ಹಡೆಯುವ ಕರುಳ ನಂಟು; **ಕೊಂದುಕೊಂಬೊಡೆ ತನ್ನ ಬೆಂದೊಡಲೊಳು ಬಸಿರ ದಂದುಗಮ್ ಇದೆ**=ಆತ್ಮಹತ್ಯೆಯನ್ನು ಮಾಡಿಕೊಳ್ಳೋಣವೆಂದರೆ ಸಂಕಟದಿಂದ ಬೇಯುತ್ತಿರುವ ತನ್ನ ಒಡಲಲ್ಲಿ ಹಡೆಯಲಿರುವ ಮಗುವಿದೆ;

ಆನ್ ಇಂದು ಕಾನನದೊಳು ಬಂದುದನು ಕಾಣ್ಬೆನು=ನಾನು ಇಂದಿನಿಂದ ಕಾಡಿನಲ್ಲಿ ಉಂಟಾಗುವ ಎಲ್ಲ ತೊಡಕುಗಳನ್ನು ಎದುರಿಸುತ್ತೇನೆ; ಅಡಿ=ಪಾದ; **ಕೌಸಲೆ ಅಡಿಗೆ ವಂದಿಸಿದೆನು**=ರಾಮನ ತಾಯಿಯೂ ಮತ್ತು ನನ್ನ ಅತ್ತೆಯವರಾದ ಕೌಸಲ್ಯಾದೇವಿಯವರ ಪಾದಕ್ಕೆ ನಮಿಸುತ್ತೇನೆ; ಒರೆ=ಹೇಳು; ಮೃಗ+ಅಕ್ಷಿ; ಮೃಗ=ಜಿಂಕೆ; ಅಕ್ಷಿ=ಕಣ್ಣು; ಮೃಗಾಕ್ಷಿ=ಜಿಂಕೆಯ ಕಣ್ಣುಗಳಂತಹ ಕಣ್ಣುಗಳನ್ನು ಉಳ್ಳವಳು/ಸೀತೆ; ಅಳಲ್ದಳು=ಸಂಕಟಪಟ್ಟಳು; **ಅಪರಾಧಮ್ ಒಂದುಮ್ ಇಲ್ಲದೆ ತನ್ನ ಕಂದನು ಎನ್ನನು ತೊರೆದುದನು ದೇವಿಗೆ ಒರೆವುದು ಎನುತ ಅಂದು ಮೃಗಾಕ್ಷಿ ಅಳಲ್ದಳು**=ಯಾವುದೇ ಒಂದು ತಪ್ಪನ್ನು ಮಾಡದಿದ್ದರೂ, ಅವರ ಮಗನಾದ ರಾಮನು ನನ್ನನ್ನು ತೊರೆದುದನ್ನು ದೇವಿಗೆ ಹೇಳುವುದು ಎನ್ನುತ್ತ ಸೀತೆಯು ಶೋಕಿಸಿದಳು; **ಏಕೆ ನಿಂದಿಹೆ ಪೋಗು ಸೌಮಿತ್ರಿ**=ಏಕೆ ನಿಂತಿರುವ ಹೋಗು ಲಕ್ಷ್ಮಣ; ತಳುವು=ತಡಮಾಡು; ಕಾಕುತ್ಸ್ಥ=ಕಾಕುತ್ಸ್ಥ ಎಂಬ ಹೆಸರಿನ ವಂಶದಲ್ಲಿ ಹುಟ್ಟಿದವನು/ರಾಮ; **ಇಲ್ಲಿ ತಳುವಿದೊಡೆ ಕಾಕುತ್ಸ್ಥನು ಕೋಪಿಸನೆ**=ಹಿಂತಿರುಗಿ ಹೋಗುವುದರಲ್ಲಿ ನೀನು ತಡಮಾಡಿದರೆ ರಾಮನು ಕೋಪಿಸಿಕೊಳ್ಳುವುದಿಲ್ಲವೇ; ಉಗ್ರಜಂತು=ಕ್ರೂರಪ್ರಾಣಿ; ನೆರ+ಉಂಟು; ನೆರ=ಸಹಾಯ/ಒತ್ತಾಸೆ/ಆಸರೆ;

ತನಗೆ ಈ ಕಾಡೊಳು ಉಗ್ರಜಂತುಗಳಲ್ಲಿ ನೆರವುಂಟು=ನನಗೆ ಈ ಕಾಡಿನಲ್ಲಿ ಕ್ರೂರವಾದ ಪ್ರಾಣಿಪಕ್ಷಿಗಳ ಒತ್ತಾಸೆಯಿದೆ. ಅಂದರೆ ಅವು ನನ್ನ ಒಡನಾಡಿಯಾಗಿವೆ; ಏಕಾಕಿ+ಆಗಿ+ಇರ್ಪನು; ಏಕಾಕಿ=ಒಬ್ಬಂಟಿಗ; ಇರ್ಪನು=ಇರುವನು; **ರಘುನಾಥನು ಏಕಾಕಿಯಾಗಿರ್ಪನು**=ಅಯೋಧ್ಯೆಯಲ್ಲಿ ರಾಮನು ಒಬ್ಬಂಟಿಗನಾಗಿದ್ದಾನೆ; ಏಗೈವೊಡಮ್=ಏನನ್ನು ಮಾಡಿದರೂ; **ಲೋಕದ ಅರಸು ಏಗೈವೊಡಮ್**=ಲೋಕದ ಅರಸು ಏನನ್ನು ಮಾಡಿದರೂ; ಕಿಂಕರ=ಆಳು/ಸೇವಕ; ಬೇಕುಬೇಡ+ಎಂದು; ಬೇಕುಬೇಡ=ಇದೊಂದು ನುಡಿಗಟ್ಟು. ಈ ಕೆಲಸ ಸರಿಯಾಗಿದೆ. ಆದ್ದರಿಂದ ಇದು ಬೇಕು. ಈ ಕೆಲಸ ಸರಿಯಾಗಿಲ್ಲ. ಆದ್ದರಿಂದ ಇದು ಬೇಡ ಎಂಬ ವಿವೇಕದ ನಿಲುವು; **ತನ್ನ ಕಿಂಕರರು ಬೇಕುಬೇಡೆಂದು ಪೇಳರೆ**=ರಾಜನ ಸೇವಕರು ಅಂದರೆ ರಾಜನಿಗೆ

ಆತ್ಮೀಯರಾದವರು "ರಾಜನೇ, ಒಳಿತಿನ ಕೆಲಸವನ್ನು ಮಾಡು. ಕೇಡಿನ ಕೆಲಸವನ್ನು ಮಾಡಬೇಡ" ಎಂಬ ವಿವೇಕದ ಮಾತುಗಳನ್ನು ಹೇಳುವುದಿಲ್ಲವೇ; **ಭರತ ಶತ್ರುಘ್ನರು ಈ ಕೆಲಸಕೆ ಒಪ್ಪಿದರೆ**=ಭರತ ಶತ್ರುಘ್ನರು ನನ್ನನ್ನು ತೊರೆಯುವ ಈ ಕೆಲಸಕ್ಕೆ ಒಪ್ಪಿದರೆ; ಅಬಲೆ=ಹೆಂಗಸು;

ಹನುಮಂತನು ಇರ್ದಪನೆ ಪೇಳು ಎಂದು ಅಬಲೆ ಅಳಲ್ದಳು=ರಾಮನು ಇಂತಹ ಕ್ರೂರ ತೀರ್ಮಾನವನ್ನು ಕಯ್ಗೊಂಡಾಗ ಹನುಮಂತನು ಅಲ್ಲಿ ಇದ್ದನೆ ಹೇಳು ಎಂದು ಸೀತೆ ಶೋಕಿಸಿದಳು; ಮರುಳ್+ಆಟಮ್; ಮರುಳು=ಹುಚ್ಚು; ಆಟ=ವರ್ತನೆ; **ಇದು ತನ್ನ ಮರುಳಾಟಮ್**=ಇದೆಲ್ಲವೂ ನನ್ನ ಹುಚ್ಚು. ಅಂದರೆ "ನನ್ನ ಗಂಡನಾದ ರಾಮನು ನನ್ನನ್ನು ಬಹಳವಾಗಿ ಪ್ರೀತಿಸುತ್ತಿದ್ದನು. ನನ್ನ ಮೈದುನರು ಮತ್ತು ರಾಮನಿಗೆ ಆತ್ಮೀಯರಾದವರೆಲ್ಲರೂ ನನ್ನ ಬಗ್ಗೆಯು ಪ್ರೀತಿ ಕರುಣೆಯಿಂದ ಕೂಡಿದ್ದರು" ಎಂಬ ನನ್ನ ನಂಬಿಕೆಯೆಲ್ಲವೂ ಕೇವಲ ನನ್ನ ತಪ್ಪು ಕಲ್ಪನೆ; **ಆರ್ ಇರ್ದೊಡೆ ಏಗೈವರು**=ಯಾರು ಇದ್ದರೆ ತಾನೇ ಏನನ್ನು ಮಾಡುವರು; ತಮ್ಮನ್+ಐಸಲೆ; ಐಸಲೆ=ಅಲ್ಲವೇ; ಭೀರುಗಳನ್+ಅರಿಪನೆ; ಭೀರು=ಹೆದರಿಕೆಯುಳ್ಳ ವ್ಯಕ್ತಿ/ಅಂಜಿಕೆಯುಳ್ಳ ವ್ಯಕ್ತಿ/ಅಬಲೆಯಾದ ಹೆಂಗಸು ಎಂಬ ರೂಪಕದ ತಿರುಳು; ಅರಿ=ತಿಳಿ; ಅರಿದಪನೆ=ತಿಳಿಯುತ್ತಾನೆಯೆ; **ಆ ರಾವಣನ ತಮ್ಮನೈಸಲೆ ವಿಭೀಷಣನು ಭೀರುಗಳನರಿದಪನೆ**=ವಿಭೀಷಣನು ಆ ರಾವಣನ ತಮ್ಮನಲ್ಲವೇ. ಹೆಂಗಸರ ಸಂಕಟವು ಅವನಿಗೆ ಹೇಗೆ ತಾನೆ ತಿಳಿಯುತ್ತದೆ. ಅಂದರೆ ಹೆಂಗಸರ ಬಗ್ಗೆ ಕ್ರೂರವಾಗಿ ನಡೆದುಕೊಂಡಿದ್ದ ರಾವಣನ ಹಾಗೆಯೇ ಅವನ ತಮ್ಮನಲ್ಲಿಯೂ ಸಹಜವಾಗಿಯೇ ಹೆಂಗಸರ ಬಗ್ಗೆ ಕರುಣೆಯೆಂಬುದು ಇರುವುದಿಲ್ಲ;

ಉರೆ=ಅತಿಶಯವಾಗಿ; ಮುಳಿ=ಸಿಟ್ಟು/ಕೋಪ; ಸುಗ್ರೀವ=ಕಾಡಿನಲ್ಲಿ ನೆಲೆಸಿದ್ದ ವಾನರ ಬುಡಕಟ್ಟಿನ ರಾಜ;

ಸುಗ್ರೀವನ ಸೋದರ=ವಾಲಿ ಎಂಬ ಹೆಸರಿನ ವಾನರ ಬುಡಕಟ್ಟಿನ ರಾಜ; **ಸೋದರಂಗೆ ಉರೆ ಮುಳಿದ ಸುಗ್ರೀವನ್ ಎಂಬವಂಗೆ ಕಾರುಣ್ಯಮ್ ಇರ್ದಪುದೆ**= ಒಡಹುಟ್ಟಿದ ಅಣ್ಣನಾದ ವಾಲಿಯ ಬಗ್ಗೆ ಅತಿಯಾಗಿ ಕೋಪಗೊಂಡು ಅಣ್ಣನನ್ನೆ ರಾಮನಿಂದ ಕೊಲ್ಲಿಸಿದ ಸುಗ್ರೀವನ ಮನದಲ್ಲಿ ಕರುಣೆಯು ಇರುವುದೆ; ಅದು+ಆರ್+ಉಂಟು; ಆರು=ಯಾರು;

ದೇವಂಗೆ ಪೇಳುವರು ಮತ್ತುಳಿದ ಮಂತ್ರಿಗಳು ಅದಾರುಂಟು=ಇನ್ನುಳಿದ ಮಂತ್ರಿಗಳಲ್ಲಿ ರಾಮನಿಗೆ ತಿಳಿಯಹೇಳುವವರು ಯಾರು ತಾನೆ ಇದ್ದಾರೆ;

ಘೋರ+ಅಟವಿ; ಅಟವಿ=ಅಡವಿ/ಕಾಡು; ಕಳುಪುವೊಡೆ=ಕಳಿಸುವುದಕ್ಕೆ; ಒರಲ್=ಅರಚು/ಕೂಗಿಕೊಳ್ಳು/ಸಂಕಟಪಡು;

ಘೋರಾಟವಿಗೆ ಕಳಪುವೊಡೆ ನೀನು ಒಪ್ಪಿ ಕೊಂಡುಬಂದೆ. ಇನ್ನು ಒರಲ್ದೊಡೆ ಏನಹುದು=ನನ್ನನ್ನು ಭಯಂಕರವಾದ ಕಾಡಿಗೆ ಅಟ್ಟಬೇಕೆಂಬ ರಾಮನ ತೀರ್ಮಾನವನ್ನು ನೀನೇ ಒಪ್ಪಿಕೊಂಡು ಇಲ್ಲಿಗೆ ಕರೆದುಕೊಂಡು ಬಂದೆ ಎಂದ ಮೇಲೆ, ಇನ್ನು ನಾನು ಯಾವ ರೀತಿಯಲ್ಲಿ ಪ್ರಲಾಪಿಸಿದರೂ ಅದರಿಂದ ಪ್ರಯೋಜನವೇನು?; ಕರುಣಾ+ಆಳು; ಆಳು=ವ್ಯಕ್ತಿ; ಕರುಣಾಳು=ಕರುಣೆಯೆ ಮಯ್ ತಳೆದು ಬಂದಂತಿರುವ ವ್ಯಕ್ತಿ/ಅಪಾರವಾದ ಕರುಣೆಯ ಗುಣವುಳ್ಳವನು;

ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ... ಎನ್ನೊಳು ಅಪರಾಧಮುಂಟು=ನನ್ನ ಮತ್ತು ರಾಮನ ಬದುಕಿನಲ್ಲಿ ನಡೆದ ಆಗುಹೋಗುಗಳೆಲ್ಲವನ್ನೂ ಗಮನಿಸಿದರೆ ಕರುಣಾಳುವಾದ ರಾಮನ ನಡೆನುಡಿಯಲ್ಲಿ ಯಾವ ತಪ್ಪು ಇಲ್ಲ. ಹೆಣ್ಣಾಗಿ ಹುಟ್ಟಿರುವುದೇ ನನ್ನಲ್ಲಿರುವ ದೊಡ್ಡ ತಪ್ಪು. ಗಂಡಿನ ದಬ್ಬಾಳಿಕೆ, ಆಕ್ರಮಣ ಮತ್ತು ಹಲ್ಲೆಗೆ ನಿರಂತರವಾಗಿ ಗುರಿಯಾಗುವ ಕುಟುಂಬದ ವ್ಯವಸ್ಥೆಯಲ್ಲಿ ಹೆಣ್ಣಾಗಿ ಹುಟ್ಟುವುದೇ ಒಂದು ಅಪರಾಧವಾಗಿದೆ ಎಂಬ ತಿರುಳಿನಲ್ಲಿ ಈ ನುಡಿಗಳು ಬಳಕೆಯಾಗಿವೆ;

ಕಡು+ಪಾತಕ+ಅಮ್; ಕಡು=ಬಹಳ/ಅತಿ ಹೆಚ್ಚಿನ; ಪಾತಕ=ಪಾಪ/ಕೆಟ್ಟಕೆಲಸ/ ತಪ್ಪು; ಗೈದು=ಮಾಡಿ; ಸಂಭವಿಸು=ಹುಟ್ಟು: ಒಡಲು=ದೇಹ; ಪೊರೆ=ಕಾಪಾಡು; ಒಡಲನು ಪೊರೆವುದು=ಜೀವನವನ್ನು ನಡೆಸುವುದು;;

ಕಡುಪಾತಕಮ್ ಗೈದು ಪೆಣ್ಣಾಗಿ ಸಂಭವಿಸಿದ ಒಡಲನು ಪೊರೆವುದು= ಅತಿಹೆಚ್ಚಿನ ಪಾಪವನ್ನು ಮಾಡಿ ಹೆಣ್ಣಾಗಿ ಹುಟ್ಟಿಬಂದಿರುವ ನಾನು ಈ ನನ್ನ ಒಡಲನ್ನು ಕಾಪಾಡಿಕೊಳ್ಳಬೇಕಾಗಿದೆ; ಎನ್ನೊಳು=ನನ್ನಲ್ಲಿ;

ಸಾಕು ಇಲ್ಲಿರಲ್ಬೇಡ. ನಿಲ್ಲದಿರು. ನೀನು ನಡೆ ಪೋಗು=ಸಾಕು. ನೀನು ಇಲ್ಲಿರಬೇಡ. ನಿಲ್ಲಬೇಡ. ಇಲ್ಲಿಂದ ಹೊರಡು;

ಆರ್ತ=ಸಂಕಟ/ಅಳಲು/ವೇದನೆ; **ನಿನಗೆ ಮಾರ್ಗದೊಳು ಅಡಿಗಡಿಗೆ ಸುಖಮ್ ಆಗಲಿ ಎಂದು ಸೀತೆ ಕಂಬನಿಗಳನು ಮಿಡಿದು ಆರ್ತೆಯಾಗಿರಲು**=ನಿನಗೆ **ದಾರಿಯುದ್ದಕ್ಕೂ** ಯಾವುದೇ ಅಡೆತಡೆಗಳಾಗದಿರಲಿ ಎಂದು ಸೀತೆಯು ಕಣ್ಣೀರನ್ನು ಹಾಕುತ್ತ, ಸಂಕಟದಿಂದ ನರಳುತ್ತಿರಲು; ವಿಪಿನ=ಕಾಡು; ಅಭಿಮಾನಿ= ಪ್ರೀತಿಯುಳ್ಳವನು; ವಿಪಿನದ ಅಭಿಮಾನಿಗಳು=

ಸೌಮಿತ್ರಿ ಆ ವಿಪಿನದ ಅಭಿಮಾನಿಗಳ್ಗೆ ನುಡಿದನು=ಲಕ್ಷ್ಮಣನು ಕಾಡಿನ ಪರಿಸರದಲ್ಲಿದ್ದ ಮರಗಿಡಬಳ್ಳಿ ಪ್ರಾಣಿಪಕ್ಷಿ ಬೆಟ್ಟಗುಡ್ಡಗಳನ್ನು ಕುರಿತು

ಮೊರೆಯಿಟ್ಟನು; ವನ=ಕಾಡು; ಸ್ಥಳ=ಜಾಗ/ಎಡೆ; ವೃಕ್ಷ=ಮರಗಿಡ; ಮೃಗ=ಕಾಡಿನಲ್ಲಿರುವ ಪ್ರಾಣಿ; ಲತೆ=ಬಳ್ಳಿ; ತೃಣ=ಹುಲ್ಲು; ಗುಲ್ಮ=ಪೊದೆ; ಪಂಚಭೂತ=ಭೂಮಿ–ಬೆಂಕಿ–ನೀರು–ಗಾಳಿ–ಆಕಾಶ ಎಂಬ ಅಯ್ದು ಬಗೆಯ ಮೂಲ ವಸ್ತುಗಳು; ದೆಸೆ=ಹತ್ತು ದಿಕ್ಕುಗಳು; ಕಾವುದು=ಕಾಪಾಡುವುದು;

ಎಲೆ ವನಸ್ಥಳಗಳಿರ, ವೃಕ್ಷಂಗಳಿರ, ಮೃಗಂಗಳಿರ, ಕ್ರಿಮಿಕೀಟಂಗಳಿರ, ಪಕ್ಷಿಗಳಿರ, ಲತೆಗಳಿರ, ತೃಣಗುಲ್ಮಂಗಳಿರ, ಪಂಚಭೂತಂಗಳಿರ, ದೆಸೆಗಳಿರ ಕಾವುದು=ಕಾಡಿನ ಪ್ರಾಂತ್ಯದಲ್ಲಿರುವ ಮರಗಳೇ, ಪ್ರಾಣಿಗಳೇ, ಕ್ರಿಮಿಕೀಟಗಳೇ, ಪಕ್ಷಿಗಳೇ, ಬಳ್ಳಿಗಳೇ, ಹುಲ್ಲುಪೊದೆಗಳೇ, ಅಯ್ದು ಮೂಲಶಕ್ತಿಗಳಾದ ಭೂಮಿ/ಬೆಂಕಿ/ನೀರು/ಗಾಳಿ/ಆಕಾಶಗಳೇ, ಹತ್ತು ದಿಕ್ಕುಗಳೇ ಸೀತಾದೇವಿಯನ್ನು ಕಾಪಾಡುವುದು; ಜಗತ್+ಜನನಿ; ಜನನಿ=ತಾಯಿ; ಜಾಹ್ನವಿ=ಗಂಗಾ ನದಿ; ಸಲಹು=ಕಾಪಾಡು/ಸಾಕು;

ಎಲೆ ಧರ್ಮದೇವತೆ ಜಗಜ್ಜನನಿ ಜಾಹ್ನವಿಯೆ ತನ್ನ ಮಾತೆಯನು ಸಲಹಿಕೊಳ್ವುದು=ಧರ್ಮದೇವತೆಯಾದ ಗಂಗೆಯೇ, ನನಗೆ ತಾಯಿಸ್ವರೂಪಳಾದ ಸೀತಾದೇವಿಯನ್ನು ಯಾವುದೇ ತೊಂದರೆಗಳಿಗೆ ಬಲಿಯಾಗದಂತೆ ನೋಡಿಕೊಂಡು ಕಾಪಾಡುವುದು; **ಎಲೆ ತಾಯೆ ಭೂದೇವಿ, ಜಾನಕಿಯನು ನಿನ್ನ ಮಗಳು ಇಹಳು ಎಂದು ಸೌಮಿತ್ರಿ ಕೈಮುಗಿದನು**=ಭೂದೇವಿಯೇ, ಸೀತೆಯು ನಿನ್ನ ಮಗಳು. ಅವಳನ್ನು ಕಾಪಾಡುವ ಹೊಣೆ ನಿನ್ನದು ಎಂದು ಲಕ್ಷ್ಮಣನು ನಿಸರ್ಗ ದೇವತೆಗಳಿಗೆ ಕಯ್ ಮುಗಿದನು; ಮಾಳ್ಕೆ=ಬಗೆ/ರೀತಿ/ದಾರಿ; ಇನ್ನು+ಆವುದು;

ಮಾಳ್ಕೆ ಇನ್ನಾವುದು=ಇನ್ನು ದಾರಿ ಯಾವುದಿದೆ... ಈಗ ನಾನೇನು ಮಾಡಲಿ; ತನ್ನ+ಒಡಲ; ಒಡಲು=ದೇಹ; ಇಬ್ಬಗಿ+ಆಗಿ; ಇಬ್ಬಗಿ=ಎರಡು ಪಾಲಾಗಿ;

ತನ್ನೊಡಲ ಇಬ್ಬಗಿಯಾಗಿ ಸೀಳ್ ಕೆಡಹಬೇಡನೆ=ನನ್ನ ದೇಹವನ್ನು ಎರಡು ಹೋಳುಗಳನ್ನಾಗಿ ಸೀಳಿ ಕೆಡಹಬೇಕೆಂದು ಕೇಳಿಕೊಳ್ಳುತ್ತೇನೆ; ಧರಿತ್ರಿ=ಭೂಮಿ; ನಿಷ್ಠುರ=ಕ್ರೂರತನ; **ಧರಿತ್ರಿಯೊಳು ನಿಷ್ಠುರದ ಬಾಳ್ಕೆಯನು ಸುಡಲಿ ಎನುತೆ**=ಭೂಮಂಡಲದಲ್ಲಿ ಕ್ರೂರಿಯಾಗಿ ನಡೆದುಕೊಳ್ಳುತ್ತಿರುವ ನನ್ನ ಬಾಳಿಗೆ ಬೆಂಕಿ ಬೀಳಲಿ ಎಂದು ತನ್ನನ್ನು ತಾನೇ ಶಪಿಸಿಕೊಳ್ಳುತ್ತ, ಬಲವಂದು=ಬಲಗಡೆಯಿಂದ ಒಂದು ಸುತ್ತು ಬಂದು;

ಲಕ್ಷ್ಮಣನು ದೇವಿಯನು ಬಲವಂದು ನಮಿಸಿ=ಲಕ್ಷ್ಮಣನು ಸೀತಾದೇವಿಯ ಬಲಗಡೆಯಿಂದ ಒಂದು ಸುತ್ತುಬಂದು ನಮಸ್ಕಾರವನ್ನು ಮಾಡಿ; **ಬಳಿಕ ಬೀಳ್ಕೊಂಡು ನಡೆಯಲ್ಕೆ**=ಅನಂತರ, ಅವಳಿಂದ ದೂರಸರಿದು ನಡೆಯುತ್ತಿರಲು;

ನೀಳ್ಕುಳಿಗೊಳ್=ಜಗ್ಗುವುದು/ಸೆಳೆಯುವುದು/ಎಳೆಯುವುದು;**ಮನವ್ ಲಕ್ಷ್ಮಣನು ಹಿಂದುಹಿಂದಕೆ ನೀಳ್ಕುಳಿಗೊಳಲ್ಕೆ**=ಸೀತಾದೇವಿಯನ್ನು ಬಿಟ್ಟು ದೂರ

ದೂರ ನಡೆಯುತ್ತಿದ್ದರೂ ಮನಸ್ಸು ಮಾತ್ರ ಹಿಂದುಹಿಂದಕ್ಕೆ ಅಂದರೆ ಸೀತೆಯ ಕಡೆಗೆ ಎಳೆಯುತ್ತಿರಲು; ದೂಳ್+ಕಾಯದ+ಒಳು; ಕಾಯ=ದೇಹ/ಮಯ್; ದೂಳ್ಕಾಯ=ದೂಳಿನಿಂದ ಕೂಡಿದ ದೇಹ; ಪತ್ತಿ=ಹತ್ತಿ/ಅಂಟಿಕೊಂಡು; ಪೊರಳ್=ಉರುಳಾಡು;

ದೂಳ್ಕಾಯದೊಳು ಪತ್ತಿ ಪೊರಳ್ವ ಸೀತೆಯ ಕಡೆಗೆ=ದೂಳು ಮೆತ್ತಿಕೊಂಡು ನೆಲದ ಮೇಲೆ ಸಂಕಟದಿಂದ ಉರುಳಾಡುತ್ತಿರುವ ಸೀತೆಯ ಕಡೆಗೆ; ಎಂದುಮ್= ಯಾವಾಗಲೂ; ಅಗಲು=ದೂರವಿರು/ಬಿಟ್ಟಿರು; **ಎಂದುಮ್ ಅಗಲದ ಅಣ್ಣನ ಕಡೆಗೆ**=ಹುಟ್ಟಿದಂದಿನಿಂದ ಇಂದಿನ ತನಕ ಅಂದರೆ ತನ್ನ ಜೀವನದ ಉದ್ದಕ್ಕೂ ಯಾವಾಗಲೂ ಬಿಟ್ಟಿರದ ಅಣ್ಣ ರಾಮನ ಕಡೆಗೆ; ತೂಗು+ಉಯ್ಯಲೆ+ ವೊಲ್+ಆದನು; ತೂಗು=ಅತ್ತಿತ್ತ ಚಲಿಸು; ಉಯ್ಯಲೆ=ತೂಗುಮಣೆ/ಜೋಕಾಲಿ; ತೂಗುಯ್ಯಾಲೆ=ಒಮ್ಮೆ ಅತ್ತ... ಒಮ್ಮೆ ಇತ್ತ ತೂಗಾಡುವ ಉಯ್ಯಲೆ; ವೊಲ್= ಅಂತೆ/ಹಾಗೆ; **ತೂಗುಯ್ಯಲೆವೊಲಾದನು**=ಅತ್ತಿತ್ತ ತೂಗಾಡುವ ಉಯ್ಯಲೆಯಂತೆ ಲಕ್ಷ್ಮಣನು ಸೀತೆಯ ಸಂಕಟ ಮತ್ತು ರಾಮನ ಆದೇಶದ ನಡುವೆ ಸಿಲುಕಿ, ತೀವ್ರವಾದ ಮಾನಸಿಕ ನೋವಿಗೆ ಗುರಿಯಾದನು; **ನಡೆಗೊಳಲು**=ಲಕ್ಷ್ಮಣನು ನಡೆದುಬರುತ್ತ ಮತ್ತೊಮ್ಮೆ ಹಿಂತಿರುಗಿ ನೋಡಿದಾಗ; **ಬಾಯಾರ್ವಳನು**=ನೀರನ್ನು ಕುಡಿಯಲು ಹಂಬಲಿಸುವವಳನ್ನು; **ಚೀರ್ವಳನು**=ಸಂಕಟದಿಂದ ಅರಚುತ್ತಿರು ವವಳನ್ನು; ಕಡಲಿಡುವ ಕಂಬನಿ=ಇದೊಂದು ನುಡಿಗಟ್ಟು. ಒಂದೇ ಸಮನೆ ಉಕ್ಕಿಬಂದು ಹರಿಯುತ್ತಿರುವ ಕಣ್ಣೀರು; ಆಳ್=ನೀರಿನಲ್ಲಿ ಮುಳುಗು;

ಕಡಲಿಡುವ ಕಂಬನಿಯೊಳು ಆಳ್ವಳನು ಬೀಳ್ವಳನು=ಉಕ್ಕಿಹರಿಯುತ್ತಿರುವ ಕಣ್ಣೀರಿನಲ್ಲಿ ಮುಳುಗಿರುವವಳನ್ನು; ಅಂದರೆ ತೀವ್ರವಾದ ಸಂಕಟದಿಂದ ನರಳುತ್ತ ನೆಲದ ಮೇಲೆ ಬೀಳುತ್ತಿರುವವಳನ್ನು; ಪುಡಿ=ದೂಳು; ಪೊರಳ್=ಉರುಳಾಡು; ಬಸವಳಿ=ಸುಸ್ತಾಗು; ಸುಳಿ=ಗುಂಡಾಗಿ ತಿರುಗುವುದು; **ಪುಡಿಯೊಳು ಪೊರಳ್ದು ಬಸವಳಿವಳನು ಸುಳಿವಳನು ಕಂಡು**=ದೂಳಿನಲ್ಲಿ ಹೊರಳಾಡುತ್ತ ಸುಸ್ತಾಗಿ ತಲೆಸುತ್ತಿದಂತಾಗಿ ಇದ್ದ ಕಡೆಯಲ್ಲಿಯೇ ಚಕ್ರಾಕಾರವಾಗಿ ತಿರುಗುತ್ತಿರುವವಳನ್ನು; ಭರತ+ಅವರಜನ್; ಅವರಜ=ತಮ್ಮ; ಭರತಾವರಜ=ಭರತನ ತಮ್ಮನಾದ ಲಕ್ಷ್ಮಣ; ಅಗಲ್ದು=ದೂರ ದೂರ ಸರಿಯುತ್ತ;

ಭರತಾವರಜನ್ ಅಗಲ್ದು=ಲಕ್ಷ್ಮಣನು ದೂರಸರಿದು ಬರುತ್ತ; **ಅಡಿಗಡಿಗೆ ತಿರುತಿರುಗಿ ನೋಡುವನು**=ಮತ್ತೆ ಮತ್ತೆ ತಿರುತಿರುಗಿ ನೋಡುವನು; ಬಾಡು= ಕಳೆಗುಂದು/ಮಂಕಾಗು; ಬಾಡುವನು=ಏನನ್ನೂ ಮಾಡಲಾಗದೆ ಮಂಕಾಗುವನು;

ಬಿಡದೆ=ಒಂದೇ ಸಮನೆ; ಬಿಸುಸುಯ್ದು=ನಿಟ್ಟುಸಿರನ್ನು ಬಿಡುತ್ತ; ಬೆಂಡು+

ಆದಪನು; ಬೆಂಡಾದಪನು=ಬಲಹೀನನಾಗುತ್ತಾನೆ/ಸಂಕಟದ ತೀವ್ರತೆಯಿಂದ ದೇಹದ ಶಕ್ತಿ ಕುಗ್ಗುವುದು; **ಬಿಡದೆ ಬಿಸುಸುಯ್ದು ಬೆಂಡಾದಪನು**=ಸಂಕಟದಲ್ಲಿ ಬೇಯುತ್ತ ಒಂದೇ ಸಮನೆ ನಿಟ್ಟುಸಿರನ್ನು ಬಿಡುತ್ತ ಸುಸ್ತಾಗುವನು;

ಪೊಡೆಮರಳ್=ಹೊರಳು/ಉರುಳು; **ಪೋದಪನು... ಪೊಡೆಮರಳ್ವನು... ನಿಲ್ವನು... ಅಳಲುವನು... ಬಳಲುವನು**=ಮುಂದಕ್ಕೆ ಅಡಿಯಿಡುವನು... ಮತ್ತೆ ಹಿಂದಕ್ಕೆ ಬರುವನು... ಸೀತೆಯಿರುವ ಕಡೆಗೆ ಹೋಗಲಾಗದೆ ನಿಲ್ಲುವನು... ಸಂಕಟದಿಂದ ಅಳುವನು... ಶೋಕದ ತೀವ್ರತೆಯಿಂದ ಸುಸ್ತಾಗುವನು;

ಬಟ್ಟೆಯೊಳು=ದಾರಿಯಲ್ಲಿ; ದಿಟ್ಟಿ+ಕೆಟ್ಟು; ದಿಟ್ಟಿಗೆಟ್ಟು=ಕಣ್ಣು ಮಂಜಾಗಿ; **ಬಟ್ಟೆಯೊಳು ದಿಟ್ಟಿಗೆಟ್ಟು**=ದಾರಿಯಲ್ಲಿ ನಡೆದುಬರುತ್ತಿರುವಾಗ ಕಣ್ಣುಗಳು ಮಂಜಾಗಿ ಮುಂದಕ್ಕೆ ಅಡಿಯಿಡಲಾಗದೆ ನರಳುವನು; ಬಿಚ್ಚು=ಅಗಲು/ಬೇರೆ ಮಾಡು; ಒಯ್ಯನೆ=ಮೆಲ್ಲಗೆ; ಅತ್ಯಾಯಾಸ=ಹೆಚ್ಚಿನ ಬಳಲಿಕೆ; **ತಾಯನು ಎಳೆಗರು ಬಿಚ್ಚುವಂತೆ ಒಯ್ಯನೊಯ್ಯನೆ ಅತ್ಯಾಯಾಸದಿಂದೆ ಅಗಲ್ದು**=ತಾಯಿ ಹಸುವಿನಿಂದ ಎಳೆಗರುವು ಅಗಲುವಂತೆ ಮೆಲ್ಲಮೆಲ್ಲನೆ ಅಂದರೆ ಬಹಳ ಪ್ರಯಾಸದಿಂದ ಸೀತಾದೇವಿಯಿಂದ ದೂರ ದೂರ ಬಂದು;

ಅಮರನದಿ=ಗಂಗಾ ನದಿ; **ಅಮರನದಿಯನು ದಾಂಟಿ**=ಗಂಗಾ ನದಿಯನ್ನು ದಾಟಿ; ದುಃಖ+ಆರ್ತನ್+ಆಗಿ; ಆರ್ತ=; ಅತ್ತಲು=ಆ ಕಡೆ/ಅಯೋಧ್ಯೆಯ ಕಡೆಗೆ;

ದುಃಖಾರ್ತನಾಗಿ ಅತ್ತಲು ಸೌಮಿತ್ರಿ ಸಾಗಿದನು=ಸಂಕಟದಲ್ಲಿ ನರಳುತ್ತ ಅಯೋಧ್ಯೆಯ ಕಡೆಗೆ ಲಕ್ಷ್ಮಣನು ನಡೆದನು;

❖

ನೋಟ–೬

ರಾಯ ಕೇಳು=ಜನಮೇಜಯ ರಾಜನಿಗೆ ರಾಮಾಯಣದ ಕತೆಯನ್ನು ಜೈಮಿನಿ ರಿಸಿಯು ಹೇಳುತ್ತಿದ್ದಾನೆ;

ಮಸುಳು=ಕಾಣದಾಗು; **ಲಕ್ಷ್ಮಣನ ತಲೆ ಮಸುಳಲು**=ಲಕ್ಷ್ಮಣನ ತಲೆ ಕಾಣದಾಗಲು ಅಂದರೆ ಸೀತೆಯಿಂದ ಬಹುದೂರ ಹೋದನಂತರ; ಕಂಗೆಡು= ಗಾಬರಿಯಾಗು/ಉದ್ವೇಗಗೊಳ್ಳು/ಏನು ಮಾಡಬೇಕೆಂದು ತಿಳಿಯದಾಗು; **ಇತ್ತಲು ಇವಳು ಬಾಯಾರಿ ಕಂಗೆಟ್ಟು**=ಇತ್ತ ಕಾಡಿನಲ್ಲಿ ಸೀತೆಯು ಬಾಯಾರಿಕೆಯಿಂದ ಬಳಲುತ್ತ ಏನು ಮಾಡಬೇಕೆಂದು ತಿಳಿಯದಾಗಿ;ಒರಲ್=ಕೂಗು/ಅರಚು; **'ಆ' ಎಂದು ಒರಲ್ದು**=ಆ ಎಂದು ಅರಚುತ್ತ; ಅಸವಳಿ=ಶಕ್ತಿಗುಂದು/ಬಳಲು; **ಭಯಶೋಕದಿಂದ ಅಸವಳಿದು**=ಹೆದರಿಕೆ ಹಾಗೂ ಸಂಕಟದಿಂದ ಬಳಲಿ; ಕಾಯಮ್+ಅನ್; ಕಾಯ=ದೇಹ/ಮಯ್; **ಕಾಯಮನು ಮರೆದು**=ಮಯ್ ಮೇಲಣ ಎಚ್ಚರವನ್ನು ಕಳೆದುಕೊಂಡು; ಮೂಲಮ್+ಅನ್; ಮೂಲ=ಬೇರು/ ಬುಡ; ಕೊಯ್=ಕತ್ತರಿಸು; ಅವನಿ=ನೆಲ/ಭೂಮಿ; ಒರಗು=ಕೆಳಕ್ಕೆ ಬಾಗು/ಬಗ್ಗು: **ಮೂಲಮನು ಕೊಯ್ದ ಎಳೆಯ ಬಳ್ಳಿಯಂತೆ ಅವನಿಗೆ ಒರಗಿದಳು**=ಬುಡವನ್ನು ಕತ್ತರಿಸಿದ ಎಳೆಯ ಬಳ್ಳಿಯಂತೆ ಭೂಮಿಯ ಮೇಲೆ ಬಿದ್ದಳು;

ಅರಸ ಕೇಳು=ಜನಮೇಜಯ ರಾಜನಿಗೆ ರಾಮಾಯಣದ ಕತೆಯನ್ನು ಜೈಮಿನಿ ರಿಸಿಯು ಹೇಳುತ್ತಿದ್ದಾನೆ: **ಅಲ್ಲಿರ್ದ ಪಕ್ಷಿ ಮೃಗ ಜಂತುಗಳು ಇರದೆ ಧರಣಿಸುತೆಯನು ಬಳಸಿ ನಿಂದು**=ಅಲ್ಲಿ ಇದ್ದ ಕಾಡಿನ ಪ್ರಾಣಿಗಳು ಮತ್ತು ಹಕ್ಕಿಗಳು ಸುಮ್ಮನೆ ತಮ್ಮ ಪಾಡಿಗೆ ತಾವು ಇರದೆ ಸೀತಾದೇವಿಯನ್ನು ಬಳಸಿ ನಿಂತುಕೊಂಡು; ಮೈ+ಉಡುಗಿ; ಉಡುಗು=ಕುಗ್ಗು; ಮೈಯುಡಗಿ=ದೇಹವು ಕುಗ್ಗಿ;

ಜೋಲ್=ಇಳಿಬೀಳು; ಜೋಲ್ದು=ಪ್ರಾಣಿಪಕ್ಷಿಗಳು ಕುತ್ತಿಗೆಯನ್ನು ಇಳಿಬಿಟ್ಟು; ಕಂಬನಿ+ಕರೆದು; ಕರೆ=ಸುರಿಸು/ಚೆಲ್ಲು; ಕಂಬನಿಗರೆದು=ಕಣ್ಣೀರು ಹಾಕುತ್ತ; ನಿಜ=ತನ್ನ/ತಮ್ಮ; ವೈರ=ಹಗೆತನ; **ನಿಜವೈರಮನು ಮರೆದು**=ತಮ್ಮ ನಡುವೆ ಇದ್ದ ಹಗೆತನವನ್ನು ಮರೆತು; ಪುಲ್=ಹುಲ್ಲು; ಮೇವು=ಪ್ರಾಣಿಪಕ್ಷಿಗಳ ಉಣಸು ತಿನಸು; **ಪುಲ್ ಮೇವುಗಳನೆ ತೊರೆದು**=ಹುಲ್ಲು ಮೇವನ್ನು ತಿನ್ನುವುದನ್ನು ಬಿಟ್ಟು; ಕೂಡೆ=ಜತೆಯಲ್ಲಿ; ಕೊರಗುತ+ಇರ್ದುವು; ಕೊರಗು=ಚಿಂತೆ/ಕಳವಳ; **ಕೂಡೆ ಕೊರಗುತಿರ್ದುವು**=ಸೀತೆಯ ಬಗ್ಗೆ ಚಿಂತಿಸತೊಡಗಿದವು; ಲತೆ=ಬಳ್ಳಿ; ಬಾಡು=ಮುರುಟು/ಕಳೆಗುಂದು/ಕುಗ್ಗು; ಸೊರಗುತ+ಇರ್ದುವು;

ಸೊರಗು=ಕೃಶವಾಗು/ತೆಳುವಾಗು/ಸಣ್ಣದಾಗು; **ವೃಕ್ಷಲತೆಗಳು ಬಾಡಿ ಸೊರಗುತಿರ್ದುವು**=ಮರಗಿಡಬಳ್ಳಿಗಳು ಕಳೆಗುಂದಿ ಸಣ್ಣದಾಗುತ್ತಿದ್ದವು; **ಶೋಕಭಾರದಿನ್ ಕಲ್ಗಳುಮ್ ಕರಗುತಿರ್ದುವು**=ಇದೊಂದು ರೂಪಕ.ಸೀತೆಯ ಸಂಕಟವನ್ನು ನೋಡಿ, ಕಲ್ಲುಗಳು ಕೂಡ ಕರಗಿ ನೀರಾಗುತ್ತಿದ್ದವು. ಅಂದರೆ ನಿಸರ್ಗದಲ್ಲಿನ ಚೇತನ ಜೀವಿಗಳಾದ ಮರಗಿಡಬಳ್ಳಿ ಪ್ರಾಣಿಪಕ್ಷಿಗಳಂತೆಯೇ, ಅಚೇತನ ವಸ್ತುವಾದ ಕಲ್ಲುಗಳು ಕೂಡ ಸೀತೆಯ ಶೋಕದಲ್ಲಿ ಪಾಲ್ಗೊಂಡವು;

ಜಗದೊಳು ಉತ್ತಮರ ಹಾನಿಯನು ಕಂಡು ಸೈರಿಸುವರುಂಟೆ=ಜಗತ್ತಿನಲ್ಲಿ ಒಳ್ಳೆಯವರಿಗೆ ಉಂಟಾಗುವ ಹಾನಿಯನ್ನು ನೋಡಿ, ಸಹಿಸುಕೊಳ್ಳುವವರು ಇದ್ದಾರೆಯೇ. ಅಂದರೆ ಸಹಿಸಿಕೊಳ್ಳಲಾಗದೆ, ಒಳ್ಳೆಯವರ ಸಂಕಟವನ್ನು ಕಂಡು ಅನುಕಂಪದಿಂದ ತಾವು ನೋವನ್ನು ಉಣ್ಣುತ್ತಾರೆ;

ಅರರೆ=ಅಬ್ಬಬ್ಬಾ. ಸಂಕಟದ ಇಲ್ಲವೇ ಅಚ್ಚರಿಯ ಪ್ರಸಂಗದಲ್ಲಿ ಬಾಯಿಂದ ಹೊರಡುವ ಉದ್ಗಾರ ಸೂಚಕ ಪದ;

ಅರರೆ... ಆಕೆಯ ಅಂಗಮನ್ ನೋಡಿನೋಡಿ=ಅಬ್ಬಬ್ಬಾ... ಸೀತೆಯ ದೇಹದ ಪರಿತಾಪವನ್ನು ನೋಡಿ ನೋಡಿ; ದುಃಖ+ಸಂತಪ್ತೆ+ಆಗಿರುತ+ಇರಲ್ಕೆ; ಸಂತಪ್ತೆ=ಬಹಳವಾಗಿ ನೊಂದವಳು; **ರಾಘವನ ರಾಣಿ ದುಃಖ ಸಂತಪ್ತೆಯಾಗಿರುತಿರಲ್ಕೆ**=ರಾಮನ ಹೆಂಡತಿ ಸೀತೆಯು ಸಂಕಟದಿಂದ ಬಹಳವಾಗಿ ನೋಯುತ್ತಿರುವುದನ್ನು ಕಂಡು; **ಜಾನಕಿಯ ಶೋಕಮ್ ತಮ್ಮದು ಎಂದು**=ಸೀತೆಗೆ ಬಂದಿರುವ ಸಂಕಟವು ತಮ್ಮ ಪಾಲಿನ ಸಂಕಟವೆಂದು ತಿಳಿದು; ಮೊರೆಯಲ್+ಒಲ್ಲವು; ಮೊರೆ=ಜೇಂಕರಿಸು/ಗುಯ್ ಎಂದು ದನಿ ಮಾಡು; **ತುಂಬಿಮೊರೆಯಲೊಲ್ಲವು**=ತುಂಬಿಗಳು ಜೇಂಕಾರವನ್ನು ಮಾಡಲು ಇಚ್ಚಿಸುವುದಿಲ್ಲ; ಕುಣಿಯಲ್+ಒಲ್ಲವು; **ನವಿಲ್ ಕುಣಿಯಲೊಲ್ಲವು**=ನವಿಲುಗಳು ನರ್ತಿಸಲು ಇಚ್ಚಿಸವು; ಕೋಕಿ=ಹೆಣ್ಣು ಚಕ್ರವಾಕ ಹಕ್ಕಿ; ಬೆರೆಯಲ್+ಒಲ್ಲವು; ಬೆರೆ=

ಕೂಡು; **ಕೋಕಿ ಬೆರೆಯಲೊಲ್ಲವು**=ಹೆಣ್ಣು ಚಕ್ರವಾಕ ಹಕ್ಕಿಗಳು ಗಂಡು ಚಕ್ರವಾಕ ದೊಡನೆ ಕೂಡಿ ರಮಿಸಲು ಇಚ್ಚಿಸವು;ನಡೆಯಲ್+ಒಲ್ಲವು; ನಡೆ=ಮುಂದೆ ಸಾಗು; **ಹಂಸೆ ನಡೆಯಲೊಲ್ಲವು**=ಹಂಸಗಳು ಕೊಳದಲ್ಲಿ ಈಜಲು ಇಲ್ಲವೇ ನೆಲದಲ್ಲಿ ಮುಂದೆ ಸಾಗಲು ಇಚ್ಚಿಸವು; ಪಿಕ=ಕೋಗಿಲೆ; ಕರೆಯಲ್+ಒಲ್ಲವು; ಕರೆ=ಕೂಗು:

ಪಿಕಮ್ ಕರೆಯಲೊಲ್ಲವು=ಕೋಗಿಲೆಗಳು ಇಂಪಾಗಿ ಹಾಡಲು ಇಚ್ಚಿಸವು; ಶುಕ=ಗಿಣಿ; ನುಡಿಯಲ್+ಒಲ್ಲವು; **ಶುಕಮ್ ನುಡಿಯಲೊಲ್ಲವು**=ಗಿಣಿಗಳು ಮಾತನಾಡಲು ಇಚ್ಚಿಸವು; ಚಕೋರ=ಒಂದು ಬಗೆಯ ಹಕ್ಕಿ/ಜೊನ್ನವಕ್ಕಿ;

ನಲಿಯಲ್+ಒಲ್ಲವು; ನಲಿ=ಕುಣಿ; **ಚಕೋರ ನಲಿಯಲೊಲ್ಲವು**=ಚಕೋರಗಳು ಕುಣಿಯಲು ಇಚ್ಚಿಸವು; ಹರಿಣಿ=ಹೆಣ್ಣು ಜಿಂಕೆ; ನೆರೆಯಲ್+ ಒಲ್ಲವು; ನೆರೆ=ಸೇರು/ ಜತೆಗೂಡು; **ಹರಿಣಿ ನೆರೆಯಲೊಲ್ಲವು**=ಹೆಣ್ಣು ಜಿಂಕೆಗಳು ಗಂಡು ಜಿಂಕೆಗಳ ಜತೆಗೂಡಿ ರಮಿಸಲು ಇಚ್ಚಿಸವು; ಕರಿಣಿ=ಹೆಣ್ಣಾನೆ; ಒಲಿಯಲ್+ಒಲ್ಲವು; ಒಲಿ=ಮೋಹಗೊಳ್ಳು; **ಕರಿಣಿ ಒಲೆಯಲೊಲ್ಲವು**=ಹೆಣ್ಣಾನೆಗಳು ಗಂಡಾನೆಗಳ ಜತೆಯಲ್ಲಿ ಮೋಹಗೊಂಡು ನೆರೆಯಲು ಇಚ್ಚಿಸವು; ಚಮರಿ=ಹೆಣ್ಣು ಚಮರಿ; ಪೊರೆಯಲ್+ಒಲ್ಲವು; ಪೊರೆ=ಕೂಡು/ಸೇರು; **ಚಮರಿ ಪೊರೆಯಲೊಲ್ಲವು**=ಹೆಣ್ಣು ಚಮರಿಗಳು ಗಂಡು ಚಮರಗಳೊಡನೆ ಕೂಡಲು ಇಚ್ಚಿಸವು; ಸಿಂಗ=ಸಿಂಹ; ಮೆರೆಯಲ್+ಒಲ್ಲವು; ಮೆರೆ=ಬೀಗು/ತೋರಿಸು;

ಸಿಂಗಮ್ ಮೆರೆಯಲೊಲ್ಲವು=ಸಿಂಹಗಳು ತಮ್ಮ ಶಕ್ತಿಯನ್ನು ತೋರಿಸಲು ಇಚ್ಚಿಸವು; ಚಮರಮ್+ಅನ್; ಚಮರ=ಬಾಲದಲ್ಲಿ ಉದ್ದನೆಯ ಕೂದಲುಳ್ಳ ಒಂದು ಬಗೆಯ ಪ್ರಾಣಿ. ಈ ಪ್ರಾಣಿಯ ಬಾಲದ ಕೂದಲಿನಿಂದ ತಯಾರಿಸಿದ ಬೀಸಣಿಗೆಯನ್ನು 'ಚಾಮರ' ಎಂದು ಕರೆಯುತ್ತಾರೆ; **ಚಮರಿಗಳು ಚಮರಮನು ಬಾಲದೊಳು ಬೀಸಿದುವು**=ಚಮರಿಗಳು ತಮ್ಮ ಬಾಲದಿಂದ ಗಾಳಿಯನ್ನು ಬೀಸಿದುವು; ಕರಿ=ಆನೆ; ಎಳೆ+ತಳಿರ; ತಳಿರು=ಚಿಗುರು; ಮೃದು=ಮೆದುವಾದ/ ಮೆತ್ತಗಿರುವ/ಕೋಮಲವಾದ; ತಲ್ಪ=ಹಾಸಿಗೆ/ಶಯ್ಯೆ; ಪಾಸು=ಹಾಸು/ಬಿಚ್ಚಿ ಹರಡಿದವು; **ಕರಿಗಳು ಎಳೆದಳಿರ ಮೃದುತಲ್ಪಮನು ಪಾಸಿದುವು**=ಆನೆಗಳು ಎಳೆಯ ಚಿಗುರಿನ ಮೆತ್ತನೆಯ ಹಾಸಿಗೆಯನ್ನು ಹಾಸಿದವು; ಸಾರಸ=ಕೊಕ್ಕರೆ; ತೊಯ್=ನೀರಿನಲ್ಲಿ ನೆನೆಯಿಸು/ಅದ್ದಿ/ಮುಳುಗಿಸಿ; ಅಂಬು=ನೀರು; ಸೂಸು= ಚಿಮುಕಿಸು; **ಸಾರಸಂಗಳು ತಮ್ಮ ಗರಿಗಳನು ತೋದು ತಂದು ಅಂಬುಗಳನು ಸೂಸಿದುವು**=ಕೊಕ್ಕರೆಗಳು ತಮ್ಮ ಗರಿಗಳನ್ನು ನೀರಿನಲ್ಲಿ ನೆನೆಯಿಸಿ ತಂದು ನೀರಹನಿಗಳನ್ನು ಸೀತೆಯ ಮಯ್ ಮೇಲಿ ಸಿಂಪಡಿಸಿದವು;

ಅಂಚೆ=ಹಂಸ; ಆಗಸ=ಆಕಾಶ/ಗಗನ; ಓಸರಿಸು=ಓರೆಯಾಗು/ಪಕ್ಕಕ್ಕೆ ಸರಿಸು; ಎರಂಕೆ=ರೆಕ್ಕೆ; ಅಗಲ್ಚಿ=ಅಗಲ ಮಾಡಿ; ಸಿರಿಮೊಗ=ಸುಂದರವಾದ ಮೊಗ; ನೆಳಲ್+ಆಸೆ; ಆಸೆ=ಆಶ್ರಯ/ಆಸರೆ; ಗೆಯ್=ಮಾಡು; **ಅಂಚೆಗಳು ಆಗಸದೊಳು ಓಸರಿಸದ ಎರಂಕೆಯನು ಅಗಲ್ಚಿ ಆ ಸಿರಿಮೊಗಕ್ಕೆ ಬಿಸಿಲಾಗದಂತೆ ನೆಳಲಾಸೆ ಗೈದುವು**=ಹಂಸಗಳು ಸೀತೆಯ ಮೊಗದ ಮೇಲೆ ತಮ್ಮ ರೆಕ್ಕೆಗಳನ್ನು ಬಿಚ್ಚಿ ಹರಡಿ, ಅವಳಿಗೆ ಬಿಸಿಲಿನ ತಾಪ ತಟ್ಟದಂತೆ ನೆರಳಿನ ಆಸರೆಯನ್ನು ಒದಗಿಸಿದವು;

ಸುರನದಿ=ಗಂಗಾ ನದಿ; ತೆರೆ=ನೀರಿನ ಅಲೆ; ಬರಲಾರದೆ+ಇರ್ದೊಡಮ್; ಅಲರ್=ಅರಳಿದ; ಅರವಿಂದ=ತಾವರೆ; ಗಂಧ=ಪರಿಮಳ/ಕಂಪು/ಸುವಾಸನೆ; ಧರಣಿ=ಭೂಮಿ; ಸುತೆ=ಮಗಳು; ಧರಣಿಸುತೆ=ಭೂದೇವಿಯ ಮಗಳು ಸೀತೆ; ಪರಿತಾಪಮ್+ಅನ್; ಪರಿತಾಪ=ಅತಿ ಹೆಚ್ಚಿನ ಸಂಕಟ; ತವಿಸು=ಪರಿಹರಿಸು/ನಿವಾರಿಸು; ತರಹರ=ಆತುರ/ಬೇಗಬೇಗನೆ; ಐತಂದು=ಆಗಮಿಸಿ; ವಾತ=ಗಾಳಿ;

ಸುರನದಿಯ ತೆರೆತೆರೆಯ ನಡುನಡುವೆ ಬಿದ್ದೆದ್ದು ಬರಲಾರದಿರ್ದೊಡಮ್... ಮತ್ತೆ ಗಂಗೆಯೊಳು ಅಲರ್ದ ಅರವಿಂದ ಗಂಧದ ಅತಿಭಾರಮನು ಪೊರಲಾರದೆ ಇರ್ದೊಡಮ್... ಧರಣಿಸುತೆಯ ಪರಿತಾಪಮನು ತವಿಸದೆ ಇರಬಾರದೆಂದು ತರಹರದೊಳು ಒಯ್ಯೊಯ್ಯನೆ ಐತಂದು ಸುಖ ಸ್ಪರುಶವಾತಮ್ ಬೀಸಿತು= ಬೀಸುತ್ತಿರುವ ಗಾಳಿಯು ಗಂಗಾ ನದಿಯ ತೆರೆಗಳ ನಡುವೆ ಬಿದ್ದೆದ್ದು ಬರಲು ಆಗದಿದ್ದರೂ... ಗಂಗೆಯಲ್ಲಿ ಅರಳಿದ ತಾವರೆ ಹೂಗಳ ಮಕರಂದದ ಹೊರೆಯನ್ನು ಹೊರಲಾಗದಿದ್ದರೂ... ಸೀತಾದೇವಿಯ ಸಂಕಟವನ್ನು ಹೋಗಲಾಡಿಸದೆ ಇರಬಾರದೆಂದು... ಆತುರಾತುರವಾಗಿ ಒಯ್ಯೊಯ್ಯನೆ ಆಗಮಿಸಿ ಸೀತೆಯ ಮಯ್ ಮೇಲೆ ತಂಗಾಳಿಯನ್ನು ಬೀಸಿತು;

ನೋಳ್ಪನೆ=ನೋಡುತ್ತಾನೆಯೆ/ಲೆಕ್ಕಿಸುತ್ತಾನೆಯೆ; **ಜಗದೊಳು ಉಪಕಾರಿ ಯಾದವನು ತನ್ನ ನೋವನು ನೋಳ್ಪನೆ**=ಜಗತ್ತಿನಲ್ಲಿ ಉಪಕಾರಿಯಾದವನು ತನ್ನ ನೋವನ್ನು ಲೆಕ್ಕಿಸದೆ ಪರರಿಗೆ ಒಳಿತನ್ನು ಮಾಡಲು ಮುನ್ನುಗ್ಗುತ್ತಾನೆ; ಪೃಥಿವಿ+ ಆತ್ಮಜೆ; ಪೃಥಿವಿ=ಭೂಮಿ; ಆತ್ಮಜೆ=ಮಗಳು; ಪೃಥಿವಿಯಾತ್ಮಜೆ= ಭೂದೇವಿಯ ಮಗಳಾದ ಸೀತೆ; **ಪೃಥಿವಿಯಾತ್ಮಜೆ ಬಳಿಕ ಚೇತರಿಸಿ**=ಕಾಡಿನ ಪ್ರಾಣಿಪಕ್ಷಿಗಳ ಉಪಚಾರದಿಂದ ಮತ್ತು ತಂಗಾಳಿಯ ತೀಡುವಿಕೆಯಿಂದ ಸೀತೆಯು ಚೇತರಿಸಿ ಕೊಂಡು; ಪಥ=ದಾರಿ/ಮಾರ್ಗ; ಆವುದು+ಎಂದು; ಆವುದು= ಯಾವುದು; ದೆಸೆ=ದಿಕ್ಕು; ದೆಸೆದೆಸೆಗಳು=ಸುತ್ತಮುತ್ತ; **ತನಗೆ ಇನ್ನು ಪಥಮ್ ಆವುದೆಂದು ದೆಸೆದೆಸೆಗಳನು ನೋಡಿ**=ತನಗೆ ಇನ್ನು ದಾರಿ ಯಾವುದೆಂದು ಸುತ್ತಮುತ್ತ ನೋಡಿ;

ಸಲೆ=ಬಹಳವಾಗಿ/ಅತಿಯಾಗಿ/ಸಂಪೂರ್ಣವಾಗಿ; ಶಿಥಿಲ=ಬಲಹೀನವಾದುದು; ಅವಯವ=ಶರೀರ/ಮಯ್;

ಸಲೆ ಶಿಥಿಲಮ್ ಆದ ಅವಯವದ=ಶಕ್ತಿಯು ಸಂಪೂರ್ಣವಾಗಿ ಉಡುಗಿದ ಅಂಗಾಂಗಗಳ; ದೂಳ್+ಇಡಿದ; ಇಡಿ=ತುಂಬು/ಮೆತ್ತಿಕೊಳ್ಳು; **ದೂಳಿಡಿದ ಮೈಯ**=ದೂಳು ಮೆತ್ತಿಕೊಂಡಿರುವ ಮಯ್ಯಿನ; ಬಿಡುಮುಡಿ=ಕೆದರಿದ ತಲೆಗೂದಲು; ವಿಕೃತಿ=ಬದಲಾವಣೆ/ಕೆಟ್ಟ ರೀತಿಯಲ್ಲಿರುವುದು; ಎಣಿಸು= ಪರಿಗಣಿಸು/ಲೆಕ್ಕಿಸು/ಗಮನಿಸು; **ಬಿಡುಮುಡಿಯ ವಿಕೃತಿಯನು ಎಣಿಸದೆ**= ಕೆದರಿಹೋಗಿರುವ ತಲೆಗೂದಲಿನ ಅಂದಗೆಟ್ಟ ತನ್ನ ರೂಪವನ್ನು ಗಮನಿಸದೆ; ಮಿಥಿಲೇಂದ್ರ=ಮಿಥಿಲೆಯ ರಾಜನಾದ ಜನಕ; **ಮಿಥಿಲೇಂದ್ರವಂಶದೊಳು ಜನಿಸಿ ರಘುಕುಲದ ದಶರಥನೃಪನ ಸೊಸೆಯಾಗಿ**=ಮಿಥಿಲೇಂದ್ರವಂಶದ ಜನಕ ರಾಜನ ಮಗಳಾಗಿ ಹುಟ್ಟಿ...ರಘುವಂಶದ ದಶರಥ ರಾಜನ ಸೊಸೆಯಾಗಿ; ಕಟ್ಟಡವಿ= ದಟ್ಟವಾದ ಕಾಡು; ವ್ಯಥೆ=ನೋವು/ಯಾತನೆ; ಅಕಟ=ಅಯ್ಯೋ; ವಿಧಿ= ಹಣೆಬರಹ; ಕಲ್ಮರ=ಕಲ್ಲು ಮತ್ತು ಮರ; ಹಲುಬು=ರೋದಿಸು/ಅಳು; **ತನಗೆ ಕಟ್ಟಡವಿಯೊಳು ವ್ಯಥಿಸುವಂತಾಯ್ತು. ಅಕಟ... ವಿಧಿ ಎಂದು ಕಲ್ಮರನು ಕರಗುವಂತೆ ಹಲುಬಿದಳು**=ತನಗೆ ದಟ್ಟವಾದ ಕಾಡಿನಲ್ಲಿ ಸಂಕಟಪಡುವಂತಾಯಿತು. ಅಯ್ಯೋ ವಿಧಿಯೇ ಎಂದು ನಿಸರ್ಗದಲ್ಲಿನ ಕಲ್ಲು ಮರಗಳೆಲ್ಲವೂ ತನ್ನ ಸಂಕಟದಲ್ಲಿ ಪಾಲುಗೊಳ್ಳುವಂತೆ ರೋದಿಸತೊಡಗಿದಳು:

ಕೇಣಮ್+ಅನ್; ಕೇಣ=ಕಳಂಕ; **ಕೇಣಮನು ಬಿಟ್ಟು**=ನನಗೆ ಕೆಟ್ಟಹೆಸರು ಬರುತ್ತದೆ ಎಂಬ ಚಿಂತೆಯನ್ನು ಮರೆತು; ಆತ್ಮಘಾತಕ=ಆತ್ಮಹತ್ಯೆ/ವ್ಯಕ್ತಿಯು ತನ್ನನ್ನು ತಾನೇ ಕೊಂದುಕೊಳ್ಳುವುದು; ಭ್ರೂಣ=ಬಸುರಿಯ ಹೊಟ್ಟೆಯಲ್ಲಿರುವ ಮಗು; ಹತ್ಯೆ=ಕೊಲ್ಲು; **ಕೇಣಮನು ಬಿಟ್ಟು ಆತ್ಮಘಾತಕದೊಳು ಈ ಕ್ಷಣಮ್ ಪ್ರಾಣಮನು ತೊರೆದಪೆನೆ... ಗರ್ಭದಿನ್ ಭ್ರೂಣಹತ್ಯಾ ದೋಷಮ್ ಬಂದಪುದು**= ನನ್ನ ಬಾಳಿಗೆ ಕಳಂಕ ತಟ್ಟುತ್ತದೆ ಎಂಬ ಚಿಂತೆಯನ್ನು ಮರೆತು ಆತ್ಮಹತ್ಯೆಯನ್ನು ಮಾಡಿಕೊಂಡು ಈ ಗಳಿಗೆಯಲ್ಲಿ ಜೀವವನ್ನು ಬಿಡೋಣವೆಂದರೆ; ಹೊಟ್ಟೆಯಲ್ಲಿರುವ ಮಗುವನ್ನು ಕೊಂದ ಪಾಪ ನನ್ನನ್ನು ಸುತ್ತಿಕೊಳ್ಳುತ್ತದೆ; ಆರ್ಗೆ=ಯಾರಿಗೆ; ಒರೆ=ಹೇಳು;

ಏಗೈವೆನು... ಆರ್ಗೆ ಒರೆವೆನು ಎಂದು ಒಯ್ಯನೆ ಎದ್ದು=ಈಗ ನಾನು ಏನು ಮಾಡಲಿ... ಯಾರಿಗೆ ನನ್ನ ಈ ಸಂಕಟವನ್ನು ಹೇಳಿಕೊಳ್ಳಲಿ ಎಂದು ಚಿಂತಿಸುತ್ತ, ಕೂಡಲೆ ಮೇಲಕ್ಕೆ ಎದ್ದು; ಏಣ+ಅಕ್ಷಿ; ಏಣ=ಜಿಂಕೆ; ಅಕ್ಷಿ=ಕಣ್ಣು; ಏಣಾಕ್ಷಿ=ಜಿಂಕೆಯ ಕಣ್ಣುಗಳಂತಹ ಕಣ್ಣುಗಳನ್ನುಳ್ಳ ಸೀತೆ; **ಬಳಿಕ ಏಣಾಕ್ಷಿ**

ಅಡವಿಯೊಳು ನಡೆದಳು=ಅನಂತರ ಸೀತೆಯು ಕಾಡಿನಲ್ಲಿ ನಡೆಯುತ್ತ ಸಾಗಿದಳು; ಉಪಲ=ಕಲ್ಲು; ಕಂಟಕ=ಮುಳ್ಳು; ಶ್ರೇಣಿ=ಸಾಲು; ಮೆಲ್ಲಿತ್ತು+ಅಡಿ; ಮೆಲ್ಲಿತ್ತು=ಕೋಮಲವಾದ/ಮೆತ್ತನೆಯ; ಅಡಿ=ಪಾದ; ಮೆಲ್ಲಡಿ= ಕೋಮಲವಾದ ಪಾದ; ಬಸಿ=ಸುರಿ; ನವ= ಹೊಸ; ಶೋಣಿತ=ನೆತ್ತರು/ರಕ್ತ; ಪೊನಲು=ಪ್ರವಾಹ; ಪರಿಯಲು=ಹರಿಯಲು;

ಉಪಲ ಕಂಟಕ ಶ್ರೇಣಿಗಳು ಸೋಂಕಿ ಮೆಲ್ಲಡಿಗಳಿನ್ ಬಸಿವ ನವ ಶೋಣಿತಮ್ ನೆಲದೊಳು ಪೊನಲು ಪರಿಯಲು=ಕಾಡಿನ ಹಾದಿಯಲ್ಲಿ ಸೀತೆಯು ನಡೆಯುತ್ತಿರುವಾಗ ಸಾಲಾಗಿ ಹರಡಿಕೊಂಡಿದ್ದ ಮುಳ್ಳುಗಳು ಚುಚ್ಚಿ, ಕಲ್ಲುಗಳು ಬಡಿದು ಆಕೆಯ ಕೋಮಲವಾದ ಪಾದಗಳಿಂದ ರಕ್ತವು ಅತಿಯಾಗಿ ಹರಿಯತೊಡಗಿತು;

ಅರಸ ಕೇಳು=ಜನಮೇಜಯ ರಾಜನಿಗೆ ರಾಮಾಯಣದ ಕತೆಯನ್ನು ಜೈಮಿನಿ ರಿಸಿಯು ಹೇಳುತ್ತಿದ್ದಾನೆ; ಪೆಣ್ಣ್+ಒಡಲು; ಒಡಲು=ದೇಹ/ಮಯ್; ಪಿಡಿ=ತಾಳು/ಹೊಂದು; **ಪೆಣ್ಣೊಡಲು ಪಿಡಿಯಬಹುದೆ**=ಹೆಣ್ಣಿನ ದೇಹ ಇಂತಹ ಸಂಕಟಗಳನ್ನೆಲ್ಲಾ ತಾಳಿಕೊಳ್ಳಬಲ್ಲುದೆ. ಅಂದರೆ ಸೀತೆಗೆ ಬಂದಿರುವ ಸಂಕಟ ಬಹಳ ಹೆಚ್ಚಿನದು; ಅನ್ನೆಗಮ್=ಆ ಸಮಯದಲ್ಲಿ; ಮಖ=ಯಾಗ; ಯೂಪ= ಯಾಗಕ್ಕೆ ಬಲಿಕೊಡುವ ಪ್ರಾಣಿಯನ್ನು ಕಟ್ಟುವ ಕಂಬ; ಅರಸು=ಹುಡುಕು; ಸನ್ನುತ=ಹೊಗಳಿಕೆಗೆ ಪಾತ್ರನಾದ/ಹೆಸರಾಂತ; ತಪೋಧನ=ತಪಸ್ಸನ್ನೇ ಸಂಪತ್ತಾಗಿ ಪಡೆದವನು/ಮುನಿ;

ಅನ್ನೆಗಮ್ ಮಖಕೆ ಯೂಪವನು ಅರಸುತ ಆ ಬನಕೆ ಸನ್ನುತ ತಪೋಧನನ್ ವಾಲ್ಮೀಕಿ ಮುನಿವರನು ತನ್ನ ಶಿಷ್ಯರು ಬೆರಸಿ ನಡೆತಂದು=ಅದೇ ಸಮಯದಲ್ಲಿ ಯಾಗದ ಕಂಬಕ್ಕೆ ಬೇಕಾದ ಮರವನ್ನು ಹುಡುಕುತ್ತ ಹೆಸರಾಂತ ಮುನಿಯಾದ ವಾಲ್ಮೀಕಿಯು ಆ ಕಾಡಿಗೆ ತನ್ನ ಗುಡ್ಡರೊಡನೆ ಅಲ್ಲಿಗೆ ಬಂದನು;

ಪುಗಲು=ಪ್ರವೇಶಿಸಲು/ಒಳಹೋಗಲು; ದೆಸೆ+ಕಾಣದೆ; ದೆಸೆಗಾಣದೆ=ದಿಕ್ಕು ತೋಚದೆ/ದಾರಿ ಕಾಣದೆ; **ಕಾಡೊಳು ಒರ್ವಳೆ ಪುಗಲು ದೆಸೆಗಾಣದೆ**=ಕಾಡಿನಲ್ಲಿ ಒಬ್ಬಳೇ ಪ್ರವೇಶಿಸಲು ದಾರಿ ಕಾಣದೆ; ಬನ್ನ=ಅಳಲು/ಸಂಕಟ/ಯಾತನೆ; ಬಗೆ+ಕೆಟ್ಟು; ಬಗೆ=ದಾರಿ; ಬಗೆಗೆಟ್ಟು=ದಾರಿತಪ್ಪಿ; ಪಾಡು+ಅಳಿದು; ಪಾಡು=ಗತಿ/ಸ್ಥಿತಿ; ಅಳಿ=ನಾಶಗೊಂಡು; **ಬಗೆಗೆಟ್ಟು ಬನ್ನದಿನ್ ಪಾಡಳಿದು**=ದಾರಿತಪ್ಪಿ ಸಂಕಟದಿಂದ ಗತಿಹೀನಳಾಗಿರುವ ಸೀತೆಯು; ಗ್ರೀಷ್ಮಋತು=ಬೇಸಗೆ ಕಾಲ; ನವೆ=ಬಡವಾಗು/ ನಾಶವಾಗು/ಸೊರಗುವುದು; ಕಾಂತಾರ=ಕಾಡು; ಅಧಿದೇವಿ=ದೊಡ್ಡ ದೇವಿ/ ಮುಖ್ಯ ದೇವತೆ; ಎನಲು=ಎನ್ನುವಂತೆ; **ಗ್ರೀಷ್ಮಋತುವಿಮ್ ನವೆದ ಕಾಂತಾರದ ಅಧಿದೇವಿ ತಾನು ಎನಲು**=ಬೇಸಿಗೆಯ ಬಿಸಿಲಿನ ತಾಪಕ್ಕೆ ಒಣಗಿ ಬಡವಾದ ಕಾಡಿನ

ದೊಡ್ಡದೇವತೆಯೋ ತಾನು ಎನ್ನುವಂತೆ; ಸನ್ನ+ಗದ್ಗದ+ಕಂಠಿ+ಆಗಿ; ಸನ್ನ=ಕುಗ್ಗಿದ ದನಿ; ಗದ್ಗದ=ಬಿಗಿ ಹಿಡಿದ; ಕಂಠ=ಕೊರಳು/ಗಂಟಲು; ರೋದಿಸುತ+ಇರ್ದ; ವೈದೇಹಿ=ಸೀತೆ/ವಿದೇಹ ಎಂಬ ದೇಶದ ರಾಜನಾದ ಜನಕನ ಮಗಳು ಸೀತೆ;

ಸನ್ನಗದ್ಗದಕಂಠಿಯಾಗಿ ರೋದಿಸುತಿರ್ದ ವೈದೇಹಿಯನು ಕಂಡನು= ಸಂಕಟದಿಂದ ಸೀತೆಯ ಗಂಟಲಿನ ನರಗಳು ಬಿಗಿಹಿಡಿದಿರುವುದರಿಂದ ಕುಗ್ಗಿದ ದನಿಯಲ್ಲಿ ಮಾತುಗಳನ್ನು ಆಡುತ್ತ, ಅಳುತ್ತಿರುವ ಸೀತೆಯನ್ನು ವಾಲ್ಮೀಕಿಯು ಕಂಡನು; **ಆರ್ ಇವಳು**=ಯಾರು ಇವಳು; ವನ+ಅಂತರದೊಳು; ಅಂತರ= ನಡುವೆ/ಮಧ್ಯಭಾಗ; **ಈ ವನಾಂತರದೊಳು ಇದೇತಕೆ ಇರ್ದಪಳು**=ದಟ್ಟವಾದ ಈ ಕಾಡಿನ ನಡುವೆ ಇದೇತಕ್ಕಾಗಿ ಇರುವಳು; ಆರಯ್=ವಿಚಾರಿಸು; **ಇದನು ಆರೈವೆನು ಎಂದು ನಡೆತಂದು**=ಇದನ್ನು ವಿಚಾರಿಸುವೆನು ಎಂದು ಸೀತೆಯ ಬಳಿಗೆ ಬಂದು; **ಕರುಣದಿಂದೆ ಆ ರುಷಿ ನುಡಿಸಿದನು**=ಕರುಣೆಯಿಂದ ಆ ರಿಸಿಯು ಆಕೆಯನ್ನು ಮಾತನಾಡಿಸಿದನು; **ಎಲೆ ತಾಯೆ ನೀನು ಆವಳೌ**=ಎಲೆ ತಾಯೆ, ನೀನಾರು;

ಕುರುಪು+ಆಗಿ+ಇರ್ಪುದು; ಕುರುಪು=ಗುರುತು; **ಕಂಡ ಕುರುಪಾಗಿರ್ಪುದು**= ನಿನ್ನನ್ನು ಈ ಮೊದಲು ಎಲ್ಲಿಯೋ ನೋಡಿದ ನೆನಪಾಗುತ್ತಿರುವುದು; ಗಹನ=ಕಾಡು; **ಅಕಟ, ಘೋರತರ ಗಹನಕೆ ಒರ್ವಳೆ ಎಂತು ಬಂದೆ**=ಅಯ್ಯೋ... ಭಯಂಕರವಾದ ಕಾಡಿಗೆ ಒಬ್ಬಳೆ ಹೇಗೆ ಬಂದೆ...; ಭೀರು=ಹೆದರಿದವಳು; ಹೆದರಬೇಡ, **ಭೀರು ಹೇಳೌ**=ಹೆದರಬೇಡ, ನಿನ್ನ ವಿವರವನ್ನು ಹೇಳು; ಭೂರಿ+ಶೋಕ+ಆರ್ತರ್+ಆಗಿ+ಇರ್ದರನು; ಭೂರಿ=ಹೆಚ್ಚು; ಶೋಕಾರ್ತರು= ಸಂಕಟಕ್ಕೆ ಒಳಗಾದವರು; ಇರ್ದರನು=ಇರುವವರನ್ನು;

ನಾನು ವಾಲ್ಮೀಕಿ. ಭೂರಿಶೋಕಾರ್ತರಾಗಿರ್ದರನು ಕಂಡು ಸುಮ್ಮನೆ ಪೋಪನಲ್ಲ ಎಂದನು=ನಾನು ವಾಲ್ಮೀಕಿ. ಅತಿಯಾದ ಸಂಕಟದಲ್ಲಿ ನರಳುತ್ತಿರುವವರನ್ನು ಕಂಡು ಸುಮ್ಮನೆ ಹೋಗುವವನಲ್ಲ. ಅಂದರೆ ನನ್ನಿಂದಾಗುವ ನೆರವನ್ನು ಅಂತಹವರಿಗೆ ನೀಡುತ್ತೇನೆ; ಹರುಷ=ಹಿಗ್ಗು/ಆನಂದ; ಒತ್ತರಿಸು=ಹೆಚ್ಚಾಗು/ನುಗ್ಗು; **ಹರುಷಮ್ ಒತ್ತರಿಸಿದುದು**=ಹಿಗ್ಗು ಉಕ್ಕಿಬಂದಿತು; ಇಮ್ಮಡಿಸು=ಎರಡು ಪಟ್ಟು ಹೆಚ್ಚಾಗುವುದ; **ಶೋಕ ಇಮ್ಮಡಿಸಿದುದು**=ಸಂಕಟ ಹೆಚ್ಚಾಯಿತು; ಭೂಮಿಜೆ=ಸೀತೆ; ಲಜ್ಜೆ=ನಾಚಿಕೆ; ಬೆರಸು=ಕೂಡು; **ಭೂಮಿಜೆಗೆ ಲಜ್ಜೆ ಬೆರಸಿದುದು**=ಸೀತೆಗೆ ನಾಚಿಕೆ ಯುಂಟಾಯಿತು;ಸ್ವರ=ದನಿ; **ಅಂದು ಗದ್ಗದ ಸ್ವರದಿಂದ ಸೀತೆ**=ಆಗ ಸೀತೆಯು ಕಂಪಿಸುತ್ತಿರುವ ದನಿಯಿಂದ ನುಡಿಯ ತೊಡಗಿದಳು; ತರಣಿ+ಕುಲ+ಸಂಭವನು; ತಾ=ತಾನು; ತರಣಿ=ಸೂರ್ಯ; ಕುಲ=ವಂಶ; ಸಂಭವನು=ಹುಟ್ಟಿದವನು;

ತರಣಿಕುಲಸಂಭವ=ರಾಮ; ತಾ=ತಾನು; ಲೋಕಾಪವಾದ=ರಾಜ್ಯದಲ್ಲಿನ ಪ್ರಜೆಯೊಬ್ಬನು ಆಡಿದ ನಿಂದನೆಯ ನುಡಿ;

ತರಣಿಕುಲಸಂಭವನು ತಾ ಲೋಕಾಪವಾದಕೆ, ಅಪರಾಧಿಯಲ್ಲದ ತನ್ನನು ಬಿಟ್ಟನು ಎಂದು ಸುಮಿತ್ರಾತ್ಮಜನ್ ಈ ವನದೊಳಿರಿಸಿ ಪೋದನು="ರಾಮನು ತನ್ನ ರಾಜ್ಯದಲ್ಲಿನ ಪ್ರಜೆಯೊಬ್ಬನು ಆಡಿದ ನಿಂದನೆಯ ನುಡಿಯ ಕಾರಣದಿಂದ, ಯಾವುದೇ ತಪ್ಪನ್ನು ಮಾಡದ ತನ್ನನ್ನು ತೊರೆದನು" ಎಂದು ಲಕ್ಷ್ಮಣನು ನನಗೆ ಹೇಳಿ ಈ ಕಾಡಿನಲ್ಲಿ ಬಿಟ್ಟು ಹೋದನು; **ಗರ್ಭಮ್ ಒಡಲೊಳು ಇಹುದು**=ನನ್ನ ಹೊಟ್ಟೆಯಲ್ಲಿ ಮಗುವಿದೆ; ಪೊರೆ=ಕಾಪಾಡು; **ಜೀವಮನು ಪೊರೆಯವೇಳ್ವುದೆ**=ಆ ಜೀವವನ್ನು ನಾನು ಕಾಪಾಡಬೇಕಾಗಿದೆ; **ಏಗೈವೆನು ಎಂದು ಮುನಿಪದದೊಳು ಎರಗಿದಳು**=ಏನು ಮಾಡಲಿ ಎಂದು ಮೊರೆಯಿಡುತ್ತ ಮುನಿಯ ಪಾದಕ್ಕೆ ನಮಸ್ಕರಿಸಿದಳು; ದೇವಿ ಶೋಕಮನ್ ಬಿಡು=ದೇವಿ, ನಿನ್ನ ಶೋಕವನ್ನು ಬಿಡು;

ಪುತ್ರ=ಮಗ; ಯುಗ=ಜೋಡಿ/ಇಬ್ಬರು; **ಪುತ್ರಯುಗಮನ್ ಪಡೆವೆ**=ಅವಳಿ ಜವಳಿ ಗಂಡು ಮಕ್ಕಳನ್ನು ಹಡೆಯುತ್ತೀಯೆ;

ಇನ್ನು ಸಂದೇಹಮನ್ ಭಾವಿಸದಿರು=ಇವರು ಅಪರಿಚಿತರು… ಏನಾಗುವುದೋ ಎಂಬ ಸಂಶಯಕ್ಕೆ ಒಳಗಾಗಬೇಡ;

ಜನಕಂಗೆ ನಾವು ಅನ್ಯರಲ್ಲ=ನಿಮ್ಮ ತಂದೆಯಾದ ಜನಕರಾಜನಿಗೆ ನಾವು ಬೇರೆಯಲ್ಲ. ಅಂದರೆ ರಾಜನಿಗೆ ನಾವು ಬೇಕಾದವರು; **ನಮ್ಮ ಆಶ್ರಮಕೆ ಬಂದು ನೀನು ಸುಖದೊಳು ಇರ್ದೊಡೆ**=ನಮ್ಮ ಆಶ್ರಮಕ್ಕೆ ಬಂದು ನೀನು ನೆಮ್ಮದಿಯಿಂದ ಇದ್ದರೆ; ಆವ+ಆವ; ಆವ=ಯಾವ; ಬಯಕೆ+ಉಂಟು; ಸಲಿಸು=ಈಡೇರಿಸು/ನೆರವೇರಿಸು; **ಆವಾವ ಬಯಕೆಯುಂಟು ಎಲ್ಲಮನ್ ಸಲಿಸಿ**=ಬಸುರಿಯಾಗಿರುವ ನಿನ್ನ ಮನದಲ್ಲಿ ಯಾವ ಯಾವ ಆಸೆಗಳು ಇವೆಯೋ ಅವೆಲ್ಲವನ್ನೂ ಈಡೇರಿಸಿ; ಓವಿಕೊಂಡು+ಇರ್ಪೆನು; ಓವು=ಕಾಪಾಡು; ಅಂಜು=ಹೆದರು;

ನಿನ್ನನು ತಾನು ಓವಿಕೊಂಡಿರ್ಪೆನು. ಅಂಜದಿರು ಎಂದು ಸಂತೈಸಿ=ನಿನ್ನನ್ನು ನಾನು ಕಾಪಾಡಿಕೊಂಡಿರುವೆನು. ಹೆದರಬೇಡ ಎಂದು ಸೀತೆಯ ಸಂಕಟವನ್ನು ಪರಿಹರಿಸಿ; ರಾವಣ+ಅರಿ; ಅರಿ=ಹಗೆ/ಶತ್ರು; ರಾವಣಾರಿ=ರಾವಣನಿಗೆ ಶತ್ರುವಾದ ರಾಮ; ನಿಜ=ತನ್ನ; **ರಾವಣಾರಿಯ ರಾಣಿಯನು ನಿಜತಪೋವನಕೆ ವಾಲ್ಮೀಕಿ ಕರೆತಂದನು**=ವಾಲ್ಮೀಕಿಯು ಸೀತೆಯನ್ನು ತನ್ನ ತಪೋವನಕ್ಕೆ ಕರೆದುಕೊಂಡು ಬಂದನು;

❖

ಸೀತಾ ಪರಿತ್ಯಾಗ ಪರ್ವ
ಹದಿನೆಂಟನೆಯ ಸಂಧಿ

ಉತ್ಸವಕೆ ಬಂದನಿಬರೆಲ್ಲರಂ ಶರಣಜನ
ವತ್ಸಲಂ ಸತ್ಕರಿಸಿ ಬೀಳ್ಕೊಟ್ಟು ರಾಜ ಸಂ
ಪತ್ಸುಖದೊಳಿರ್ಪನಿತರೊಳ್ಬಳಿಕ ಸೀತೆ ನಿಜಕಾಂತನೇಕಾಂತಕೈದಿ
ಕುತ್ಸಿತಂ ಪೊದ್ದದಾಶ್ರಮದ ಋಷಿಪತ್ನಿಯರ
ಸತ್ಸಂಗದೊಳ್ತನ್ನ ಬೇಸರಂ ತವಿಸುವೆನಿ
ದುತ್ಸಕಂ ತನಗದರಿನಿನ್ನೊಮ್ಮೆ ಬನಕೆ ತನ್ನಂ ಕಳುಹಬೇಕೆಂದಳು ॥೩೯॥

ಆ ಕ್ಷಿತಿಜೆ ಬಯಕೆಯಂ ಬಿನ್ನೈಸೆ ಕೇಳ್ದು ನಗು
ತಾಕ್ಷೇಪದಿಂದೆ ಕಳುಹುವನಾಗಿ ಸಂತೈಸಿ
ರಾಕ್ಷಸಾಂತಕನಿರಲ್ಕೊಂದಿರುಳ್ಕನಸುಗಂಡೇಳುತೆ ವಸಿಷ್ಠನೊಡನೆ
ಈ ಕ್ಷೋಣಿಸುತೆ ಗಂಗೆಯಂ ಕಳೆದು ಕಾಡೊಳ್ಮ
ಹಾಕ್ಷೀಣೆಯಾಗಿ ದೇಸಿಗರಂತೆ ದೆಸೆದೆಸೆಯ
ನೀಕ್ಷಿಸುತೆ ಮರುಗುತಳುತಿರ್ದುದಂ ಕಂಡೆನಿದು ಲೇಸಹುದೆ ಪೇಳೆಂದನು /೪೦/

ಎನೆ ಕನಸಿದೊಳ್ಳಿತಲ್ಲೆಂದದಕೆ ಶಾಂತಿಯಂ
ಮುನಿವರ ವಸಿಷ್ಠಂ ನೆಗಳ್ಚಿದಂ ಬಳಿಕ ಮನ
ದನುತಾಪದಿಂ ಪ್ರಜೆಯನಾರೈವುದಂ ಮರೆದೆರಡು ಮೂರು ದಿವಸಮಿರ್ದು
ಜನಮಲಸಿದಪುದೆಂದು ರಾತ್ರಿಯೊಳ್ಪೊರಮಟ್ಟು
ದಿನಪಕುಲತಿಲಕನೇಕಾಂತದೊಳ್ನಗರಶೋ
ಧನೆಯ ಚಾರರೊಳೊರ್ವನಂ ಕರೆಸಿ ಕೇಳ್ದನಿಂತೆಂದು ವಿನಯೋಕ್ತಿಯಿಂದೆ ॥೪೧॥

ನಿಂದಿಸರಲೇ ಪ್ರಜೆಗಳಿನ್ನೆಗಂ ತನ್ನ ಗುಣ
ಕೊಂದಿಸರಲೇ ಪಳಿವನಮಲತರ ಕೀರ್ತಿಯಂ
ಕಂದಿಸರಲೇ ದೂಸರಿಂದೆ ಭುಜವಿಜಯ ಪ್ರತಾಪ ತೇಜವನಿಳೆಯೊಳು
ನಂದಿಸರಲೇ ಜರೆದು ನಿಜವಂಶದೇಳ್ಗೆಯಂ
ಕುಂದಿಸರಲೇ ಖೋಡಿಗಳೆದು ವಹಮಾನದೊ
ಳ್ಸಂಧಿಸರಲೇ ಕೊಂಕುಕೊರತೆಗಳನೆಂದವನನಸುರಾರಿ ಬೆಸಗೊಂಡನು ॥೪೨॥

ದೇವ ನಿನ್ನಂ ಪೆಸರಿಸಿದನೀಶನಾದಪಂ
ಸೇವಿಸಿದವಂ ಚತುರ್ಮುಖನಾಗಲುಳ್ಳವಂ
ಕಾವುದೆಂದ್ಯೆದೆ ಮರೆವೊಕ್ಕವಂ ಜಗದೊಳಾಚಂದ್ರಾರ್ಕಮಾಗಿ ಬಾಳ್ವಂ
ಶ್ರೀವಿಭವದಿಂ ಶಕ್ರಪದವಿಯಂ ಜರೆದಪಂ
ಭೂವಲಯದೊಳ್ನಿಂದಿಸುವರುಂಟೆ ತರಣಿಯಂ
ಕಾವಳಂ ಮುಸುಕಿರ್ದೊಡೇನಪ್ಪುದೆಂದವಂ ಬಿನ್ನೈಸಿ ಕೈಮುಗಿದನು ॥೪೩॥

ಏನಾದೊಡಂ ಕಟಕಿಯಾಗಿರ್ಪುದೀ ಮಾತು
ಭಾನುವಂ ಕಾವಳಂ ಮುಸುಕಲೇನೆನಲೆನ್ನ
ಧೀನವಾದರಸುತನಕಾವುದೂಣೆಯಮೆಂಬರೆಂದು ರಘುಪತಿ ಕೇಳಲು
ನೀನೆ ಪಾವನರೂಪನೆಂಬುದಂ ಮುನಿಯ ವಧು
ತಾನೆ ತೋರಿಸಳೆ ಲೋಕದ ಜನಕೆ ಜಗದೊಳ
ಜ್ಞಾನಿಗಳ್ನುಡಿದ ನಿಂದೆಯನುಸಿರಲಮ್ಮೆನೆಂದವನೆರಗಿದಂ ಪದದೊಳು ॥೪೪॥

ಏಳಂಜಬೇಡಿನ್ನು ಮಾಜದಿರ್ತನ್ನಾಣೆ
ಹೇಳೆಂದು ರಘುಕುಲಲಲಾಮನೊತ್ತಾಯದಿಂ
ಕೇಳಲವನೆಂದನವಧರಿಸೊರ್ವ ಮಡಿವಳಂ ಮಲಿನಮಂ ತೊಳೆವನಾಗಿ
ಕಾಳುಗೆಡೆದಂ ಜೀಯ ಸದ್ಗುಣಚರಿತ್ರನಾ
ಮಾಳಿಯಂ ಜಗಮಂ ಪುನೀತಮಂ ಮಾಳ್ಪ ನಿ
ನ್ನೇಳಿಗೆಯನವನೆತ್ತ ಬಲ್ಲನೆನಲೇನೆಂದನೆನಲಾತನಿಂತೆಂದನು ॥೪೫॥

ಪೆಂಡತಿ ತವರ್ಮನೆಗೆ ಮುಳಿದು ಪೇಳದೆ ಪೋದ
ಚಂಡಿತನಕವಳ ತಾಯ್ತಂದೆಗಳ್ಕಳುಹಬಂ
ದಂಡಲೆದೊಡಿನ್ನೊಲ್ಲೆನಗಲಿರ್ದ ಮಡದಿಯಂ ಮತ್ತೆ ರಘುನಾಥನಂತೆ
ಕೊಂಡಾಳುವವನಲ್ಲ ತಾನೆಂದು ರಜಕನು
ದ್ದಂಡದೊಳ್ನುಡಿಯೆ ಕಿವಿಮುಚ್ಚಿಕೊಳುತೆಯ್ದಿದೆನ
ಖಂಡಿತದ ಮಂತ್ರಪೂತದ ಹವಿಯನರಿದೆಂಜಲಿಪುದೆ ವಾಯಸಮೆಂದನು ॥೪೬॥

ಎಂದು ಬಿನ್ನೈಸೆ ಕೇಳ್ದಾತನಂ ಕಳುಹಿ ರಘು
ನಂದನಂ ಬಂಧನಕ್ಕೊಳಗಾದ ಮತ್ತಗಜ
ದಂದದಿಂ ನಿಜಶಿರವನೊಲೆದು ಮೂಗಿನ ಮೇಲೆ ಬೆರಳಿಟ್ಟು ಮೌನದಿಂದೆ
ನಿಂದು ಸ್ವೈವೆರಗಾಗಿ ನೆನೆನೆನೆದು ಚಿತ್ತದೊ
ಳ್ನೊಂದು ಬಿಸುಸುಯ್ದು ಕಡುಪಳಿದು ಕಾತರಿಸಿ ಕಳೆ
ಗುಂದಿ ದುಮ್ಮಾನದಿಂ ಪೊಕ್ಕನಂತಃಪುರಕೆ ಪುತ್ತವುಗುವಹಿಪನಂತೆ ॥೪೭॥

ಓಲಗಂಗುಡದೆ ಬಾಗಿಲ್ಗೆ ಬಂದಖಿಳ ಭೂ
ಪಾಲರಂ ಕರೆಸಿ ಕಾಣಿಸಿಕೊಳ್ಳದೊಳಗೆ ಚಿಂ
ತಾಲತಾಂಗಿಯ ಕೇಳಿಗೆಡೆಗೊಟ್ಟು ರಾಜೇಂದ್ರನಿರೆ ಕೇಳ್ದು ಭೀತಿಯಿಂದೆ
ಆ ಲಕ್ಷ್ಮಣಾದಿಗಳ್ಪೊಕ್ಕರಂತಃಪುರವ
ನಾಲಿಂಗಿಸಿದ ಜಾಡ್ಯದಿಂದೆ ಜಡಿದವಯವದ
ನೀಲಾಂಗನಂ ಕಂಡು ಕಾಲ್ಗೆರಗಿ ನುಡಿಸಲಮ್ಮದೆ ಸುಮ್ಮನಿರುತಿರ್ದರು ॥೪೮॥

ಎದ್ದು ಕುಳ್ಳಿರ್ದು ಕರುಣಾಳುಗಳ ಬಲ್ಲಹಂ
ಮುದ್ದುಗೈದನುಜರಂ ಕರೆದಿಳೆಯೊಳಿಂದೆನಗೆ
ಪೊದ್ದಿದಪವಾದಮಂ ನೀವರಿದುದಿಲ್ಲಕಟ ಸಾಕಿನ್ನು ನೆರವಿಗಳೊಳು
ಕದ್ದ ಕಳ್ಳನವೊಲಾಡಿಸಿಕೊಳಲ್ಕಾರೆನೊಡ
ಲಿದ್ದಲ್ಲಿ ನಿಂದೆಗೊಳಗಾಗಿ ಬದುಕುವನಲ್ಲ
ತಿದ್ದಿ ತೀರದ ವಿಲಗಕಂಜುವೆಂ ಸೀತೆಯಂ ಬಿಟ್ಟಲ್ಲದಿರೆನೆಂದನು ॥೪೯॥

ಇವಳಯೋನಿಜೆ ರೂಪ ಗುಣಶೀಲ ಸಂಪನ್ನೆ
ಭುವನಪಾವನೆ ಪುಣ್ಯಚರಿತೆ ಮಂಗಳ ಮಹೋ
ತ್ಸವೆ ಪತಿವ್ರತೆಯೆಂಬುದಂ ಬಲ್ಲೆನಾದೊಡಂ ನಿಂದೆಗೊಳಗಾದ ಬಳಿಕ।
ಅವನಿಸುತೆಯಂ ತನಗೆ ಬಿಡುವುದೇ ನಿಶ್ಚಯಂ
ರವಿಕುಲದ ರಾಯರಪಕೀರ್ತಿಯಂ ತಾಳ್ದಪರೆ
ಕುವರನಾಗಿರ್ದ ತನ್ನಂ ತಾತನುಳಿದುದಿಲ್ಲವೆ ಸತ್ಯಭಾಷೆಗಾಗಿ ॥೫೦॥

ಕಲಿಯುಗದ ವಿಪ್ರರಾಚಾರಮಂ ಬಿಡುವಂತೆ
ಪಲವು ಮಾತೇನಿನ್ನು ಸೀತೆಯಂ ಬಿಟ್ಟೆನೆನೆ
ಬಲುಗರಮಿದೆತ್ತಣದೊ ಕಾರುಣ್ಯನಿಧಿಗೆನುತೆ ನಡನಡುಗಿ ಭೀತಿಯಿಂದೆ
ನೆಲೆಗೊಂಡ ವೇದಮಂ ಧರೆಯ ಪಾಷಂಡಿಗ
ಳ್ಸಲೆ ನಿಂದಿಸಿದೊಡದಂ ಮಾಣ್ಬರೇ ದ್ವಿಜರಕಟ
ಕುಲವರ್ಧಿನಿಯನೆಂತು ಬಿಡುವೆ ನೀಂ ಪೇಳೆಂದರನುಜಾತರಗ್ರಜಂಗೆ ॥೫೧॥

ಭಯಶೋಕದಿಂದೆ ಗದ್ಗದಿಸೆ ಕಂಠದೊಳಶ್ರು
ನಯನದೊಳ್ತುಳುಕೆ ಭರತಂ ಕರೆವ ಕಪಿಲೆಯಂ
ನಯವಿದರ್ಪೊಡೆದಡವಿಗಟ್ಟುವರೆ ಪಾವಕನೊಳರಸಿಯಂ ಪುಗಿಸಿದಂದು
ಪ್ರಿಯೆ ನಿನಗೆ ಪರಿಶುದ್ಧೆ ಕುಲಕೆ ಮಂಗಳೆ ಸುತೋ
ದಯಕೆ ನಿರ್ಮಲೆ ತನಗೆ ಗತಿಗುಡುವ ಸೊಸೆಯೆಂದು
ಬಯಸಿದೊಡೆ ಬಂದಯ್ಯನಾಡನೆ ಸುರಾಸುರರಮುಂದೆ ಕಪಿಕಟಕಮರಿಯೆ ॥೫೨॥

ಅದನೆಲ್ಲಮಂ ಮರೆದು ಹುಲುಮನುಜ ರಜಕನಾ
ಡಿದ ದೂಸರಂ ನೆನೆದು ಕುಲಪತ್ನಿಯಂ ಬಿಡುವ
ಹದನಾವುದಕಟ ಗುರುಲಘುವಿನಂತರವನೆಣಿಸದೆ ಬರಿದೆ ಮೂಢರಂತೆ
ಎದೆಗೆಟ್ಟು ದೇವಿಯಂ ದೋಷಿಯೆಂಬರೆ ಜೀಯ
ಪದುಳವಿಹುದೆಂದು ವಿನಯದೊಳಗ್ರಜಾತನಂ
ಕದುಬಿ ನುಡಿದಂ ಭರತನಾತನಂ ನೋಡುತೊಯ್ಯನೆ ಭೂಪನಿಂತೆಂದನು ॥೫೩॥

ತಮ್ಮ ನೀನಾಡಿದಂತವನಿಸುತೆ ವಿರಜೆಯಹು
ದುಮ್ಮಳಿಸಬೇಡ ಸೈರಿಸಲಾರೆನೀ ದೂಸ
ರಂ ಮಹಿಯೊಳುಳಿವರೇ ಪೃಥು ಪುರೂರವ ಹರಿಶ್ಚಂದ್ರಾದಿ ನರಪತಿಗಳು
ಸುಮ್ಮನಪಕೀರ್ತಿಗೊಳಗಾಗಲೇತಕೆ ಮಮತೆ
ಯಂ ಮಹಾಯೋಗಿ ಬಿಡುವಂತಿವಳನುಳಿವೆನೆನೆ
ಹಮ್ಮೈಸಿ ಲಕ್ಷ್ಮಣಂ ಕಂಪಿಸುತೆ ಕಿವಿಮುಚ್ಚುತಗ್ರಜಂಗಿಂತೆಂದನು ॥೫೪॥

ಕಾಯಸುಖಕೋಸುಗಂ ಧರ್ಮಕೃತಮಂ ಬಿಡುವೊ
ಲಾಯತಾಕ್ಷಿಯ ಭಾವಶುದ್ಧಿಯಂ ತಿಳಿದಿರ್ದು
ವಾಯದಪವಾದಕಿಂತರಸಿಯಂ ತೊರೆಯಬೇಕೆಂಬರೇ ನಿಷ್ಕರುಣದಿ
ಜೀಯ ತುಂಬಿದ ಬಸಿರ್ಬಸಲಾದ ದೇವಿಯಂ
ಪ್ರಿಯದಿಂದಾರೈದು ಸಲಹಬೇಕೆಂದು ರಘು
ರಾಯಂಗೆ ಲಕ್ಷ್ಮಣಂ ಬಿನ್ನೈಸೆ ಮೇಲ್ವಾಯ್ದು ಶತ್ರುಘ್ನನಿಂತೆಂದನು ॥೫೫॥

ಬಿಡುವೆರಂತಿಕ್ಷ್ವಾಕುವಂಶದವರರಸಿಯಂ
ನುಡಿವರೆಂತಿಳೆಯೊಳಾರಾದೊಡಂ ದೂಸರಂ
ಪಡೆವರೆಂತಮಲ ಸತ್ಕೀರ್ತಿಯಂ ಬುದ್ಧಿವೇಳ್ವುದಕೊಡೆಯರಿಲ್ಲವಾಗಿ
ಕಡಿವರೆಂತೇಳ್ಗೆಯಂ ಪೆಣ್ಣಳಲ್ವೆಂಕಿಯಿಂ
ಸುಡುವರೆಂತನ್ವಯದ ಬಾಳ್ಕೆಯನಿದಕ್ಕೆ ಕಿವಿ
ಗುಡುವರೆಂತೀಗಳೆನ್ನೊಡಹುಟ್ಟಿದವರೆನುತೆ ಶತ್ರುಘ್ನನುರಿದೆದ್ದನು ॥೫೬॥

ಅರಸ ಕೇಳನುಜರಾಡಿದ ನುಡಿಗೆ ತಲೆವಾಗಿ
ತರಣಿಕುಲತಿಲಕನೊಯ್ಯನೆ ದೈನ್ಯಭಾವದಿಂ
ತರಹರಿಸಬಾರದಪವಾದ ಹೃಚ್ಛೂಲಮಂ ತನಗೆ ಜಾನಕಿಯನುಳಿದು
ಪೆರೆಯುರ್ಚಿದುರಗನಂತಿರ್ದಪೆಂ ಸಾಕು ನಿಮ
ಗೊರೆದೊಡೇನಹುದೆಂದು ಬೇಸರೊಳ್ಮನೆಗಳ್ಗೆ
ಭರತ ಶತ್ರುಘ್ನರಂ ಕಳುಹುತೇಕಾಂತದೊಳ್ಸೌಮಿತ್ರಿಗಿಂತೆಂದನು ॥೫೭॥

ತಮ್ಮ ಬಾ ನೀನಿಂದುವರೆಗೆ ತಾನೆಂದ ಮಾ
ತಮ್ಮೀರಿದವನಲ್ಲ ಕೆಲಬಲವನಾರಯ್ಯು
ತಮ್ಮರುಗದಿರು ತನ್ನ ಕೊರಳಿಗಿದೆ ಖಡ್ಗಮಲ್ಲದೊಡೀಗ ಜಾನಕಿಯನು
ಉಮ್ಮಳಿಸದೊಯ್ದು ಗಂಗೆಯ ತಡಿಯರಣ್ಯದೊ
ಳ್ಸುಮ್ಮನೆ ಕಳುಹಿ ಬರ್ಪುದವಳೆನ್ನೊಳಾಡಿರ್ಪ
ಳೊಮ್ಮೆ ಕಾನನಕ್ಕೈದಬೇಕೆಂದು ಬಯಕೆಯಿಂದದೆ ನೆವಂ ನಿನಗೆಂದನು ॥೫೮॥

ಎನೆ ರಾಘವೇಂದ್ರ ನಿನ್ನಾಜ್ಞೆಯಂ ಮೀರಲ್ಕೆ
ತನಗೆ ರೌರವಮಪ್ಪುದೆಂದುದಂ ಮಾಡಲ್ಕೆ
ಜನನಿಯಂ ಕೊಂದುಗ್ರಗತಿಯಪ್ಪುದೇಗೈವೆನೆಂದು ಕಡುಶೋಕದಿಂದೆ
ತನು ಝೋಂಪಿಸಲ್ಕೆ ಸೆರೆಬಿಗಿದು ಕಂಬನಿಯಿಂದೆ
ನನೆದಳಲ್ದೊರೆಯೊಳಾಳ್ದನುಜಂ ಘೂರ್ಮಿಸುತೆ
ನಿನಗೆ ದೋಷವೆ ತಾನಿರಲ್ಕೆ ನಡೆ ಕಳುಹೆಂದರಸನೇಂ ದಯೆದೊರೆದನೋ ॥೫೯॥

ಅಣ್ಣದೇವನೊಳಿಡಿದ ವಾತ್ಸಲ್ಯಮೆಂಬ ಬ
ಲ್ಗಣ್ಣಿಯೊಳ್ಕಟ್ಟುವಡೆದಲ್ಲೆನಲರಿಯದೆ ನಿ
ರ್ವಿಣ್ಣಭಾವದೊಳಂದು ಲಕ್ಷ್ಮಣಂ ತುರಗ ಸಾರಥಿ ಕೇತನಂಗಳಿಂದೆ
ಹಣ್ಣಿದ ವರೂಥಮಂ ತರಿಸಿ ಪೊರಗಿರಿಸಿ ನೆಲ
ವೆಣ್ಣ ಮಗಳಿರುತಿರ್ದ ರಾಜಮಂದಿರಕೈದಿ
ಕಣ್ಣೊಳೀಕ್ಷಿಸದೆ ತಲೆವಾಗಿ ದೂರದೊಳೆ ನಿಂದಾ ಸೀತೆಗಿಂತೆಂದನು ॥೬೦॥

ತಾಯೆ ನೀನೇತಕೆಳಸಿದೆ ನಿನ್ನನೀಗ ರಘು
ರಾಯಂ ತಪೋವನಕೆ ಕಳುಹಿ ಬರಹೇಳಿದಂ
ಪ್ರಿಯಮುಳ್ಳೊಡೆ ರಥಂ ಪಣ್ಣಿ ಬಂದಿದೆಕೊ ಬಿಜಯಂಗೈವುದೆಂದು ಮರುಗಿ
ಛಾಯೆಗಾಣಿಸಿ ಸುಮಿತ್ರಾತ್ಮಜಂ ನುಡಿದಭಿ
ಪ್ರಾಯಮಂ ತಿಳಿಯದತಿ ಸಂಭ್ರಮಾನ್ವಿತೆಯಾದ
ಳಾಯತಾಂಬಕಿ ತನ್ನಭೀಷ್ಟಮಂ ಸಲಿಸುವಂ ಕಾಂತನೆಂಬುತ್ಸವದೊಳು ॥೬೧॥

ಅಂಬುಜಾನನೆ ಬಳಿಕ ಪಯಣಮಂ ನಿಶ್ಚೈಸಿ
ನಂಬಿದರಭೀಷ್ಟಮಂ ಸಲಿಸುವ ಕೃಪಾಳು ತಾ
ನೆಂಬುದಂ ಕಾಣಿಸಿದನಿಂದೆನ್ನ ಕಾಂತನೆನಗೆಂದು ಕೌಸಲೆಗೆ ಪೇಳ್ದು
ಮುಂಬರಿದೊಡಂಬಡಿಸಿ ಬಲವಂದು ಕಾಲ್ಗೆರಗಿ
ತುಂಬಿದ ಪರಕೆವೆತ್ತು ಕೈಕಯೀ ದೇವಿಗೆ ಶಿ
ರಂಬಾಗಿ ವರಸುಮಿತ್ರೆಗೆ ನಮಿಸಿ ಸಖಿಯರಂ ಸಂತೈಸಿ ಬೀಳ್ಕೊಂಡಳು ॥೬೨॥

ಮಿಗೆ ತಪೋವನದ ಋಷಿಗಳ್ಗೆ ಮುನಿಪತ್ನಿಯ
ರ್ಗಗರು ಚಂದನ ಕುಂಕುಮಾನುಲೇಪನಗಳಂ
ಬಗೆಬಗೆಯ ದಿವ್ಯಾಂಬರಗಳಂ ವಿವಿಧ ಮಣಿಭೂಷಣ ಸುವಸ್ತುಗಳನು
ತೆಗೆದು ಕಟ್ಟಿಸಿ ರಥದೊಳಿಂಬಿಟ್ಟು ರಾಮನಂ
ಪ್ಗಿಗಳ ಚೆಂಬೊನ್ನ ಪಾವುಗೆಗಳಂ ತರಿಸಿಕೊಂ
ಡುಗುಮಿಗೆಯ ಹರುಷದೊಳಡರ್ದಳಂಗನೆ ಮಣಿವರೂಥಮಂ ನಿಜಮಿದೆಂದು ॥೬೩॥

ಅಗ್ರಜಂ ತರಿಸಂದು ತನ್ನೊಳಾಡಿದ ಕಜ್ಜ
ದುಗ್ರಮಂ ಬನಕೆ ಪೋದಪೆನೆಂಬ ದೇವಿಯ ಸ
ಮಗ್ರಸಂತೋಷಮಂ ಕಂಡು ಸೌಮಿತ್ರಿ ಮನದೊಳ್ಮರುಗಿ ಕಂಬನಿಯನು।
ನಿಗ್ರಹಿಸಿಕೊಂಡು ಸಾರಥಿಗೆ ಸೂಚನೆಗೈದು
ವ್ಯಗ್ರದಿಂದೈದಿಸಿದನಾರಥವನಾಗ ದೇ
ವಗ್ರಾಮನಿಲಯ ಲಕ್ಷ್ಮೀಶನುಂಗುಟದೊಳೊಗೆದಮಲಜಾಹ್ನವಿಯ ತಡಿಗೆ ॥೬೪॥

ಹತ್ತೊಂಬತ್ತನೆಯ ಸಂಧಿ

ಅರಸ ಕೇಳ್ಸೌಮಿತ್ರಿ ವೈದೇಹಿಯನೆ ಕೊಂಡು
ತೆರಳುವ ರಥಾಗ್ರದೊಳ್ಚಲಿಸುವ ಪತಾಕೆ ರಘು
ವರನಂಗನೆಯನುಳಿದನಹಹಯೆಂದಡಿಗಡಿಗೆ ತಲೆಗೊಡುಹುವಂತಿರಲ್ಕೆ
ಪರಮದಾರುಣಮಾಯ್ತಿದೆಂದಯೋಧ್ಯಾಪುರದ
ನೆರವಿಯ ಜನಂ ಗುಜುಗುಜಿಸಿ ಮನದೆ ಕರಗಿ ಕಾ
ತರಿಸುತಿರೆ ಪರಿಸಿದಂ ಕಾಲ್ಪಟ್ಟೆಗೊಂಡನಿಲವೇಗದಿಂದಾ ರಥವನು ॥೧॥

ಧುರದೊಳಾಂತರನಿರಿದು ಮೆರೆಯಲೇರುವ ರಥಂ
ತರಳೆಯಂ ಕಾನನಕೆ ಕಳುಹಲಡರ್ವಂತಾಯ್ತು
ಧರೆಯೊಳಾರ್ತರನ್ನೈದೆ ರಕ್ಷಿಸುವ ಬುದ್ಧಿ ಕೋಮಲೆಯ ಕೊಲೆಗೆಲಸಕಾಯ್ತು
ಕರುಣಮಿಲ್ಲದೆ ಹೊರೆವ ಹರಣಮಂ ಸುಡಲಿ ನಿ
ಷ್ಠುರದೊಳೆಂತೀಕೃತ್ಯಮೆಸಗುವೆನೊ ರಾಘವೇ
ಶ್ವರನೆಂತಿದಕ್ಕೆ ಬೆಸಸಿದನೊ ತನಗೆನುತೆ ಸೌಮಿತ್ರಿ ಮರುಗುತೆ ನಡೆದನು ॥೨॥

ಬಳ್ಳೊರಲ್ದುದು ಮುಂದೆ ಮಾರ್ಗವಂ ದಾಂಟಿದುದು
ಕುಳ್ಳಿರ್ದ ಮೃಗಮೆದ್ದು ಬಲದ ಕಣ್ಣದಿರೆ ಕಂ
ಡಳ್ಳೆರ್ದೆಯೊಳವನಿಸುತೆ ನೋಡು ಲಕ್ಷ್ಮಣ ದುರ್ನಿಮಿತ್ತಂಗಳಂ ಪಥದೊಳು
ಡಿಳ್ಳಮಾದಪುದೀಗಳೆನ್ನ ಮನಮಿದಕೆ ಮುಂ
ದೊಳ್ಳಿತಾಗಲಿ ರಾಮನಾಯುಷ್ಯಕೈಶ್ವರ್ಯ
ಕುಳ್ಳ ಭುಜಬಲಕಸುರರಂ ಗೆಲ್ದ ರಾಘವಂ ನಮ್ಮಂ ಸಲಹಲೆಂದಳು ॥೩॥

ಅನ್ನೆಗಂ ಜಾನಕಿಯ ಕಣ್ಗೆ ತೋರಿತು ಮುಂದೆ
ಸನ್ನುತ ರಘೂದ್ವಹನ ಕೀರ್ತಿಯೆನೆ ಮೂವಟ್ಟೆ
ಯನ್ನಡೆದು ಮುಕ್ಕಣ್ಣನಂ ಸಾರ್ದು ಮೂಜಗದ ಪಾಪಮಂ ಮುರಿದು ಮುಕ್ಕಿ
ಮುನ್ನೀರು ಮುಂತಾಗಿ ಮೂದೇವರೊಳಗಾದ
ಮುನ್ನುಳ್ಳ ಮೂವತ್ತು ಮೂರ್ಕೋಟಿ ವಿಬುಧರಂ
ತನ್ನೊಳ್ಮುಳುಗಿದರಣಕಿಪ ಪೆಂಪೊದವಿ ಪರಿವ ಬೆಳ್ವೊನಲ್ದಿವಿಜನದಿಯ॥೪॥

ತೆರತೆರದ ಕಲ್ಲೋಲ ಮಾಲೆಗಳ ಲೀಲೆಗಳ
ಬೆರೆಬೆರೆವ ರಾಜಹಂಸಾಳಿಗಳ ಕೇಳಿಗಳ
ಪರಿಪರಿಯ ನೀರ್ವನಿಗಳಾಕರದ ಶೀಕರದ ನೊರೆಯ ಬೊಬ್ಬುಳಿಯ ಸುಳಿಯ
ಮೊರೆಮೊರೆದು ಘೂರ್ಮಿಸುವ ಪರಿವುಗಳ ಮುರಿಗಳ
ತಿರುತಿರುಗಿ ಸುಳಿವ ಜಲಜಂತುಗಳ ಗೊಂತುಗಳ
ನೆರೆನೆರೆದು ಮುನಿಜನಂ ಸೇವಿಸುವ ಭಾವಿಸುವ ಗಂಗೆಗವನಿಜೆ ಬಂದಳು ॥೩॥

ತೆಂಗೆಳಗವುಂಗು ಪನಸಂ ದ್ರಾಕ್ಷೆ ಜಂಬು ನಾ
ರಂಗ ಜಂಬೀರ ಖರ್ಜೂರ ಕಿತ್ತಿಳೆ ಮಾತು
ಳಂಗ ತಿಂತ್ರಿಣಿ ಚೂತ ನೆಲ್ಲಿ ಬಿಲ್ವ ಕಪಿತ್ಥಮೆಂಬ ನಾನಾ ತರುಗಳು
ತೊಂಗುವ ಫಲಾವಳಿಯ ಭಾರಂಗಳಾವಗಂ
ಪಿಂಗವಿವನಿಳೆಗಿಳಿಪಬೇಕೆಂದು ಬಾಗಿದೊಂ
ದಂಗಮನೆ ಕಣ್ಗೆಸೆದುವಿಕ್ಕೆಲದೊಳಾ ಜಾಹ್ನವಿಯ ತಡಿಯ ಬನದೆಡೆಯೊಳು ॥೬॥

ಇಳಿದು ರಥದಿಂದೆ ಮಂದಾಕಿನಿಗೆ ಪೊಡಮಟ್ಟು
ಬಳಿಕ ನಾವಿಕರೊಡನೆ ನಾವದೊಳ್ಗಂಗೆಯಂ
ಕಳೆದು ನಿರ್ಮಲ ತೀರ್ಥದೊಳ್ಮಿಂದು ಸೌಮಿತ್ರಿ ಮತ್ತೆ ಭೂಜಾತೆ ಸಹಿತ
ಒಳಗೊಳಗೆ ಮರುಗಿ ಬಿಸುಸುಯ್ದು ಚಿಂತಿಸುತೆ ಮುಂ
ದಳೆದುಗ್ರ ಮೃಗಪಕ್ಷಿ ಗಣದಿಂದ ಘೂರ್ಮಿಸುವ
ಹಳುವಮಂ ಪೊಕ್ಕನಡಿಯಿಡುವೊಡಸದಳಮೆಂಬ ಕರ್ಕಶದ ಮಾರ್ಗದಿಂದೆ ॥೭॥

ಶಕುನಿ ಚೀತ್ಕಾರ ಘೋಷಣಮಯಂ ತೃಣಮಯಂ
ವಿಕಿರದುಪಲಾಳಿ ಕರ್ಕಶಮಯಂ ಶಶಮಯಂ
ಪ್ರಕಟ ಕಂಟಕ ಕೀರ್ಣ ತರುಮಯಂ ರುರುಮಯಂ ವಿವಿಧೋಗ್ರ ಜಂತುಮಯವು
ನಕುಲ ಮೂಷಕ ಸರೀಸೃಪಮಯಂ ದ್ವಿಪಮಯಂ
ಸಕಲ ಭೂವಿಷಮ ಸಂಕುಲಮಯಂ ಬಿಲಮಯಂ
ವೃಕ ಸೂಕರ ವ್ಯಾಘ್ರಚಯಮಯಂ ಭಯಮಯಂ ತಾನೆನಿಸಿ ಕಾಡಿರ್ದುದು ॥೮॥

ಇರುಳಂತೆ ಪಗಲಂತೆ ಮಖದಂತೆ ದಿವದಂತೆ
ವರ ಪಯೋನಿಧಿಯಂತೆ ಕೈಲಾಸಗಿರಿಯಂತೆ
ನಿರುತಮುಂ ಸೋಮಾರ್ಕ ಶಿಖಿ ಸಹಸ್ರಾಕ್ಷ ಹರಿನುತ ಶಿವಾವಾಸಮಾಗಿ
ಧುರದಂತೆ ಕೊಳದಂತೆ ಕಡಲಂತೆ ನಭದಂತೆ
ಶರ ಪುಂಡರೀಕ ವಿದ್ರುಮ ಋಕ್ಷಮಯದೊಳಿಡಿ
ದಿರುತಿರ್ದುದಾ ಮಹಾಟವಿ ಜಾನಕಿಯ ಕಣ್ಗೆ ಘೋರತರಮಾಗಿ ಮುಂದೆ ॥೯॥

ಅಟವಿಯ ಮಹಾಘೋರ ಗಹ್ವರಂ ಮುಂದೆ ದು
ರ್ಘಟಮಾಗೆ ನಡನಡುಗಿ ಭೀತಿಯಿಂ ಸೀತೆ ಸಂ
ಕಟದಿಂದೆ ರಾಮನಾಮಂಗಳಂ ಜಪಸುತೆಲೆ ಸೌಮಿತ್ರಿ ಕಾನನಮಿದು
ಅಟನಕಸದಳಮಪ್ಪುದಿಲ್ಲಿ ಪುಣ್ಯಾಶ್ರಮದ
ಜಟಿಗಳಂ ವಲ್ಕಲವನುಟ್ಟ ಮುನಿವಧುಗಳಂ
ವಟುಗಳಂ ಶ್ರುತಿಘೋಷ ಹೋಮಧೂಮಂಗಳಂ ಕಾಣೆನೆಂದಳವಳಿದಳು ॥೧೦॥

ಎಲ್ಲಿ ಮುನಿಪೋತ್ತಮರ ಪಾವನದ ವನದೆಡೆಗ
ಳೆಲ್ಲಿ ಸಿದ್ಧಾಶ್ರಮಂಗಳ ಮಂಗಳಸ್ಥಳಗ
ಳೆಲ್ಲಿ ಸುಹವಿಗಳ ಕಂಪೊಗೆದ ಪೊಗೆದಳೆದಗ್ನಿಹೋತ್ರದ ಕುಟೀರಂಗಳು
ಎಲ್ಲಿ ಪರಿಚಿತವಾದ ವಾದ ವೇದ ಧ್ವನಿಗ
ಳಲ್ಲಿಗುಯ್ಯದೆ ದಾರುದಾರುಣದ ಕಟ್ಟಡವಿ
ಗಿಲ್ಲಿಗೇಕೈತಂದೆ ತಂದೆ ಸೌಮಿತ್ರಿ ಹೇಳೆಂದು ಜಾನಕಿ ಸುಯ್ದಳು ॥೧೧॥

ಪಾವನಕೆ ಪಾವನಂ ಮಂಗಳಕೆ ಮಂಗಳಮ
ದಾವನ ಚರಿತ್ರ ನಾಮಂಗಳಾ ರಾಘವನೆ
ಜೀವೇಶನಾಗಿರಲ್ಕಾತನಂಪ್ರಿಯನಗಲ್ದೀಗ ನಾಂ ಬಂದ ಬಳಿಕ
ಈ ವನದೊಳಿನ್ನು ಪುಣ್ಯಾಶ್ರಮಂ ಗೋಚರಿಪು
ದೇ ವನಜದರಳನುಳಿದಾರಡಿಗೆ ಬೊಬ್ಬುಳಿಯ
ಪೂವಿನೊಳ್ಮಧುವುಂಟೆ ಸೌಮಿತ್ರಿ ಹೇಳೆಂದು ಸೀತೆ ಪೊದಕುಳಿಗೊಂಡಳು ॥೧೨॥

ನರನಾಥ ಕೇಳವನಿಸುತೆ ನುಡಿದ ಮಾತಿಗು
ತ್ತರವನಾಡದೆ ಮನದೊಳುರೆ ನೊಂದು ರಾಘವೇ
ಶ್ವರನೆಂದ ಕಷ್ಟಮಂ ಪೇಳ್ದಪೆನೊ ಮೇಣುಸಿರದಿರ್ದಪೆನೊ ನಿಷ್ಠುರದೊಳು
ತರಣಿಕುಲ ಸಾರ್ವಭೌಮನ ರಾಣಿಯಂ ಬನದೊ
ಳಿರಿಸಿ ಪೋದಪೆನೆಂತೊ ಪೋಗದಿರ್ದೊಡೆ ಸಹೋ
ದರನದೇನೆಂದಪನೊ ಹಾಯೆಂದು ಲಕ್ಷ್ಮಣಂ ಬೆಂದು ಬೇಗುದಿಗೊಂಡನು ॥೧೩॥

ಉಕ್ಕಿದುವು ಕಂಬನಿಗಳಧರೋಷ್ಠಮದಿರಿತಲ
ಗಿಕ್ಕಿ ತಿರುಪಿದವೊಲಾಯ್ತೊಡಲೊಳೆಡೆವರಿಯದುಸಿ
ರೊಕ್ಕುದುರೆ ಕಂಪಿಸಿದುದವಯವಂ ಕರಗಿತೆರ್ದೆ ಸ್ವೈರಣೆ ಸಮತೆಗೆಟ್ಟುದು
ಸಿಕ್ಕಿದುವು ಕಂಠದೊಳ್ಮಾತುಗಳ್ಸೆರೆಬಿಗಿದು
ಮಿಕ್ಕು ಮೀರುವ ಶೋಕದಿಂದೆ ಬೆಂಡಾಗಿ ಕಡು
ಗಕ್ಕಸದ ಕೆಲಸಮನುಸಿರಲರಿಯದವನೊಯ್ಯ ನವನಿಸುತೆಗಿಂತೆಂದನು ॥೧೪॥

ದೇವಿ ನಿನಗಿನ್ನೆಗಂ ಪೇಳ್ದುದಿಲ್ಲಪವಾದ
ಮಾವರಿಸೆ ನಿನ್ನನೊಲ್ಲದೆ ರಘುಕುಲೋದ್ಭವಂ
ಸೀವರಿಸಿ ಬಿಟ್ಟು ಕಾಂತಾರಕ್ಕೆ ಕಳುಹಿ ಬಾಯೆಂದೆನಗೆ ನೇಮಿಸಿದೊಡೆ
ಆ ವಿಭುವಿನಾಜ್ಞೆಯಂ ಮೀರಲರಿಯದೆ ನಿಮ್ಮ
ನೀ ವಿಪಿನಕೊಡಗೊಂಡುಬಂದೆನಿನ್ನೊಯ್ಯೊಯ್ಯ
ನಾವಲ್ಲಿಗಾದೊಡಂ ಪೋಗೆಂದು ಲಕ್ಷ್ಮಣಂ ಬಾಷ್ಪಲೋಚನನಾದನು ॥೧೫॥

ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ
ಮುರಿದಿಳೆಗೊರಗುವಂತೆ ಲಕ್ಷ್ಮಣನ ಮಾತು ಕಿವಿ
ದೆರೆಗೆ ಬೀಳದ ಮುನ್ನ ಹಮ್ಮೈಸಿ ಬಿದ್ದಳಂಗನೆ ಧರೆಗೆ ನಡನಡುಗುತೆ
ಮರೆದಳಂಗೋಪಾಂಗಮಂ ಬಳಿಕ ಸೌಮಿತ್ರಿ
ಮರುಗಿ ತಣ್ಣೀರ್ದಳಿದು ಪತ್ರದೊಳ್ಕೊಡೆವಿಡಿದು
ಸೆರಗಿಂದೆ ಬೀಸಿ ರಾಯನ ಸೇವೆ ಸಂದುದೇ ತನಗೆಂದು ರೋದಿಸಿದನು ॥೧೬॥

ಒಯ್ಯನರಗಳಿಗೆಯೊಳ್ಕಣ್ತೆರೆದು ದೈನ್ಯದಿಂ
ಸುಯ್ಯೆಲರನುರೆ ಸೂಸಿ ಸೌಮಿತ್ರಿಯಂ ನೋಡಿ
ಕೊಯ್ಯಲೊಲ್ಲದೆ ಕೊರಳನಿಂತು ತನ್ನಂ ಬಿಡಲ್ ಮಾಡಿದಪರಾಧಮುಂಟೆ
ಕಯ್ಯಾರೆ ಖಡ್ಗಮಂ ಕೊಟ್ಟು ತನ್ನರಸಿಯಂ
ಹೊಯ್ಯೆಂದು ಪೇಳದಡವಿಗೆ ಕಳುಹಿ ಬಾಯೆಂದ
ನಯ್ಯಯ್ಯೊ ರಾಘವಂ ಕಾರುಣ್ಯನಿಧಿಯೆಂದಳಲ್ದಳಂಭೋಜನೇತ್ರೆ ॥೧೭॥

ಬಿಟ್ಟನೆ ರಘುಶ್ರೇಷ್ಠನೆನ್ನನಕಟಕಟ ತಾಂ
ಮುಟ್ಟನೆ ನೆಗಳ್ದ ಬಾಳ್ಕೆಗೆ ಸಂಚಕಾರಮಂ
ಕೊಟ್ಟನೆ ಸುಮಿತ್ರಾತನುಜ ಕಟ್ಟರಣ್ಯದೊಳ್ಕಳುಹಿ ಬಾಯೆಂದು ನಿನಗೆ
ಕೊಟ್ಟನೆ ನಿರೂಪಮಂ ತಾನೆನ್ನ ಕಣ್ಬಟ್ಟೆ
ಗೆಟ್ಟನೆ ಮನೋವಲ್ಲಭನನಗಲ್ದಡವಿಯೊ
ಳ್ನೆಟ್ಟನೆ ಪಿಶಾಚದವೊಲೆಂತಿಹೆನೊ ಕೆಟ್ಟೆನಲ್ಲಾಯೆಂದೊರಲ್ದಳಬಲೆ ॥೧೮॥

ಎಂದು ಕೌಶಿಕಮುನಿಪನೊಡನೆ ಮಿಥಿಲಾಪುರಕ್ಕೆ
ಬಂದು ಹರಧನುವ ಮುರಿದೆನ್ನಂ ಮದುವೆಯಾದ
ನಂದುಮೊದಲಾಗಿ ರಮಿಸಿದನೆನ್ನೊಳಾನಗಲ್ದೊಡೆ ತಾಂ ನವೆದನಲ್ಲದೆ
ಒಂದಿದನೆ ಸೌಖ್ಯಮಂ ರಾಮನೆನಗಾಗಿ ಕಪಿ
ವೃಂದಮಂ ನೆರಪಿ ಕಡಲಂ ಕಟ್ಟಿ ದೈತ್ಯರಂ
ಕೊಂದಗ್ನಿಮುಖದೊಳ್ಪರೀಕ್ಷಿಸಿದನೆನ್ನೊಳಪರಾಧಮಂ ಕಾಣಿಸಿದನೆ ॥೧೯॥

ಕಲ್ಮುಳ್ಳಿಡಿದ ಕಾಡೊಳಂದೆನ್ನನುಪಚರಿಸಿ
ಪಲ್ಮೊರೆದು ಗರ್ಜಿಪ ವಿರಾಧನಂ ಮರ್ದಿಸಿದೆ
ಬಲ್ಮೆಯಿಂ ನಾಂ ಕಳುಹಿದೊಡೆ ಜನಸ್ಥಾನದಿಂ ಹೋದೆ ರಾಘವನ ಬಳಿಗೆ
ನಲ್ಮೆಯಂ ಮರೆದಪೆನೆ ಸೌಮಿತ್ರಿ ನೀನೆಲ್ಲ
ರೊಲ್ಮೆದುನನೆ ತನಗೆ ಕಾನನದೊಳೆನ್ನನಿಲಿ
ಸಲ್ಮನಂ ಬಂದಪುದೆ ತಂದೆ ನಿನಗೆಂದು ಕಂಬನಿಮಿಡಿದಳಂಬುಜಾಕ್ಷಿ ॥೨೦॥

ತೊಳೆಪ ನಾಸಿಕದ ನುಣ್ಗದಪುಗಳ ಪೊಳೆವ ಕಂ
ಗಳ ತುರುಗಿದೆವೆಯ ನಿಡುವುರ್ಬುಗಳ ಪೆರೆನೊಸಲ
ಥಳಥಳಿಪ ಮಕುಟದ ಕಿವಿಯ ಮಕರಕುಂಡಲದ ಕೋಮಲಿತ ಚುಬುಕಾಗ್ರದ
ಲಲಿತಾರುಣಾಧರದ ಮಿರುಗುವ ರದನ ಪಂಕ್ತಿ
ಗಳ ಸೂಸುವೆಳೆನಗೆಯ ಮೋಹನದ ಚೆಲ್ವಿನೊ
ಬ್ಬುಳಿಯೆನಿಪ ರಾಘವನ ಸಿರಿಮೊಗವನೆಂತು ನೋಡದೆ ಮಾಣ್ಬೆನಕಟೆಂದಳು ॥೨೧॥

ರಾಮನಂ ಭುವನಾಭಿರಾಮನಂ ಗುಣರತ್ನ
ಧಾಮನಂ ರಘುಕುಲೋದ್ಧಾಮನಂ ರೂಪಜಿತ
ಕಾಮನಂ ಸತ್ಕೀರ್ತಿಕಾಮನಂ ಶರಣಜನ ವಾರ್ಧಿಯಂ ಮಿಗೆ ಪೆರ್ಚಿಪ
ಸೋಮನಂ ಸೌಭಾಗ್ಯ ಸೋಮನಂ ಕುವಲಯ
ಶ್ಯಾಮನಂ ನಿಜತನುಶ್ಯಾಮನಂ ಘನಪುಣ್ಯ
ನಾಮನಂ ಸಂತತಂ ನಾ ಮನಂದಣಿಯೆ ರಮಿಸದೆ ಬಾಳ್ವೆನೆಂತೆಂದಳು ॥೨೨॥

ರಾಯ ಕೇಳಿಂತಿಂತು ರಾಘವೇಶ್ವರನ ರಮ
ಣೀಯ ಗುಣಮಾಲೆಯಂ ನೆನೆನೆನೆದು ಹಂಬಲಿಸು
ತಾಯತಾಂಬಕಿ ಮತ್ತೆ ಮೈಮರೆಯುತೆಚ್ಚರುತೆ ಪಾವಗಿದ ಪಸುಳೆವೊಲಿರೆ
ತಾಯೆ ನಿನ್ನಂ ಬಿಟ್ಟು ಪೋಗಲಾರೆಂ ಪೋಗ
ದೀಯವಸ್ಥೆಯೊಳಿರ್ದೊಡಣ್ಣನೇಗೈದಪನೊ
ಹಾಯೆಂದು ಲಕ್ಷ್ಮಣಂ ಶೋಕಗದ್ಗದನಾಗೆ ಸೀತೆ ಮಗುಳಿಂತೆಂದಳು ॥೨೩॥

ತಂದೆ ಲಕ್ಷ್ಮಣ ನಿನ್ನೊಳೆಂದೊಡಿನ್ನೇನಹುದು
ಹಿಂದಣ ಜನಸ್ಥಾನದಂದದೊಳ್ಪೋಗು ನೀಂ
ಕೊಂದುಕೊಂಬೊಡೆ ತನ್ನ ಬೆಂದೊಡಲೊಳಿದೆ ಬಸಿರ ದಂದುಗಂ ಕಾನನದೊಳು
ಬಂದುದಂ ಕಾಣ್ಬೆನಾನಿಂದು ಕೌಸಲೆಯಡಿಗೆ
ವಂದಿಸಿದೆನಪರಾಧಮೊಂದುಮಿಲ್ಲದೆ ತನ್ನ
ಕಂದನೆನ್ನಂ ತೊರೆದುದಂ ದೇವಿಗೊರೆವುದೆನುತಂದಳಲ್ದಳ್ಮೃಗಾಕ್ಷಿ ॥೨೪॥

ಏಕೆ ನಿಂದಿಹೆ ಪೋಗು ಸೌಮಿತ್ರಿ ಕೋಪಿಸನೆ
ಕಾಕುತ್ಥ್ಸನಿಲ್ಲಿ ತಳುವಿದೊಡೆ ನೆರವುಂಟು ತನ
ಗೀ ಕಾಡೊಳುಗ್ರಜಂತುಗಳಲ್ಲಿ ರಘುನಾಥನೇಕಾಕಿಯಾಗಿರ್ಪನು
ಲೋಕದರಸೇಗೈವೊಡಂ ತನ್ನ ಕಿಂಕರ
ರ್ಬೇಕು ಬೇಡೆಂದು ಪೇಳರೆ ಭರತ ಶತ್ರುಘ್ನ
ರೀಕೆಲಸಕೊಪ್ಪಿದರೆ ಹನುಮಂತನಿರ್ದಪನೆ ಪೇಳೆಂದಳಲ್ದಳಬಲೆ ॥೨೫॥

ಆರಿರ್ದೊಡೇಗೈವರಿದು ತನ್ನ ಮರುಳಾಟ
ಮಾ ರಾವಣನ ತಮ್ಮನೈಸಲೆ ವಿಭೀಷಣಂ
ಭೀರುಗಳನರಿದಪನೆ ಸೋದರಂಗುರೆ ಮುಳಿದ ಸುಗ್ರೀವನೆಂಬವಂಗೆ
ಕಾರುಣ್ಯಮಿರ್ದಪುದೆ ಮತ್ತುಳಿದ ಮಂತ್ರಿಗಳ
ದಾರುಂಟು ಪೇಳುವರ್ದೇವಂಗೆ ನೀನೊಪ್ಪಿ
ಘೋರಾಟವಿಗೆ ಕೊಂಡುಬಂದೆ ಕಳುಪುವೊಡಿನ್ನೊರಲ್ದೊಡೇನಹುದೆಂದಳು ॥೨೬॥

ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ
ಕಡುಪಾತಕಂಗೈದು ಪೆಣ್ಣಾಗಿ ಸಂಭವಿಸಿ
ದೊಡಲಂ ಪೊರೆವುದೆನ್ನೊಳಪರಾಧಮುಂಟು ಸಾಕಿಲ್ಲಿರಲ್ಬೇಡ ನೀನು
ನಡೆ ಪೋಗು ನಿಲ್ಲದಿರ್ನಿನಗೆ ಮಾರ್ಗದೊಳಾಗ
ಲಡಿಗಡಿಗೆ ಸುಖಮೆಂದು ಸೀತೆ ಕಂಬನಿಗಳಂ
ಮಿಡಿದಾರ್ತೆಯಾಗಿರಲ್ಸೌಮಿತ್ರಿ ನುಡಿದನಾ ವಿಪಿನದಭಿಮಾನಿಗಳ್ಗೆ ॥೨೭॥

ಎಲೆ ವನಸ್ಥಳಗಳಿರ ವೃಕ್ಷಂಗಳಿರ ಮೃಗಂ
ಗಳಿರ ಕ್ರಿಮಿಕೀಟಂಗಳಿರ ಪಕ್ಷಿಗಳಿರ ಲತೆ
ಗಳಿರ ತೃಣಗುಲ್ಮಂಗಳಿರ ಪಂಚಭೂತಂಗಳಿರ ದೆಸೆಗಳಿರ ಕಾವುದು
ಎಲೆ ಧರ್ಮದೇವತೆ ಜಗಜ್ಜನನಿ ಜಾಹ್ನವಿಯೆ
ಸಲಹಿಕೊಳ್ವುದು ತನ್ನ ಮಾತೆಯಂ ಜಾನಕಿಯ
ನೆಲೆತಾಯೆ ಭೂದೇವಿ ನಿನ್ನ ಮಗಳಿಹಳೆಂದು ಸೌಮಿತ್ರಿ ಕೈಮುಗಿದನು ॥೨೮॥

ಮಾಳ್ಕೆಯಿನ್ನಾವುದಿಬ್ಬಗಿಯಾಗಿ ತನ್ನೊಡಲ
ಸೀಳ್ಕೆಡಹಬೇಡನೆ ಧರಿತ್ರಿಯೊಳ್ನಿಷ್ಠುರದ
ಬಾಳ್ಕೆಯಂ ಸುಡಲೆನುತೆ ದೇವಿಯಂ ಬಲವಂದು ಲಕ್ಷ್ಮಣಂ ನಮಿಸಿ ಬಳಿಕ
ಬೀಳ್ಕೊಂಡು ನಡೆಯಲ್ಕೆ ಹಿಂದುಹಿಂದಕೆ ಮನಂ
ನೀಳ್ಕುಳಿಗೊಳಲ್ಕೆಂದುಮಗಲದಣ್ಣನ ಕಡೆಗೆ
ದೂಳ್ಕಾಯದೊಳ್ಪತ್ತಿ ಪೊರಳ್ವ ಸೀತೆಯ ಕಡೆಗೆ ತೂಗುಯ್ಯಲೆವೊಲಾದನು ॥೨೯॥

ನಡೆಗೊಳಲ್ಕಂಡು ಬಾಯಾರ್ವಳಂ ಚೀರ್ವಳಂ
ಕಡಲಿಡುವ ಕಂಬನಿಯೊಳಾಳ್ವಳಂ ಬೀಳ್ವಳಂ
ಪುಡಿಯೊಳ್ಪೊರಳ್ದು ಬಸವಳಿವಳಂ ಸುಳಿವಳಂ ಭರತಾವರಜನಗಲ್ದು
ಅಡಿಗಡಿಗೆ ತಿರುತಿರುಗಿ ನೋಡುವಂ ಬಾಡುವಂ
ಬಿಡದೆ ಬಿಸುಸುಯ್ದು ಬೆಂಡಾದಪಂ ಪೋದಪಂ
ಪೊಡೆಮರಳ್ವಂ ನಿಲ್ವನಳಲುವಂ ಬಳಲುವಂ ಬಟ್ಟೆಯೊಳ್ದಿಟ್ಟಿಗೆಟ್ಟು ॥೩೦॥

ತಾಯನೆಳೆಗರು ಬಿಚ್ಚುವಂತೊಯ್ಯನೊಯ್ಯನ
ತ್ಯಾಯಾಸದಿಂದಗಲ್ದಮರನದಿಯಂ ದಾಂಟಿ
ರಾಯ ಕೇಳ್ದುಃಖಾರ್ತನಾಗಿ ಸೌಮಿತ್ರಿ ಸಾಗಿದನತ್ತಲಿವಳಿತ್ತಲು
ಬಾಯಾರಿ ಕಂಗೆಟ್ಟು ಲಕ್ಷ್ಮಣನ ತಲೆ ಮಸುಳ
ಲಾಯೆಂದೊರಲ್ದು ಭಯಶೋಕದಿಂದಸವಳಿದು
ಕಾಯಮಂ ಮರೆದವನಿಗೊರಗಿದಳ್ಮೂಲಮಂ ಕೊಯ್ದೆಳೆಯ ಬಳ್ಳಿಯಂತೆ /೩೧/

ಅರಸ ಕೇಳಲ್ಲಿರ್ದ ಪಕ್ಷಿ ಮೃಗ ಜಂತುಗ
ಳ್ಧರಣಿಸುತೆಯಂ ಬಳಸಿ ನಿಂದು ಮೈಯುಡಗಿ ಜೋ
ಲ್ದಿರದೆ ಕಂಬನಿಗರೆದು ನಿಜವೈರಮಂ ಮರೆದು ಪುಲ್ಮೇವುಗಳನೆ ತೊರೆದು
ಕೊರಗುತಿರ್ದುವು ಕೂಡೆ ವೃಕ್ಷಲತೆಗಳ್ಬಾಡಿ
ಸೊರಗುತಿರ್ದುವು ಶೋಕಭಾರದಿಂ ಕಲ್ಗಳುಂ
ಕರಗುತಿರ್ದುವು ಜಗದೊಳುತ್ತಮರ ಹಾನಿಯಂ ಕಂಡು ಸೈರಿಸುವರುಂಟೆ ॥೩೨॥

ಮೊರೆಯಲೊಲ್ಲವು ತುಂಬಿ ಕುಣಿಯಲೊಲ್ಲವು ನವಿ
ಲ್ಬೆರೆಯಲೊಲ್ಲವು ಕೋಕಿ ನಡೆಯಲೊಲ್ಲವು ಹಂಸೆ
ಕರೆಯಲೊಲ್ಲವು ಪಿಕಂ ನುಡಿಯಲೊಲ್ಲವು ಶುಕಂ ನಲಿಯಲೊಲ್ಲವು ಚಕೋರ
ನೆರೆಯಲೊಲ್ಲವು ಹರಿಣಿಯೊಲೆಯಲೊಲ್ಲವು ಕರಿಣಿ
ಪೊರೆಯಲೊಲ್ಲವು ಚಮರಿ ಮೆರೆಯಲೊಲ್ಲವು ಸಿಂಗ
ಮರರೆ ಜಾನಕಿಯ ಶೋಕಂ ತಮ್ಮದೆಂದಾಕೆಯಂಗಮಂ ನೋಡಿನೋಡಿ ॥೩೩॥

ಬೀಸಿದುವು ಬಾಲದೊಳ್ಚಮರಿಗಳ್ಚಮರಮಂ
ಪಾಸಿದುವು ಕರಿಗಳೆಳೆದಳಿರ ಮೃದುತಲ್ಪಮಂ
ಸೂಸಿದುವು ಸಾರಸಂಗಳ್ತಮ್ಮ ಗರಿಗಳಂ ತೋದು ತಂದಂಬುಗಳನು
ಆ ಸಿರಿಮೊಗಕ್ಕೆ ಬಿಸಿಲಾಗದಂತಾಗಸದೊ
ಳೋಸರಿಸದಂಚೆಗಳೆರಂಕೆಯನಗಲ್ಚಿ ನೆಳ
ಲಾಸೆಗೈದುವು ರಾಘವನ ರಾಣಿ ದುಃಖಸಂತಪ್ತೆಯಾಗಿರುತಿರಲ್ಕೆ ॥೩೪॥

ಸುರನದಿಯ ತೆರೆತೆರೆಯ ನಡುನಡುವೆ ಬಿದ್ದೆದ್ದು
ಬರಲಾರದಿರ್ದೊಡಂ ಮತ್ತೆ ಗಂಗೆಯೊಳಲ
ರ್ದರವಿಂದಗಂಧದತಿಭಾರಮಂ ಪೊರಲಾರದಿರ್ದೊಡಂ ಧರಣಿಸುತೆಯ
ಪರಿತಾಪಮಂ ತವಿಸದಿರಬಾರದೆಂದು ತರ
ಹರದೊಳೊಯ್ಯೊಯ್ಯನೈತಂದು ಬೀಸಿತು ಸುಖ
ಸ್ಪರುಶವಾತಂ ಜಗದೊಳುಪಕಾರಿಯಾದವಂ ತನ್ನ ನೋವಂ ನೋಳ್ಪನೆ ॥೩೫॥

ಪೃಥಿವಿಯಾತ್ಮಜೆ ಬಳಿಕ ಚೇತರಿಸಿ ತನಗಿನ್ನು
ಪಥಮಾವುದೆಂದು ದೆಸೆದೆಸೆಗಳಂ ನೋಡಿ ಸಲೆ
ಶಿಥಿಲಮಾದವಯವದ ದೂಳಿಡಿದ ಮೈಯ ಬಿಡುಮುಡಿಯ ವಿಕೃತಿಯನೆಣಿಸದೆ
ಮಿಥಿಲೇಂದ್ರವಂಶದೊಳ್ಜನಿಸಿ ರಘುಕುಲದ ದಶ
ರಥ ನೃಪನ ಸೊಸೆಯಾಗಿ ತನಗೆ ಕಟ್ಟಡವಿಯೊ
ಳ್ವ್ಯಥಿಸುವಂತಾಯ್ತಕಟ ವಿಧಿಯೆಂದು ಹಲುಬಿದಳ್ಕಲ್ಮರಂ ಕರಗುವಂತೆ ॥೩೬॥

ಕೇಣಮಂ ಬಿಟ್ಟಾತ್ಮಘಾತಕದೊಳೀ ಕ್ಷಣಂ
ಪ್ರಾಣಮಂ ತೊರೆದಪೆನೆ ಬಂದಪುದು ಗರ್ಭದಿಂ
ಭ್ರೂಣಹತ್ಯಾದೋಷಮೇಗೈವೆನಾರ್ಗೊರೆವೆನೆಂದೊಯ್ಯನೆದ್ದು ಬಳಿಕ
ಏಣಾಕ್ಷಿ ನಡೆದಳಡವಿಯೊಳುಪಲ ಕಂಟಕ
ಶ್ರೇಣಿಗಳ್ನೋಂಕಿ ಮೆಲ್ಲಡಿಗಳಿಂ ಬಸಿವ ನವ
ಶೋಣಿತಂ ನೆಲದೊಳ್ಪೊನಲ್ವರಿಯಲರಸ ಕೇಳ್ವೆಣ್ಣೊಡಲ್ವಿಡಿಯಬಹುದೆ ॥೩೭।

ಅನ್ನೆಗಂ ಮಖಕೆ ಯೂಪವನರಸುತಾ ಬನಕೆ
ಸನ್ನುತ ತಪೋಧನಂ ವಾಲ್ಮೀಕಿ ಮುನಿವರಂ
ತನ್ನ ಶಿಷ್ಯರ್ವೆರಸಿ ನಡೆತಂದು ಕಾಡೊಳೊರ್ವಳೆ ಪುಗಲ್ದೆಸೆಗಾಣದೆ
ಬನ್ನದಿಂ ಬಗೆಗೆಟ್ಟು ಪಾಡಳಿದು ಗ್ರೀಷ್ಮಋತು
ವಿಂ ನವೆದ ಕಾಂತಾರದಧಿದೇವಿ ತಾನೆನ
ಲ್ಸನ್ನಗದ್ಗದಕಂಠಿಯಾಗಿ ರೋದಿಸುತಿರ್ದ ವೈದೇಹಿಯಂ ಕಂಡನು ॥೩೮॥

ಆರಿವಳಿದೇತಕಿರ್ದಪಳೀವನಾಂತರದೊ
ಳಾರೈವೆನಿದನೆಂದು ನಡೆತಂದು ಕರುಣದಿಂ
ದಾ ರುಷಿ ನುಡಿಸಿದನೆಲೆ ತಾಯೆ ನೀನಾವಳೌ ಕಂಡ ಕುರುಪಾಗಿರ್ಪುದು
ಘೋರತರ ಗಹನಕೊರ್ವಳೆ ಬಂದೆಯೆಂತಕಟ
ಭೀರು ಹೇಳೌ ಬೆದರಬೇಡ ವಾಲ್ಮೀಕಿ ನಾಂ
ಭೂರಿಶೋಕಾರ್ತರಾಗಿರ್ದರಂ ಕಂಡು ಸುಮ್ಮನೆ ಪೋಪನಲ್ಲೆಂದನು

ಹರುಷಮೊತ್ತರಿಸಿದುದು ಶೋಕವಿಮ್ಮಡಿಸಿದುದು
ಬೆರಸಿದುದು ಲಜ್ಜೆ ಭೂಮಿಜೆಗಂದು ಗದ್ಗದ
ಸ್ವರದಿಂದೆ ಸೀತೆ ತಾಂ ಲೋಕಾಪವಾದಕಪರಾಧಿಯಲ್ಲದ ತನ್ನನು
ತರಣಿಕುಲಸಂಭವಂ ಬಿಟ್ಟನೆಂದೀ ವನದೊ
ಳಿರಿಸಿ ಪೋದಂ ಸುಮಿತ್ರಾತ್ಮಜಂ ಜೀವಮಂ
ಪೊರೆಯವೇಳ್ವುದೆ ಗರ್ಭಮೊಡಲೊಳಿಹುದೇಗೈವೆನೆಂದೆರಗಿದಳ್ಮುನಿಪದದೊಳು ॥೪೦॥

ದೇವಿ ಬಿಡು ಶೋಕಮಂ ಪುತ್ರಯುಗಮಂ ಪಡೆವೆ
ಭಾವಿಸದಿರನ್ನು ಸಂದೇಹಮಂ ಜನಕಂಗೆ
ನಾವನ್ಯರಲ್ಲ ನಮ್ಮಾಶ್ರಮಕೆ ಬಂದು ನೀಂ ಸುಖದೊಳಿರ್ದೊಡೆ ನಿನ್ನನು
ಆವಾವ ಬಯಕೆಯುಂಟೆಲ್ಲಮಂ ಸಲಿಸಿ ತಾ
ನೋವಿಕೊಂಡಿರ್ಪೆನಂಜದಿರೆಂದು ಸಂತೈಸಿ
ರಾವಣಾರಿಯ ರಾಣಿಯಂ ನಿಜತಪೋವನಕೆ ವಾಲ್ಮೀಕಿ ಕರೆತಂದನು ॥೪೧॥

❖

ಬರಹಗಾರ

ಹೆಸರು : ಸಿ.ಪಿ.ನಾಗರಾಜ (೧೯೪೫)

ತಾಯಿ : ಲಕ್ಷ್ಮೀದೇವಮ್ಮ, ಮದ್ದೂರು, ಮಂಡ್ಯ ಜಿಲ್ಲೆ.

ತಂದೆ : ಪುಟ್ಟೇಗೌಡ, ಚೆಕ್ಕೆರೆ, ಚೆನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ಓದು : ಎಂ.ಎ., ಪಿಎಚ್.ಡಿ.,

ಕೆಲಸ : ಕನ್ನಡ ಅಧ್ಯಾಪಕ

೧೯೭೧–೭೨ ಅರ್ಜುನಪುರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ.

೧೯೭೨–೨೦೦೩ ಭಾರತಿ ಕಾಲೇಜು, ಕಾಳಮುದ್ದನದೊಡ್ಡಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

೨೦೦೬–೨೦೨೧ ತೇಜಸ್ವಿ ಸ್ನಾತಕೋತ್ತರ ಕೇಂದ್ರ, ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.

ಬರಹ

೧. ಮುದ್ರಿತ ಪುಸ್ತಕಗಳು

ನಾಟಕ:

ಭಾಗೀರಥಿ	ಅಂಬೆ	ಹಾವು
ಅಂಗಿಬಟ್ಟೆ	ಒಂದು ರೂಪಾಯಿ	ಕಳ್ಳರಿದ್ದಾರೆ ಎಚ್ಚರಿಕೆ
ಹೆಣದ ಹಣ	ಮೂರು ಸಾಮಾಜಿಕ ನಾಟಕಗಳು	

ಗದ್ಯ:

ಕರಿಯನ ಪುರಾಣ	ಕನಕನ ಅವ್ವ
ಹಳ್ಳಿಗಾಡಿನ ರೂವಾರಿ	ಡಾ.ಬಂದೀಗೌಡ
ಆಣೆ ಪ್ರಮಾಣಗಳು	ಬಯ್ಗುಳ
ಸರ್ವಜ್ಞವಚನಗಳ ಓದು	ಅಲ್ಲಮ ವಚನಗಳ ಓದು
ಶಿವಶರಣೆಯರ ವಚನಗಳ ಓದು	ಶಿವಶರಣರ ವಚನಗಳ ಓದು
ಬಸವಣ್ಣ ವಚನಗಳ ಓದು	ಮುದ್ದೆಗಂಟು
ಶಿವಶರಣಶರಣೆಯರ ವಚನಗಳ ಓದು	

ಪಂಪ ಭಾರತ ಓದು		ಸರ್ವಜ್ಞ ಮತ್ತು ಅಲ್ಲಮ ವಚನಗಳ ಓದು
ವಚನದಿಂದ ಆಯ್ದ ಸಾಲುಗಳ ಓದು
ಕುವೆಂಪು ಕವನಗಳ ಓದು		ಕನ್ನಡ ಬಯ್ಗುಳ ಓದು
ಬಸವಯುಗದ ವಚನಕಾರರು	ಪಂಪ ಭಾರತ ಪ್ರಸಂಗ
ಕನಕದಾಸರ ರಾಮಧಾನ್ಯ ಪ್ರಸಂಗ ಓದು
ಬ್ರೆಕ್ಟ್ ಕವನಗಳ ಓದು
ರವೀಂದ್ರನಾಥ ಠಾಕೂರ್ ಕವನಗಳ ಓದು
ಸೀತಾ ಪರಿತ್ಯಾಗ ಪ್ರಸಂಗ

೨. ಡಿಜಿಟಲ್ ಪುಸ್ತಕಗಳು

೧. ಕನ್ನಡ ಸಾಹಿತ್ಯ ಸಂಚಯ :
https://cpnagaraj.sanchaya.net
೨. ಮೈಲಾಂಗ್–ಕನ್ನಡ ಇ ಬುಕ್ಸ್ – ಆಡಿಯೋ ಬುಕ್ಸ್
https://mylang.in
೩. ಋತುಮಾನ
https://ruthumana.com

3. C P Nagaraj-You Tube

Play lists
ಸರ್ವಜ್ಞನ ವಚನಗಳ ಓದು–೧೩ ಎಪಿಸೋಡ್
ಅಲ್ಲಮನ ವಚನಗಳ ಓದು– ೩೬ ಎಪಿಸೋಡ್
ಬಸವಣ್ಣನ ವಚನಗಳ ಓದು–೨೬ ಎಪಿಸೋಡ್
ಶಿವಶರಣಶರಣೆಯರ ವಚನಗಳ ಓದು–೫೨ ಎಪಿಸೋಡ್
ವಚನದಿಂದ ಆಯ್ದ ಸಾಲುಗಳ ಓದು–೧೬೨ ಎಪಿಸೋಡ್
ಮುದ್ದೆಗಂಟು–೬೦ ಎಪಿಸೋಡ್
ಹಳ್ಳಿಗಾಡಿನ ರೂವಾರಿ ಜಿ.ಮಾದೇಗೌಡ–೧೫ ಎಪಿಸೋಡ್
ಜನಪರ ಚೇತನ ಡಾ.ಬಂದೀಗೌಡ–೧೫ ಎಪಿಸೋಡ್
ಕುವೆಂಪು ಕವನಗಳ ಓದು–೧೩ ಎಪಿಸೋಡ್

ಪಂಪ ಭಾರತ ಪ್ರಸಂಗಗಳು – ೯ ಎಪಿಸೋಡ್

ಆಣೆ ಪ್ರಮಾಣಗಳ ಓದು–೧೦

ಕನಕದಾಸರ ರಾಮಧಾನ್ಯ ಪ್ರಸಂಗ–೧

ಲಕ್ಷ್ಮೀಶ ಕವಿಯ ಜೈಮಿನಿ ಭಾರತದ ಸೀತಾ ಪರಿತ್ಯಾಗ ಪ್ರಸಂಗ–೬

ಡಿ.ಎನ್. ಶಂಕರ ಭಟ್ – ಭಾಷೆಯ ಬಗೆಗೆ ನೀವೇನು ಬಲ್ಲಿರಿ–೪೧

ಸಿ.ಎಚ್. ರಾಜಶೇಖರ್– ಸಮಗ್ರ ಬುದ್ಧ ಸಾಹಿತ್ಯ ಮಾಲೆ–೩೦

ಕೆ.ವಿ. ನಾರಾಯಣ– ನುಡಿಯರಿಮೆ ಬರಹಗಳು–೨೬

ಕೆ.ವಿ. ನಾರಾಯಣ– ಕನ್ನಡ ಜಗತ್ತು : ಅರ್ಧ ಶತಮಾನ – ೯೧

ದೇವನೂರು ಮಹಾದೇವ – ಎದೆಗೆ ಬಿದ್ದ ಅಕ್ಷರ–೨೯

ಬಿ.ವಿ. ವೀರಭದ್ರಪ್ಪ – ವೇದಗಳಲ್ಲಿ ಜನಸಾಮಾನ್ಯರು–೪೦

ಗೂಗಿ ವಾ ಥಿಯಾಂಗೊ ವೈಚಾರಿಕ ಬರಹಗಳು–೧೩
(ಅನುವಾದ : ಎಚ್.ಎಸ್. ನಾಗಭೂಷಣ)

ಮುರಳಿಧರ ಜಗತಾಪ – ಸಮಾಜ ಸುಧಾರಕ ಮಹಾತ್ಮ ಫುಲೆ – ೨೭
(ಅನುವಾದ : ಅಕಿಂಚನ)

ಬರ್ಟ್ರೆಂಡ್ ರಸೆಲ್ – ಸುಖ ಸಾಧನೆ – ೬೪
(ಅನು : ಯೋಗನರಸಿಂಹಮ್)

ರೈನರ್ ಮಾರಿಯಾ ರಿಲ್ಕ್ – ಯುವಕವಿಗೆ ಬರೆದ ಪತ್ರಗಳು – ೧೦
(ಅನು : ಓ.ಎಲ್. ನಾಗಭೂಷಣ ಸ್ವಾಮಿ)

ವಿಳಾಸ : ಸಿ.ಪಿ.ನಾಗರಾಜ, 75, 'ಎ' ಬ್ಲಾಕ್, 5ನೇ ಕ್ರಾಸ್, ಕ್ರಿಷ್ಣ ಗಾರ್ಡನ್, ಆರ್.ವಿ. ಕಾಲೇಜು ಅಂಚೆ, ಬೆಂಗಳೂರು–560 059. ಮೊ : 9986347521

e-mail : ngy7777@gmail.com

ಮಹಾಭಾರತದೊಳಗೊಂದು ರಾಮಾಯಣ ಹೌದು. ರಾಮಾಯಣವು ಮಹಾಭಾರತಕ್ಕಿಂತ ಪ್ರಾಚೀನ. ಮಹಾಭಾರತದ ಅನೇಕ ಉಪಾಖ್ಯಾನಗಳಲ್ಲಿ ರಾಮಾಯಣವೂ ಒಂದು. ಆದರೆ ಲಕ್ಷ್ಮೀಶನ ಭಾರತದ ಒಳಗೆ ರಾಮಾಯಣದ ಸೀತಾ ಪರಿತ್ಯಾಗದ ಸೊಗಸೇ ಬೇರೆ. ಇಡೀ ಕಾವ್ಯದಲ್ಲಿ ಇದು ಶ್ರೇಷ್ಠಮಟ್ಟದ ಕಾವ್ಯ ಭಾಗ ಎಂದು ದಾಖಲಾಗಿದೆ.

ಕುರುಕ್ಷೇತ್ರ ಯುದ್ಧ ಮುಗಿದ ನಂತರ ಬಂಧು ಬಾಂಧವರ ಹತ್ಯೆಯಿಂದ ನೊಂದ ಧರ್ಮರಾಯನು ಆ ಪಾಪವನ್ನು ಕಳೆದುಕೊಳ್ಳಲು ಅಶ್ವಮೇಧ ಯಾಗವನ್ನು ಮಾಡುವಂತೆ ಋತ್ವಿಜರು ಸೂಚಿಸುತ್ತಾರೆ. ಯಾಗದ ಕುದುರೆಯ ಜೊತೆಯಲ್ಲಿ ಹೊರಟ ಅರ್ಜುನನನ್ನು ಬಬ್ರುವಾಹನ ತಡೆದಾಗ, ಹಿಂದೆ ಕೂಡ ಈ ರೀತಿಯಲ್ಲಿ ತಂದೆ ಮಕ್ಕಳಿಗೆ ಯುದ್ಧವಾಗಿತ್ತು ಎಂದುಬಿಡುತ್ತಾರೆ, ಕತೆ ಹೇಳುತ್ತಿದ್ದ ವೈಶಂಪಾಯನರು. ಆಗ ಜನಮೇಜಯನು “ ಅದೇನು ಕತೆ ” ಎಂದು ಒತ್ತಾಯಿಸಿದಾಗ ಬರುವಂಥದು ರಾಮಾಯಣದ ಸೀತಾ ಪರಿತ್ಯಾಗ ಮತ್ತು ಲವಕುಶರು ರಾಮನೊಂದಿಗೆ ಹೋರಾಡಿದ ಕತೆ.

ವ್ಯಾಸರ ನಾಲ್ವರು ಶಿಷ್ಯರಲ್ಲಿ ಒಬ್ಬನಾದ ಜೈಮಿನಿ ಮಹರ್ಷಿ ಬರೆದ ಜೈಮಿನಿ ಭಾರತವನ್ನು ಅದೇ ಹೆಸರಿನಲ್ಲಿ ವಾರ್ಧಕ ಷಟ್ಪದಿಯಲ್ಲಿ ಕನ್ನಡಕ್ಕೆ ತರುತ್ತಾನೆ, ಲಕ್ಷ್ಮೀಶ. ಹಿಂದೆ ವರ ಪರೀಕ್ಷೆಯ ಸಮಯದಲ್ಲಿ (ವಧು ಪರೀಕ್ಷೆ ಅಲ್ಲ) ಹುಡುಗನಿಗೆ ಗದುಗಿನ ಕುಮಾರವ್ಯಾಸ ಭಾರತ...ಲಕ್ಷ್ಮೀಶನ ಜೈಮಿನಿ ಭಾರತ ಪಾಠವಾಗಿದೆಯೇ ಎಂದು ಕೇಳಲಾಗುತ್ತಿತ್ತಂತೆ. “ ಆಗಿದೆ ” ಎಂದರೆ ಹುಡುಗ ಪಾಸು! ಅಷ್ಟು ಮಹತ್ವದ ಕಾವ್ಯಗಳು ಅವು. ಉಪಮಾಲೋಲನೆಂದೇ ಹೆಸರಾದ ಲಕ್ಷ್ಮೀಶನಿಗೆ ವಾರ್ಧಕ ಷಟ್ಪದಿ ಚೆನ್ನಾಗಿ ಒಲಿದಿದೆ.

ವಾಲ್ಮೀಕಿ ಬರೆದ ರಾಮಾಯಣದ ಉತ್ತರಕಾಂಡದಲ್ಲಿ ದುಃಖಾಂತವಾದ ಸೀತಾ ಪರಿತ್ಯಾಗದ ಕತೆಯನ್ನು ಸುಖಾಂತ ಮಾಡಿದವರು ಭವಭೂತಿ (ಉತ್ತರರಾಮ ಚರಿತ), ಮುದ್ದಣ (ರಾಮಾಶ್ವಮೇಧ) ಮತ್ತು ಲಕ್ಷ್ಮೀಶ...ಈ ಮೂವರು ಮಾತ್ರ.

ಸಿ.ಪಿ.ನಾಗರಾಜ ಅವರು ಲಕ್ಷ್ಮೀಶ ಕವಿಯ ಜೈಮಿನಿ ಭಾರತ ಕಾವ್ಯದಲ್ಲಿ ನಿರೂಪಣೆಗೊಂಡಿರುವ ಸೀತಾ ಪರಿತ್ಯಾಗ ಸನ್ನಿವೇಶದ ಕಾವ್ಯರಚನೆಯನ್ನು ಪದ ವಿಭಾಗ ಮಾಡಿ ನಾಟಕವಾಗಿ ಮಾಡಿದ್ದಾರೆ. ಈ ಪರಂಪರೆ ಕನ್ನಡಕ್ಕೆ ಹೊಸದೇನಲ್ಲ. ಬಿ.ಎಂ.ಶ್ರೀ ಅವರು ರನ್ನ ಕವಿಯ ಗದಾಯುದ್ಧವನ್ನೂ, ಎಸ್.ವಿ.ರಂಗಣ್ಣನವರು ರಾಘವಾಂಕ ಕವಿಯ ಹರಿಶ್ಚಂದ್ರ ಕಾವ್ಯವನ್ನೂ ಹೀಗೆ ಮಾಡಿದ್ದರು. ಇದೇ ದಾರಿಯಲ್ಲಿ ಸಾಗಿರುವ ಸಿ.ಪಿ.ನಾಗರಾಜ ಅವರಿಗೆ ಒಳ್ಳೆಯದಾಗಲಿ.

ಎಸ್.ವಿ.ಪ್ರಭಾವತಿ

ನಾಸು ಸ್ಮಾರಕ ಪ್ರಕಾಶನ,
ಬೆಂಗಳೂರು.

ರೂ. 130/-